ಜಯಸತ್ಯಪ್ರಮೋದನಿಧಿಯ
ಮುಖಪತ್ರಿಕೆ

# ಶ್ರೀಸುಧಾ

ಜೂನ್/2020/ಮಾಸಪತ್ರಿಕೆ



ಬಲಿಯ ಮೆಟ್ಟಿ ಭಾಗೀರಥಿಯ ಪಡೆದ ಪಾದವ
ಜಲಜಾಸನನ ಅಭೀಷ್ಟವೆಲ್ಲ ಸಲಿಸುವ ಪಾದವ




ದೇಶಾದ್ಯಂತ ವಿಧಿಸಲಾದ ಪ್ರತಿಬಂಧಾಜ್ಞೆಯ ಸಂದರ್ಭದಲ್ಲಿ ಸಂಕಷ್ಟಕ್ಕೆ ಸಿಲುಕಿದವರಿಗೆ
ಶ್ರೀಮಠ ಹಾಗೂ ವಿಶ್ವಮಧ್ವಮಹಾಪರಿಷತ್ತಿನ ವಿವಿಧ ಶಾಖೆಗಳಿಂದ ಸಹಾಯ ಹಸ್ತ.

# ಶ್ರೀಸುಧಾ

SRISUDHA -- KANNADA --MONTHLY



-ಃ ಸಂಸ್ಥಾಪಕರು ಃ-

ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ ಉತ್ತರಾದಿಮಠಾಧೀಶರಾದ
ಪರಮಪೂಜ್ಯ ಶ್ರೀ ಶ್ರೀ 1008 ಶ್ರೀಸತ್ಯಪ್ರಮೋದತೀರ್ಥಶ್ರೀಪಾದಂಗಳವರು

-ಃ ಪ್ರಧಾನ ಸಂರಕ್ಷಕರು ಃ-

ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ ಉತ್ತರಾದಿಮಠಾಧೀಶರಾದ
ಪರಮಪೂಜ್ಯ ಶ್ರೀ ಶ್ರೀ 1008 ಶ್ರೀಸತ್ಯಾತ್ಮತೀರ್ಥಶ್ರೀಪಾದಂಗಳವರು


ಶ್ರೀಮತ್ಸತ್ಯಾತ್ಮತೀರ್ಥಾನಾಂ ಕರುಣಾರಸಪೋಷಿತಾ ।
ಸೇವ್ಯತಾಂ ರಸಿಕೈರ್ಮಾಧ್ವೈಃ ಶ್ರೀಸುಧಾಮಾಸಪತ್ರಿಕಾ ॥


| | | |
|---|---|---|
| ಶಾರ್ವರೀ ನಾಮಸಂವತ್ಸರ | ಚೈತ್ರ ,ವೈಶಾಖ, ಜ್ಯೇಷ್ಠ ಮಾಸ | ಜೂನ್ 2020 |



| ★ ಶ್ರೀಸುಧಾ ಸಂಪಾದಕೀಯ ಸಲಹಾ ಮಂಡಳಿ ★ | |
|---|---|
| ಪಂ. ರಾಮಾಚಾರ್ಯ ಕಟ್ಟಿ | ಪಂ. ರಂಗಾಚಾರ್ಯ ಗುತ್ತಲ |
| ಪಂ. ವಿದ್ಯಾಸಿಂಹಾಚಾರ್ಯ ಮಾಹುಲಿ | ಪಂ. ಮಧ್ವಾಚಾರ್ಯ ಮೊಖಾಶಿ |
| ಡಾ. ಪ್ರಭಂಜನಾಚಾರ್ಯ ವ್ಯಾಸನಕೇರಿ | ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ |

ಗೌರವ ಸಂಪಾದಕರು ಃ ಪಂ. ಜಯತೀರ್ಥಾಚಾರ್ಯ ಮಳಗಿ

**ಸಂಪಾದಕರು ಃ ಪಂ. ವಿದ್ಯಾಧೀಶಾಚಾರ್ಯ ಗುತ್ತಲ**

ನಿರ್ವಹಣೆ ಃ ಪಂ. ಕಾಂತೇಶಾಚಾರ್ಯ, ಪಂ.ಮಹಿದಾಸಾಚಾರ್ಯ, ಶ್ರೀ ಎ.ಬಿ.ಶ್ಯಾಮಾಚಾರ್ಯ

| ★ ಜಯಸತ್ಯಪ್ರಮೋದನಿಧಿಯ ಧರ್ಮದರ್ಶಿಮಂಡಲಿ ★ | |
|---|---|
| ಡಾ॥ ಎಂ.ಎಂ.ಜೋಶಿ, ಅಧ್ಯಕ್ಷರು | ಶ್ರೀ. ವೆಂಕಟರಾವ್, ಕಾರ್ಯದರ್ಶಿ |
| ಶ್ರೀ. ಎನ್.ಬಿ.ಹೆಚ್.ಕುಲಕರ್ಣಿ | ಶ್ರೀ. ಟಿ.ಎಸ್.ರಾಘವೇಂದ್ರನ್ |



| | | |
|---|---|---|
| ಸಂಪುಟ 69 | ಮುಖಪುಟವಿನ್ಯಾಸ | ಸಂಪುಟ 24 |
| ಸಂಚಿಕೆ 03 | ಕೆ.ಎಮ್.ಶೇಷಗಿರಿ | ಸಂಚಿಕೆ 06 |

## ವಿಷಯಾನುಕ್ರಮಣಿಕಾ


| | | | |
|---|---|---|---|
| 1. | ಶ್ರುತಿಸುಧಾ / ವ್ಯಾಸಸುಧಾ / ದಾಸಸುಧಾ | | 3 |
| 2. | ಶ್ರೀಗಳವರ ಆಜ್ಞಾಪತ್ರ-ಕುಶಲಪತ್ರ | | 4 |
| 3. | ನುಡಿಮುತ್ತು | ✍ ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ | 11 |
| 4. | ಶ್ರೀಕೃಷ್ಣ | ✍ ಪಂ. ಜಯತೀರ್ಥಾಚಾರ್ಯ ಮಳಗಿ | 12 |
| 5. | ಋಷಿವಂದನೆ - 31 | ✍ ಪಂ. ಶ್ರೀನಿವಾಸಾಚಾರ್ಯ ನಾಗರಹಳ್ಳಿ | 15 |
| 6. | ನವವಧುವಿಗೆ ಕಿವಿಮಾತು - 7 | ✍ ಪಂ. ಆತ್ರೇಯ ಪ್ರಹ್ಲಾದ | 18 |
| 7. | ಲಕ್ಷ್ಮೀನರಸಿಂಹಾತ್ಮಕ ವಿಶೇಷಣದ ಔಚಿತ್ಯ | ✍ ಪಂ. ಸಗ್ರಿ ರಾಘವೇಂದ್ರಾಚಾರ್ಯ | 22 |
| 8. | ವಿಷ್ಣುಸಹಸ್ರನಾಮ | ✍ ಪಂ. ಪದ್ಮನಾಭಾಚಾರ್ಯ ಚಿಟಗುಪ್ಪ | 24 |
| 9. | ಜ್ಞಾನ ಹಾಗೂ ಧನದ ಪ್ರಾಪ್ತಿ ಯಾರಿಂದ? | ✍ ಡಾ. ವೆಂಕಟಗಿರೀಶಾಚಾರ್ಯ ದಾವಣಗೇರಿ | 27 |
| 10. | ಶ್ರೀಮದಕ್ಷೋಭ್ಯತೀರ್ಥರು | ✍ ಪಂ. ವಾದಿರಾಜಾಚಾರ್ಯ ಕರಣಂ | 29 |
| 11. | ಹಬ್ಬ-ಹರಿದಿನಗಳು - 25 | ✍ ಡಾ. ವೆಂಕಟೇಶಾಚಾರ್ಯ ಬಿ.ಆರ್ | 32 |
| 12. | ತೀರ್ಥ-ಕ್ಷೇತ್ರಗಳ ಮಹಿಮೆ | ✍ ಪಂ. ಪುರಂದರಾಚಾರ್ಯ ಹಯಗ್ರೀವ | 34 |
| 13. | ಶ್ರೀಸತ್ಯಾತ್ಮತೀರ್ಥರ ಕಾರುಣ್ಯ ಸ್ಮರಣೆ | ✍ ಡಾ. ಎ.ಬಿ.ಶ್ಯಾಮಾಚಾರ್ಯ | 36 |
| 14. | ಹರಿದಾಸರ ಜನಪರ ದೃಷ್ಟಿ -3 | ✍ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ | 39 |
| 15. | ಸಂಧ್ಯಾವಂದನೆ - 7 | ✍ ಡಾ. ರಾಘವೇಂದ್ರಾಚಾರ್ಯ ರಾಚೂರಿ | 42 |
| 16. | ಶ್ರೀಮನ್ಮಧ್ವಾಚಾರ್ಯರ ಕಾಲನಿರ್ಣಯ | ✍ ಶ್ರೀ ಆನಂದತೀರ್ಥ ವಡವಿ | 47 |
| 17. | ಹೀಗಾಗಲು ಹಾಗಾಗಬೇಕಿತ್ತೇ .... | ✍ ಪಂ. ಪ್ರವೀಣಾಚಾರ್ಯ.ಹುನಗುಂದ | 50 |
| 18. | ವಸಂತಮಾಸದ ಧಾರ್ಮಿಕ ಶಿಬಿರಗಳು | ✍ ಪಂ. ಆನಂದಾಚಾರ್ಯ ಮಹಿಷಿ | 52 |


## ...ಸಂಪಾದಕೀಯ...

ಸಹೃದಯ ಓದುಗರೆ !...

ವಿಶ್ವವನ್ನೇ ಬೆಚ್ಚಿಬೀಳಿಸಿದ ಕೋವಿಡ್ - ೧೯ ಮಹಾಮಾರಿಯ ಭೀತಿಯಿಂದಾಗಿ ದೇಶದ ಎಲ್ಲ ಚಟುವಟಿಕೆಗಳು ಕಳೆದ ಎರಡು ತಿಂಗಳಿನಿಂದ ಸ್ತಬ್ಧವಾಗಿದ್ದ ವಿಚಾರ ತಮಗೆಲ್ಲ ವಿದಿತವೇ ಆಗಿದೆ. ಇದಕ್ಕೆ ಶ್ರೀಸುಧಾ ಪತ್ರಿಕೆಯು ಹೊರತಾಗಿಲ್ಲ. ಆಕಾರಣ **ಏಪ್ರಿಲ್ - ಮೇ** ತಿಂಗಳ ಶ್ರೀಸುಧಾ ಪತ್ರಿಕೆಯು ತಮ್ಮ ಮನೆ ತಲುಪಿಲ್ಲ. ಈಗ ಲಾಕ್‌ಡೌನ್ ಸಡಿಲಿಕೆ ಆದಕಾರಣ ಈ ಮಾಸದಿಂದ ಪತ್ರಿಕೆಯನ್ನು ಮತ್ತೆ ನಿಮ್ಮ ಮನೆಗೆ ತಲುಪಿಸುವ ಹುಮ್ಮಸ್ಸಿನಲ್ಲಿ ನಾವಿದ್ದೇವೆ.

ನಾವು ಸಂಪೂರ್ಣವಾಗಿ ಸಿದ್ಧರಾಗಿದ್ದೇವೆ. ಪತ್ರಿಕೆ ನಿಮಗೆ ತಲುಪುತ್ತದೆ ಎಂಬ ಭರವಸೆ ಇದೆ. ಪರಿಸ್ಥಿತಿಗೆ ಅನುಗುಣವಾಗಿ ನಿಮ್ಮ ನಿಮ್ಮ ಪ್ರದೇಶದ ಅಂಚೆ ವ್ಯವಸ್ಥೆ ಸುಗಮವಾಗಿ ಇಲ್ಲದೇ ಪತ್ರಿಕೆ ತಲುಪದೇ ಇದ್ದಲ್ಲಿ ಸಹನೆ ಕಳೆದುಕೊಳ್ಳಬೇಡಿ. ನಮ್ಮೊಂದಿಗೆ ಸಹಕರಿಸಿ.

ಸುಧಾ ಬಳಗದ ಪ್ರತಿಯೊಬ್ಬರ ಆರೋಗ್ಯ ಕ್ಷೇಮಕ್ಕಾಗಿ ಪ್ರಾರ್ಥಿಸುತ್ತಿದ್ದೇವೆ. **-ಸಂ.**

## ...ಶ್ರುತಿಸುಧಾ...

ದಿವ್ಯೋ ಹ್ಯಮೂರ್ತಃ ಪುರುಷಃ ಸ ಬಾಹ್ಯಾಭ್ಯಂತರೋ ಹ್ಯಜಃ ।
ಅಪ್ರಾಣೋ ಹ್ಯಮನಾಃ ಶುಭ್ರೋ ಹ್ಯಕ್ಷರಾತ್ಪರತಃ ಪರಃ ॥ (ಅಥರ್ವಣ 3-2)

ಅದ್ಭುತನೆನಿಸಿದ ಭಗವಂತ ಶುದ್ಧಚೇತನ. ಸರ್ವವ್ಯಾಪ್ತನಾಗಿ ಜನನ-ಮರಣರಹಿತನಾಗಿ ನಿತ್ಯನೆನಿಸಿರುವ. ಪ್ರಾಕೃತಗುಣವರ್ಜಿತನಾಗಿ ಜ್ಞಾನಾನಂದ-ಮಯನಾಗಿರುವ. ಜೀವಜಡದಿಂದ ಭಿನ್ನನಾಗಿ ಶ್ರೇಷ್ಠನೆನಿಸಿ ಅಕ್ಷರಳಾದ ಲಕ್ಷ್ಮೀದೇವಿಗೂ ಉತ್ತಮನಾಗಿ ಪುರುಷೋತ್ತಮನೆಂದೆನಿಸಿರುವನು.

## ... ವ್ಯಾಸಸುಧಾ ...

ಭಾರಂ ಸ ವಹತೇ ತಸ್ಯ ಗ್ರಂಥಸ್ಯಾರ್ಥಂ ನ ವೇತ್ತಿ ಯಃ ।
ಯಸ್ತು ಗ್ರಂಥಾರ್ಥತತ್ತ್ವಜ್ಞೋ ನಾಸ್ಯ ಗ್ರಂಥಾಗಮೋ ವೃಥಾ ॥ ಮ.ಭಾ

ಯಾವನು ಗ್ರಂಥದ ಅರ್ಥ ತಿಳಿಯದೇ, ವಿಷಯಗಳನ್ನು ಅನುಷ್ಠಾನಕ್ಕೆ ತರದೇ, ಕೇವಲ ಕಂಠಸ್ಥ ಮಾಡಿದರೆ, ಅವನು ಕೇವಲ ಗ್ರಂಥದ ಭಾರ ಹೊತ್ತಂತೆ. ಆದರೆ ಯಾವನು ಅರ್ಥಗಳ ರಹಸ್ಯವನ್ನು ಅರಿತು ಅನುಷ್ಠಾನಕ್ಕೆ ತರುವನೋ ಅಂಥಹವನ ಅಧ್ಯಯನ ಸಾರ್ಥಕ.

## ದಾಸಸುಧಾ

ಅನ್ನದಾಸೆಗೆ ಪರರ ಮನೆಯ ಬಾಗಿಲು ಕಾಯ್ದು
ಅನೇಕ ಬಾಧೆಗಳಿಂದ ನೊಂದೆನಯ್ಯ।
ಅನ್ಯತ್ರ ಪೊಡಮಟ್ಟು ಪೋಗವೀಸರು ಅವರು
ಮನ್ನಿಸಿ ಕೃಪೆಯಿಂದ ಕೂಡಿಕೊಂಡಿರರು
ಅನಾಥಬಂಧು ಶ್ರೀಹಯವದನ ನಿನ್ನ
ಮನೆಯ ಕುನ್ನಿಗೆಂಜಲ ನಿಟ್ಟಂತೆ ಎನ್ನ ರಕ್ಷಿಸೋ ॥

– ಶ್ರೀವಾದಿರಾಜರು.

*Gift your relative with a surprise*
*Sri Sudha Subscription*




# ಪರಮಪೂಜ್ಯ ಶ್ರೀ ಶ್ರೀಪಾದಂಗಳವರ ಆಜ್ಞಾಪತ್ರ ಹಾಗೂ ಕುಶಲಪತ್ರ

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯತ್ವಾದ್ಯನೇಕಗುಣಗಣಾಲಂಕೃತ,
ಶ್ರೀಮನ್ಮೂಲಸೀತಾಸಮೇತಶ್ರೀಮನ್ಮೂಲರಾಮದಿಗ್ವಿಜಯರಾಮವೇದವ್ಯಾಸದೇವರ
ದಿವ್ಯಪಾದಪದ್ಮಾರಾಧಕರಾದ, ಶ್ರೀಮದ್ವೈಷ್ಣವಸಿದ್ಧಾಂತಪ್ರತಿಷ್ಠಾಪನಾಚಾರ್ಯ ಜಗದ್ಗುರು
ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ ಶ್ರೀಮದುತ್ತರಾದಿಮಠಾಧೀಶರಾದ,
ಶ್ರೀ 1008 ಶ್ರೀ ಸತ್ಯಾಭಿಜ್ಞತೀರ್ಥಕರಕಮಲಸಂಜಾತರಾದ
ಶ್ರೀ 1008 ಶ್ರೀ ಸತ್ಯಪ್ರಮೋದತೀರ್ಥಶ್ರೀಪಾದಂಗಳವರ ವರಕುಮಾರರಾದ

**ಶ್ರೀ ಶ್ರೀಸತ್ಯಾತ್ಮತೀರ್ಥಶ್ರೀಪಾದಂಗಳವರು**

ತಮ್ಮ ಸಕಲ ಪ್ರಿಯಶಿಷ್ಯರುಗಳಿಗೆ ಶ್ರೀಶಾಲಿವಾಹನಶಕೇ 1942 ಶಾರ್ವರೀ ಸಂವತ್ಸರ ಜ್ಯೇಷ್ಠ ಶುದ್ಧ ದ್ವಿತೀಯಾ ಶ್ರೀಮತ್ಸತ್ಯಸಂಧತೀರ್ಥರ ಆರಾಧನೆಯ ಶುಭದಿನದಂದು ನಾರಾಯಣಸ್ಮರಣಪೂರ್ವಕ ಬರೆದಿರುವ ಕುಶಲಪತ್ರ ಹಾಗೂ ಆಜ್ಞಾಪತ್ರ.

ನಾವು ನಮ್ಮ ಸ್ವರೂಪೋದ್ಧಾರಕ ಗುರುಗಳ, ಶ್ರೀಪದ್ಮನಾಭತೀರ್ಥಾದಿ ಸಮಸ್ತಗುರುಗಳ, ಸಕಲದೇವತೆಗಳ ಹಾಗೂ ಇವರೆಲ್ಲರ ಅಂತರ್ಯಾಮಿಗಳಾದ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರ ಪರಮಾನುಗ್ರಹದಿಂದ, ಶ್ರೀಮನ್ಮಧ್ವಾಚಾರ್ಯಹೃತ್ಕಮಲನಿವಾಸಿ ಯಾದ ಸರ್ವೋತ್ತಮನಾದ, ಸರ್ವಸ್ವತಂತ್ರನಾದ, ನಿರತಿಶಯ ಜ್ಞಾನಾನಂದಾದಿ ಅನಂತ-ಗುಣಗಣಪರಿಪೂರ್ಣನಾದ, ಸಕಲದೋಷವಿದೂರನಾದ, ಸರ್ವಸ್ವಾಮಿ-ಮಮಸ್ವಾಮಿ-ಯಾದ, ಅಸ್ಮದುಪಾಸ್ಯ ಶ್ರೀಮೂಲಸೀತಾಸಮೇತ ಶ್ರೀಮನ್ಮೂಲರಾಮದಿಗ್ವಿಜಯರಾಮ ವೇದವ್ಯಾಸಾದ್ಯಭಿನ್ನನಾದ, ರಾಮಕೃಷ್ಣಾದ್ಯನಂತಾವತಾರಾತ್ಮಕನಾದ ಬಿಂಬರೂಪಿಯಾದ ಭಗವಂತನ ಕರುಣಾಪೂರ್ಣಪರಮಾನುಗ್ರಹ ಹಾಗೂ ಪ್ರೇರಣೆಗಳಿಂದ, ಅವನ ಪ್ರೀತ್ಯರ್ಥ ವಾಗಿ ಸ್ನಾನ-ಜಪ-ತಪ-ಪೂಜಾ, ಸಚ್ಛಾಸ್ತ್ರಪಾಠ-ಪ್ರವಚನ, ತತ್ತ್ವೋಪದೇಶಾದಿ ಭಗವತ್ಪೂಜಾ ರೂಪಕಾರ್ಯಗಳನ್ನು ಮಾಡುತ್ತಾ ತತ್ತದ್ದೇಶಸ್ಥಿತ ಭಕ್ತರಿಗೆ ಶ್ರೀಮೂಲರಾಮದಿಗ್ವಿಜಯರಾಮ ವೇದವ್ಯಾಸವಂಶರಾಮಪ್ರಸನ್ನವಿಠ್ಠಲ ದೇವರುಗಳ ಸಂದರ್ಶನ, ತಪ್ತಮುದ್ರಾಧಾರಣ ಮಾಡಿಸುತ್ತಾ ಸಂಚಾರಕ್ರಮದಿಂದ ಉತ್ತರಭಾರತಕ್ಕೆ ತೆರಳಿ ಕ್ಷೇಮೇಣ ಮರಳಿ ಬಂದಿದ್ದೇವೆ.

**ತೀರ್ಥಯಾತ್ರೆಯು ನಿಂದೇ, ಕ್ಷೇತ್ರದ ಫಲ ನಿಂದೇ -**

ನಮ್ಮ ಸ್ವರೂಪೋದ್ಧಾರಕ ಗುರುಗಳ ಪರಮಾನುಗ್ರಹದಿಂದ ವಿಕಾರಿಸಂವತ್ಸರದ ಪುಷ್ಯ ಮಾಘ ಮಾಸಗಳಲ್ಲಿ ಉತ್ತರಭಾರತ ಸಂಚಾರವು ನಿರ್ವಿಘ್ನವಾಗಿ ಸಂಪನ್ನವಾಯಿತು.

ಗಯಾ, ಕಾಶೀ, ಪ್ರಯಾಗ ಮೊದಲಾದ ಪವಿತ್ರಕ್ಷೇತ್ರಗಳಲ್ಲಿ ಗಂಗಾದಿ ತೀರ್ಥಸ್ನಾನ, ಆಯಾ ಕ್ಷೇತ್ರಸ್ಥಿತ ವಿಷ್ಣುಪಾದಾದಿ ಭಗವದಧಿಷ್ಠಾನಗಳ ದರ್ಶನ, ತೀರ್ಥಾದಿಗಳ ಅಂತರ್ಯಾಮಿಯಾದ ಭಗವಂತನ ಚಿಂತನ ಅನುಸಂಧಾನಾದಿಗಳನ್ನು ಯಥಾಶಕ್ತಿ ಯಥಾಭಕ್ತಿ ಮಾಡುವ ಮೂಲಕ ಪಾವನರಾಗಿದ್ದೇವೆ.

ವಿಶೇಷವಾಗಿ ಗಯಾಕ್ಷೇತ್ರದಲ್ಲಿ ಶ್ರೀಮಠದ ಅನೂಚಾನ ಸಂಪ್ರದಾಯಕ್ಕೆ ಅನುಗುಣವಾಗಿ ವಿಷ್ಣುಪಾದದ ಗರ್ಭಗುಡಿಯಲ್ಲಿ ಶ್ರೀಮೂಲರಾಮದೇವರ ಸಂಸ್ಥಾನ ಪೂಜೆಯ ಜೊತೆಗೆ ವಿಷ್ಣುಪಾದದ ಪೂಜೆಯನ್ನೂ ಯಥಾಭಕ್ತಿ ಯಥಾವೈಭವಂ ನೆರವೇರಿಸಲಾಯಿತು. ನಮ್ಮ ಪರಂಪರೆಯ ಪ್ರಾಚೀನರಾದ ಶ್ರೀ ಶ್ರೀ ವಿದ್ಯಾಧೀಶತೀರ್ಥರಿಂದ ವಿಶೇಷ ಮಾಧ್ವದೀಕ್ಷೆಯನ್ನು ಹೊಂದಿದ, ವಿಷ್ಣುಪಾದದ ಅರ್ಚಕರಾದ ಗಯಾವಾಡರೆಲ್ಲರ ವಿಶೇಷ ಪ್ರಾರ್ಥನೆಯಂತೆ ಗಯಾಕ್ಷೇತ್ರದಲ್ಲಿಯೇ 20 ದಿನಗಳ ಕಾಲ ವಾಸ್ತವ್ಯ ಮಾಡಲಾಯಿತು. ವಿದ್ಯಾರ್ಥಿಗಳಿಗೆ ಸುಧಾದಿಗ್ರಂಥಗಳ ವಿಶೇಷ ಪಾಠಗಳನ್ನು ಹೇಳುವದಲ್ಲದೇ ಗಯಾವಾಡರಿಗೆ ಸಂಧ್ಯಾವಂದನೆ, ಗಾಯತ್ರೀಜಪ, ಏಕಾದಶೀ ಉಪವಾಸ ಮೊದಲಾದ ಸತ್ಕರ್ಮಗಳ ಬಗ್ಗೆ ದೀಕ್ಷೆಯನ್ನು ಹುಟ್ಟಿಸುವ ಉಪದೇಶವನ್ನು ಮಾಡಲಾಯಿತು. ಹರಿವಾಯುಗುರುಗಳು ನಮ್ಮಲ್ಲಿ ನಿಂತು ಪ್ರೇರಿಸಿದಂತೆ ಯಥಾಮತಿ ಯಥಾಶಕ್ತಿಯಾಗಿ ವಿಷ್ಣುಶಬ್ದದ ವಿಶೇಷ ಅರ್ಥಾನುಸಂಧಾನಗಳನ್ನು ಮಾಡಿ, ಗ್ರಂಥದ ರೂಪದಲ್ಲಿ ಅವುಗಳನ್ನು ಬರೆದು, ವಿಷ್ಣುವಿನ ಪಾದಕ್ಕೆ ಸಮರ್ಪಿಸಲಾಯಿತು.

ಕಾಶೀಕ್ಷೇತ್ರದಲ್ಲಿ ಕಾಶಿಯ ಅನೇಕ ಪ್ರಸಿದ್ಧ ವಿದ್ವಾಂಸರ ಉಪಸ್ಥಿತಿಯಲ್ಲಿ ಸೌಹಾರ್ದದ ವಿದ್ವತ್ಸಭೆಯನ್ನು ನೆರವೇರಿಸಲಾಯಿತು.

**ಗುರುಸ್ಮರಣೆಯಿಂದ ಸಕಲ ಆಪತ್ತುಪರಿಹಾರ**

ಎರಡು ತಿಂಗಳಿಗಿಂತಲೂ ಅಧಿಕವಾದ ಈ ಸುದೀರ್ಘ ಸಂಚಾರದಲ್ಲಿ ಯಾವುದೇ ಸಣ್ಣ ತೊಂದರೆಯೂ ಆಗದೇ ಇದ್ದಂತೆ, ವಿಶೇಷವಾಗಿ ದೇಶದೆಲ್ಲೆಡೆ ಹಬ್ಬುತ್ತಿದ್ದ ಮಹಾಮಾರೀ ರೋಗದ ಭೀತಿಯ ಪರಿಣಾಮ ನಮ್ಮ ಯಾತ್ರೆಯ ಮೇಲೆ ಕಿಂಚಿತ್ತೂ ಆಗದೇ ಇದ್ದಂತೆ ಶ್ರೀಮೂಲರಾಮದೇವರು ಹಾಗೂ ಗುರುಗಳು ನಮ್ಮನ್ನು, ನಮ್ಮ ಶಿಷ್ಯರನ್ನು, ಮಠದ ಪರಿವಾರವನ್ನು ಹೆಜ್ಜೆ ಹೆಜ್ಜೆಗೂ ರಕ್ಷಿಸಿದರು. ಭಗವಂತ ನಮಗೆ ಕಾಲ ಕಾಲಕ್ಕೆ ಗುರುಸ್ಮರಣೆಯನ್ನು ನೀಡಿ ಗುರುಗಳ ಮೂಲಕ ನಮ್ಮನ್ನು ಅನುಗ್ರಹಿಸಿದ. ಕಾಪಾಡಿದ. ಇದರಲ್ಲಿ ಯಾವುದೇ ಅಣುಮಾತ್ರ ಸಂದೇಹವಿಲ್ಲ.

**ನಾಹಂ ಕರ್ತಾ ಹರಿಃ ಕರ್ತಾ**

ಈ ಸಮಗ್ರ ಸಂಚಾರದಲ್ಲಿ ನಾವು ಮಾಡಿದ ಪ್ರತಿಯೊಂದು ಕರ್ಮಗಳೂ ಭಗವಂತನೇ ನಮ್ಮಲ್ಲಿ ಹಾಗೂ ನಮ್ಮ ಶಿಷ್ಯರಲ್ಲಿ ನಿಂತು ಮಾಡಿ ಮಾಡಿಸಿದ್ದು. ನಮ್ಮಿಂದ ಹಾಗೂ ನಮ್ಮ ಶಿಷ್ಯರಿಂದ ನಡೆದ ಪ್ರತಿಯೊಂದು ಸತ್ಕರ್ಮಗಳೂ ಭಗವಂತನ ಪೂಜೆ. ಆಯಾ ಸ್ಥಳಗಳಲ್ಲಿ ಶಿಷ್ಯರಿಂದ, ಅಧಿಕಾರಿಗಳಿಂದ, ದೇವಸ್ಥಾನಗಳಿಂದ, ಸಂಘ-ಸಂಸ್ಥೆಗಳಿಂದ ನಮಗೆ ಸಂದ ಗೌರವ, ಆದರ, ಮಾನ, ಮರ್ಯಾದೆ ಇತ್ಯಾದಿ ಎಲ್ಲವೂ ಗುರುಗಳ ಅಂತರ್ಯಾಮಿಯಾದ ಮುಖ್ಯಪ್ರಾಣಾಂತರ್ಗತ ಶ್ರೀಮೂಲರಾಮನಿಗೇ ಸಮರ್ಪಿತ.

**ಪ್ರಕೃತ,** ನಮ್ಮ ಹಾಗೂ ಶ್ರೀಮಠದ ಪರಿವಾರದ ಯೋಗ-ಕ್ಷೇಮಗಳ ಬಗ್ಗೆ ಅನೇಕ ಭಕ್ತರು ಬಹಳಷ್ಟು ಆತಂಕವನ್ನು ವ್ಯಕ್ತಮಾಡಿದ್ದಾರೆ. ನಮ್ಮ ಮುಂದಿನ ಕಾರ್ಯಕ್ರಮಗಳನ್ನು ತಿಳಿಯಲು ಉತ್ಸುಕರೂ ಆಗಿದ್ದಾರೆ. ಈ ಪತ್ರದ ಮೂಲಕ ಎಲ್ಲರಿಗೂ ನಮ್ಮ ಯೋಗಕ್ಷೇಮಗಳನ್ನು ಹಾಗೂ ನಮ್ಮ ಮುಂದಿನ ಕಾರ್ಯಕ್ರಮಗಳನ್ನು ತಿಳಿಸಲು ಅಪೇಕ್ಷಿಸುತ್ತೇವೆ.

**ನಿತ್ಯಂ ಕುಶಲಿನಃ -**

**ತ್ವದಿಚ್ಛಯಾ ಜಗತ್ಸರ್ವಂ ಕುಶಲೇ ವಿನಿಯುಜ್ಯತೇ । ವಯಂ ತು ದೇವದೇವೇಶ ನಿತ್ಯಂ ಕುಶಲಿನೋ ಹರೇ ॥** ಎಂದು ಹರಿವಂಶ ತಿಳಿಸುವಂತೆ ಈಡೀ ಜಗತ್ತು ಕುಶಲವಾಗಿ ಇರುವುದಕ್ಕೆ ಭಗವಂತನ ಇಚ್ಛೆಯೇ ಕಾರಣ. ಅವನ ಇಚ್ಛೆಯಿಂದಲೇ ನಾವೂ ಕುಶಲರಾಗಿದ್ದೇವೆ. ಹಿಂದೆ ತಿಳಿಸಿದಂತೆ ಹರಿವಾಯುದೇವತಾಗುರ್ವನುಗ್ರಹದಿಂದ ಉತ್ತರಭಾರತ ಸಂಚಾರವನ್ನು ನಿರ್ವಿಘ್ನವಾಗಿ ನೆರವೇರಿಸಿಕೊಂಡು, ಕಳೆದ ಎರಡು ತಿಂಗಳಿಂದ ತೆಲಂಗಾಣಾ ರಾಜ್ಯದ **ಸುವರ್ಣಪುರೀ (ಸೋನ್) ಗ್ರಾಮದಲ್ಲಿ**ಯೇ ಕುಶಲವಾಗಿ ವಾಸ್ತವ್ಯ ಮಾಡಿದ್ದೇವೆ. **ಕ್ಷೇಮಂ ವಿಧಾಸ್ಯತಿ ಸ ನೋ ಭಗವಾನ್ ತ್ರ್ಯಧೀಶಃ** ಸುಧಾದಿಗ್ರಂಥಗಳ ಪಾಠ-ಅಧ್ಯಯನ, ಜಪ-ತಪ-ಪೂಜಾದಿಗಳನ್ನು ಮಾಡುತ್ತಾ ಕ್ಷೇಮೇಣ ಇದ್ದೇವೆ. ಯಾವ ತರಹದ ತೊಂದರೆಯೂ ಇಲ್ಲಿ ಇಲ್ಲ. ನಾವು ನೆಲೆಸಿದ ಈ ಗ್ರಾಮ ಕೊರೋನಾ ರೋಗದ ಸೋಂಕಿನ ಪರಿಧಿಯಿಂದ ಬಹು ದೂರದಲ್ಲಿದೆ. ಗುರುಗಳೇ ನಮ್ಮನ್ನು ಈ ಸುರಕ್ಷಿತತಾಣಕ್ಕೆ ತಂದು ಕೂಡಿಸಿದ್ದಾರೆ. ಇದರಲ್ಲಿ ಸಂದೇಹವಿಲ್ಲ. ಭಗವಂತನ ಸಂಕಲ್ಪ ಹಾಗೂ ಅವನ ಪ್ರೇರಣೆಯಿಂದಲೇ ಬಂದ ಸರ್ಕಾರದ ಆದೇಶಕ್ಕೆ ಅನುಗುಣವಾಗಿ ಸಂಪೂರ್ಣವಾಗಿ ನಮಗೆ ನಾವೇ ಪ್ರತಿಬಂಧವನ್ನು ಹಾಕಿಕೊಂಡಿದ್ದೇವೆ. ನಮ್ಮನ್ನು ರೋಗದಿಂದ ಕಾಪಾಡಿಕೊಳ್ಳಲು ಈ ಸಾಮಾಜಿಕ ಅಂತರದ ಆದೇಶ ಸರ್ಕಾರದಿಂದ ನಮಗೆ ಬಂದಿರಬಹುದು. ಆದರೆ ಈ ಅಂತರ ನಮ್ಮ ಅಂತರಂಗ ಸಾಧನೆಯನ್ನು ಬಲಪಡಿಸಲು ಭಗವಂತನ ಸಂಕಲ್ಪದಿಂದಲೇ ನಮಗೆ ವರವಾಗಿ ಒದಗಿ ಬಂದಿದೆ ಎಂದೇ ನಾವು ಭಾವಿಸಿದ್ದೇವೆ. ಪೂರ್ಣರೀತಿಯಲ್ಲಿ, ಕಡ್ಡಾಯವಾಗಿ ಸಾಮಾಜಿಕ ಅಂತರವನ್ನು ಕಾಯ್ದುಕೊಂಡಿದ್ದೇವೆ. ಏಕಾಂತದಲ್ಲಿದ್ದು ಅಂತರ್ಮುಖಿಗಳಾಗಿ ಅಂತರಂಗದಲ್ಲಿ ಅಂತರಾತ್ಮನ ಆರಾಧನೆಯನ್ನು, ವೇದಾಂತದ ಅಧ್ಯಯನವನ್ನು ಮಾಡುತ್ತಿದ್ದೇವೆ. ಗುರ್ವನುಗ್ರಹದಿಂದ ಯಾವ ಸಮಸ್ಯೆಯೂ ಇಲ್ಲದೇ ಕ್ಷೇಮೇಣ ಇದ್ದೇವೆ. ಆರೋಗ್ಯದಿಂದ ಇದ್ದೇವೆ. ಅಷ್ಟುಮಾತ್ರವಲ್ಲ, ಬಹಳ ಸಂತೋಷದಿಂದ ಇದ್ದೇವೆ. ಸಾಮಾನ್ಯ ದಿನಗಳಿಗಿಂತಲೂ ಹೆಚ್ಚಿನ ಪಾಠ, ಅಧ್ಯಯನ, ಪೂಜೆ, ಜಪ ಮೊದಲಾದ ಸಾಧನೆಗಳನ್ನು ಗುರುಗಳು, ಭಗವಂತ ನಮ್ಮ ಯೋಗ್ಯತೆಗೆ ತಕ್ಕಂತೆ ನಮ್ಮಿಂದ ಮಾಡಿಸುತ್ತಿದ್ದಾರೆ. ಹೀಗಾಗಿ ಇದಕ್ಕಿಂತಲೂ ಮಿಗಿಲಾದ ಕುಶಲ, ಆರೋಗ್ಯ, ಕ್ಷೇಮ, ಸಂತೋಷ ಯತಿಗಳಿಗೆ ಇನ್ನೇನಿರಲಿಕ್ಕೆ ಸಾಧ್ಯ ?

ಸೋನ್ ಗ್ರಾಮದ ಜನರೂ ನಮ್ಮ ಅಪೇಕ್ಷೆಯಂತೆ ಸಾಮಾಜಿಕ ಅಂತರವನ್ನು ಗಮನದಲ್ಲಿಟ್ಟುಕೊಂಡು ನಮ್ಮ ದರ್ಶನಕ್ಕಾಗಲೀ, ದೇವರ ದರ್ಶನಕ್ಕಾಗಲೀ ಒಂದು ದಿನವೂ ಬರುತ್ತಿಲ್ಲ. ದೂರದಲ್ಲಿದ್ದೇ ಮಾಡಬಹುದಾದ ಎಲ್ಲ ತರಹದ ಸೇವೆಗಳನ್ನು ಮಾಡುತ್ತಿದ್ದಾರೆ. ಅವರ ಸೇವೆ ಸಹಕಾರಗಳು ಅಭಿನಂದನೀಯ.

ನಮ್ಮಲ್ಲಿ ಅಧ್ಯಯನಕ್ಕಾಗಿ ಇರುವ ವಿದ್ಯಾರ್ಥಿಗಳು ಹಾಗೂ ಮಠದ ಪರಿವಾರದವರು ಸುರಕ್ಷಿತವಾಗಿ, ಆರೋಗ್ಯದಿಂದ ಸಂತೋಷದಿಂದ ಇದ್ದಾರೆ. ನಮ್ಮ ಬಗ್ಗೆ ನಮ್ಮ ಶಿಷ್ಯರ ಬಗ್ಗೆ ನಿಶ್ಚಿಂತರಾಗಿರಿ. ತ್ರಾತಾಸ್ಮದೀಯ ವಿಮೃಶೇನ ಕಿಯಾನಿಹಾರ್ಥಃ ಜಗವ ರಕ್ಷಿಸುವ ಹೊಣೆ ಜಗದೀಶನದಿರುವಾಗ ನಮಗೇಕೆ ಚಿಂತೆ? ನೀವುಗಳೂ ಕೂಡ ನಿಮ್ಮ ವೈಯಕ್ತಿಕವಾದ ಹಾಗೂ ನಿಮ್ಮ ಪರಿವಾರದ ಆರೋಗ್ಯದ ಬಗ್ಗೆ ನಿರ್ಲಕ್ಷ್ಯವನ್ನು ಮಾಡದೇ ಕಾಳಜಿಯನ್ನು ವಹಿಸಬೇಕು. ಶ್ರೀಮೂಲರಾಮದೇವರಲ್ಲಿ ನಿಮ್ಮೆಲ್ಲರ ಆರೋಗ್ಯಕ್ಕಾಗಿ ಸದಾ ಪ್ರಾರ್ಥಿಸುತ್ತಿದ್ದೇವೆ.

## ಅಂತರಂಗದಿಂದ ಬಹಿರಂಗಕ್ಕೆ ಯಾವಾಗ ? -

ಸದ್ಯಕ್ಕೆ ಅಂತರಂಗದಲ್ಲಿಯೇ ಇರುತ್ತೇವೆ. ಶ್ರೀರಂಗನ ಪ್ರೇರಣೆಯಾಗುವವರೆಗೂ ಬಹಿರಂಗಕ್ಕೆ ಬರುವ ಹಾಗಿಲ್ಲ. ಮಹಾಮಾರಿಯ ಅಟ್ಟಹಾಸ ನಿಲ್ಲುತ್ತಿಲ್ಲ. ಸದ್ಯದಲ್ಲಿ ನಿಲ್ಲುವ ಲಕ್ಷಣಗಳೂ ಇಲ್ಲ. ರೋಗದ ಉಲ್ಬಣತೆ, ಹರಡುವಿಕೆ ಕಡಿಮೆಯಂತೂ ಆಗಿಲ್ಲ. ಇದು ನಿಮಗೂ ವಿದಿತವೇ ಆಗಿದೆ. ಸರ್ಕಾರ ಪ್ರತಿಬಂಧಾಜ್ಞೆಯನ್ನು ಸಡಿಲುಗೊಳಿಸುತ್ತಾ ಹೊರಟಿದೆ. ಅನೇಕ ತರಹದ ಮುಂಜಾಗ್ರತಾಕ್ರಮಗಳನ್ನು, ಸೂಚನೆಗಳನ್ನು, ಸಲಹೆಗಳನ್ನು ನೀಡುತ್ತಲೇ ಇದೆ. ಆದರೂ ಅವುಗಳನ್ನು ಕಟ್ಟುನಿಟ್ಟಾಗಿ ನೂರಕ್ಕೆ ನೂರರಷ್ಟು ಪಾಲನೆಯನ್ನು ಎಲ್ಲರೂ ಮಾಡುವುದು ಅಸಾಧ್ಯ. ಎಲ್ಲವೂ ಅನಿರ್ಧಾರಿತ. ಅನೂಹ್ಯ. ಈ ತರಹದ ಪ್ರಸಂಗದಲ್ಲಿ ಅತಿ ಹೆಚ್ಚು ಜನರು ಸೇರಬಹುದಾದ ಕಾರ್ಯಕ್ರಮಗಳನ್ನು ಮಾಡುವುದು ಯಾವುದೇ ರೀತಿಯಿಂದಲೂ ಉಚಿತವಲ್ಲ ಎಂದೇ ಎಲ್ಲ ತಜ್ಞರ ಅಭಿಪ್ರಾಯ.

## ಸ್ಥಿತೋಽಸ್ಮಿ ಗತಸಂದೇಹಃ -

ಈ ಹಿನ್ನೆಲೆಯಲ್ಲಿ ಸದ್ಯಕ್ಕೆ ನಾವು ಎಲ್ಲಿಯೂ ಸಂಚಾರ ಮಾಡುವುದಿಲ್ಲ. ಇದ್ದ ಸ್ಥಳದಲ್ಲಿಯೇ ಈಗ ಇರುವಂತೆಯೇ ಏಕಾಂತದಲ್ಲಿ ಇದ್ದು ಅಧ್ಯಯನ-ಅಧ್ಯಾಪನಗಳನ್ನು ಮಾಡುತ್ತಾ ಇರಬೇಕೆಂದು ಹರಿಗುರುಪ್ರೇರಣೆಯಂತೆ ಸಂಕಲ್ಪ ಮಾಡಿದ್ದೇವೆ.

## ಕಾಯ್ದ(ತಪ್ತ)ಮುದ್ರೆಗಾಗಿ ಕಾಯಬೇಕು -

ಹತ್ತಾರು ಸಾವಿರ ಭಕ್ತರ ಗುಂಪು ಸೇರುವಂತಹ ಪ್ರಥಮ ಏಕಾದಶಿಯ ತಪ್ತ-ಮುದ್ರಾಧಾರಣೆಯ ಕಾರ್ಯಕ್ರಮವನ್ನು ನೆರವೇರಿಸುವುದೂ ಅಸಾಧ್ಯವಾಗಿದೆ. **ಆದ್ದರಿಂದ ಈ ವರ್ಷ ಪ್ರತಿವರ್ಷದಂತೆ ಬೆಂಗಳೂರಿನಲ್ಲಿ ಆಷಾಢ ಏಕಾದಶಿಯಂದು ತಪ್ತಮುದ್ರಾಧಾರಣೆ ಕಾರ್ಯಕ್ರಮವೂ ಇರುವುದಿಲ್ಲ.** ಅಷ್ಟು ಮಾತ್ರವಲ್ಲ, **ಭಕ್ತರು ಮುದ್ರಾಧಾರಣೆಗಾಗಿ ನಾವಿದ್ದ ಸ್ಥಳಕ್ಕೇ ಬರುವ ಆತುರವನ್ನೂ ಸರ್ವಥಾ ಮಾಡಬೇಡಿ.** ಪಕ್ಕದ ಊರಿನವರಾಗಿದ್ದರೂ ಸರಿ. ದೂರದ ಊರಿನವರಾದರೂ ಸರಿ. ನಿಮ್ಮ ಮನೆಯಲ್ಲಿಯೇ ಇರಿ. ಪಾಂಚಜನ್ಯ ಹಾಗೂ ಸುದರ್ಶನಗಳ ಸ್ಮರಣೆ ಮಾಡಿ. ಪಾಪಪರಿಹಾರಕ್ಕಾಗಿ, ಒಳ್ಳೆಯ ಜ್ಞಾನದ ಪ್ರಾಪ್ತಿಗಾಗಿ ಪ್ರಾರ್ಥನೆ ಮಾಡಿ. ಸು-ದರ್ಶನ ಭಾಗವತಾದಿಗಳ ಶ್ರವಣ ಮಾಡಿ. ಈ ಮೂಲಕ ಪ್ರಥಮ ಏಕಾದಶಿಯನ್ನು ಸಾರ್ಥಕ ಮಾಡಿಕೊಳ್ಳಿ. ಎಲ್ಲ ವಾತಾವರಣ ತಿಳಿಯಾದ ಮೇಲೆ ನೀವಿದ್ದ ಸ್ಥಳಕ್ಕೇ ನಾವು ಬಂದಾಗ ಮುದ್ರಾಧಾರಣೆಯನ್ನು ಅವಶ್ಯವಾಗಿ ಮಾಡಿಸಿಕೊಳ್ಳಿ.

**ಸ ಜಯರಾಟ್ ಆಸೀದತಾಂ ಮಾನಸೇ -**

ಮಳಖೇಡದಲ್ಲಿ ಪ್ರತಿವರ್ಷ ಅತ್ಯಂತ ವೈಭವದಿಂದ ನೆರವೇರಿಸಲ್ಪಡುವ ಶ್ರೀಮಜ್ಜಯತೀರ್ಥ ಗುರುಸಾರ್ವಭೌಮರ ಆರಾಧನೆಯನ್ನೂ ಈ ವರ್ಷ ಸಂಕ್ಷೇಪವಾಗಿ ಅತ್ಯಂತ ಭಕ್ತಿಯಿಂದ ನೆರವೇರಿಸಲಾಗುತ್ತದೆ. ನಾವೂ ಕೂಡಾ ನಾವು ಇದ್ದ ಸ್ಥಳದಲ್ಲಿಯೇ ಶ್ರೀಮಟ್ಟೀಕಾಕೃತ್ಪಾದರ ಗ್ರಂಥಗಳ ವಿಶೇಷ ಪಾಠಗಳನ್ನು ಹೇಳುವ ಮೂಲಕ ವೈಭವದ ವಾಙ್ಮಯ ಆರಾಧನೆಯನ್ನು ನೆರವೇರಿಸುತ್ತೇವೆ. ಶ್ರೀಮಟ್ಟೀಕಾಕೃತ್ಪಾದರು ನಮ್ಮ ನಿಮ್ಮೆಲ್ಲರ ಮನಸ್ಸಿನಲ್ಲಿಯೇ ನೆಲೆಸಿ ನಮ್ಮ ಆರಾಧನೆಯನ್ನು ಸ್ವೀಕರಿಸಲಿ ಎಂಬುದಾಗಿ ಪ್ರಾರ್ಥಿಸುತ್ತೇವೆ.

**ಸತ್ಯಸಂಕಲ್ಪನ ಸಂಕಲ್ಪಕ್ಕೆ ಶ್ರೀಸತ್ಯಧ್ಯಾನರೂ ಸನ್ನದ್ಧ -**

ಮುಂಬಯಿಯ ಸಮಸ್ತ ವೈದಿಕ-ಲೌಕಿಕ ಶಿಷ್ಯರ ಅತ್ಯಂತಭಕ್ತಿಯ ಪ್ರಾರ್ಥನೆಯ ಮೇರೆಗೆ ಈ ವರ್ಷದ ನಮ್ಮ ಚಾತುರ್ಮಾಸ್ಯವನ್ನು ಮುಂಬಯಿಯ ಶ್ರೀಸತ್ಯಧ್ಯಾನವಿದ್ಯಾಪೀಠದಲ್ಲಿ ನೆರವೇರಿಸುವ ಸಂಕಲ್ಪವನ್ನು ಮಾಡಲಾಗಿತ್ತು. ಅಲ್ಲಿರುವ ಭಕ್ತರೂ ಅತ್ಯಂತ ಉತ್ಸಾಹ, ಭಕ್ತಿ, ಶ್ರದ್ಧೆಗಳಿಂದ ಚಾತುರ್ಮಾಸ್ಯದಲ್ಲಿ ಮೂಲರಾಮದೇವರ ಸೇವೆಯನ್ನು ಮಾಡಲು ಸಿದ್ಧರಾಗಿದ್ದಾರೆ. ಆದರೆ ಭಗವಂತನ ಸಂಕಲ್ಪ, ಅವನ ಸ್ವಾತಂತ್ರ್ಯ ಪ್ರಬಲವಾದದ್ದು. ಅವನ ಇಚ್ಛೆಯಂತೆಯೇ ನಿರ್ಮಾಣವಾದ ಈ ಪರಿಸ್ಥಿತಿಯಲ್ಲಿ ಈ ವರ್ಷದ ಚಾತುರ್ಮಾಸ್ಯವನ್ನು ಸತ್ಯಧ್ಯಾನವಿದ್ಯಾಪೀಠದಲ್ಲಿ ನೆರವೇರಿಸುವುದೂ ದುಃಸಾಧ್ಯವಾಗಿದೆ. ಆದ್ದರಿಂದ ನಾವಿದ್ದಲ್ಲಿಯೇ ಚಾತುರ್ಮಾಸ್ಯಸಂಕಲ್ಪವನ್ನು ಮಾಡುತ್ತೇವೆ. ಇದೇ ಶ್ರೀಹರಿವಾಯುಗುರುಗಳ ಸಂಕಲ್ಪ. ಇದು ಶ್ರೀ ಸತ್ಯಧ್ಯಾನತೀರ್ಥರಿಗೂ ಸಂತೋಷದ ವಿಷಯವೇ ಸರಿ.

**ಚಾತುರ್ಮಾಸ್ಯಕ್ಕಾಗಿ ಶ್ರೀಮೂಲರಾಮನನ್ನು ಸೆರೆಹಿಡಿದ ಚತುರೆ ಗೋದಾವರೀ -**

12 ವರ್ಷಕ್ಕೊಮ್ಮೆ ಗೋದಾವರಿಯಲ್ಲಿ ಗಂಗೆಯ ವಿಶೇಷ ಸನ್ನಿಧಾನ. ಆಗ ಲಕ್ಷ ಲಕ್ಷ ಜನ ಗೋದಾವರಿಯಲ್ಲಿ ಮಿಂದು ತಮ್ಮ ಪಾಪಗಳನ್ನು ಕಳೆದುಕೊಳ್ಳುತ್ತಾರೆ. ಎಲ್ಲರೂ ತಮ್ಮ ಪಾಪದ ಕೊಳೆಯನ್ನು ಗೋದಾವರಿಯಲ್ಲಿ ಬಿಡುತ್ತಾರೆ. ಗೋದಾವರೀ ಚಿಂತಿಸಿದಳು. "ಭಕ್ತರೆಲ್ಲಾ ನನ್ನಲ್ಲಿ ಬಿಟ್ಟ ಈ ಪಾಪಗಳನ್ನು ನಾನು ತೊಳೆದುಕೊಳ್ಳುವುದು ಹೇಗೆ?" ಹೊಳಿಯಿತೊಂದು ಉಪಾಯ. "ಭಗವಂತನ ಅನಂತ ಸನ್ನಿಧಾನವಿರುವ ವ್ಯಾಸಮುಷ್ಟಿಗಳನ್ನು ನಿತ್ಯವೂ ನನ್ನ ನೀರಿನಿಂದ ತೊಳೆದು, ನನ್ನ ಪಾಪಗಳನ್ನು ತೊಳೆದುಕೊಳ್ಳುವೆ" ಎಂದು ಬಯಸಿದಳು. "ಕಳೆದ 5-6 ಬಾರಿಯ ಪುಷ್ಕರದಲ್ಲಿಯೂ ವ್ಯಾಸಮುಷ್ಟಿಗಳ ಅಭಿಷೇಕದಿಂದ ನಾನು ಪಾವನಳಾಗಿದ್ದೇನೆ. ಸಂದೇಹವಿಲ್ಲ. ಆದರೆ, ಆ ಎಲ್ಲ ಸಂದರ್ಭಗಳಲ್ಲಿ ನನ್ನ ಸ್ವಾಮಿಗಾಗಿ ನನ್ನನ್ನು ನಾನು ಸಂಪೂರ್ಣವಾಗಿ ಸಮರ್ಪಣೆ ಮಾಡಿಕೊಳ್ಳಲು ಆಗಲಿಲ್ಲ. ಬರುವ ಲಕ್ಷ ಲಕ್ಷ ಜನರ ಪಾಪ ಕಳೆಯುವದರಲ್ಲಿಯೂ ವ್ಯಸ್ತಳಾಗುತ್ತಿದ್ದೆ. ನಿಜ, ನನ್ನ ಮನಸ್ಸು ಆಗಲೂ ಭಗವಂತನಿಂದ ವಿಚಲಿತವಾಗಿರಲಿಲ್ಲ. ಆದರೂ ಇತರ ಬಹುವ್ಯಾಪಾರಗಳನ್ನು ಉಪರಮಿಸಿ ಕೇವಲ ರಮಾರಮಣನ ಚರಣಗಳಲ್ಲಿ ರತವಾಗುವ ಆನಂದವೇ ಬೇರೆ. ನನಗೆ ಬೇರೆ ಯಾರ ಸಂಪರ್ಕವೂ ಇಲ್ಲದೇ ಕೇವಲ ನನ್ನ ಸ್ವಾಮಿಯ ಸಂಪರ್ಕ ಮಾತ್ರ ಆಗಬೇಕು. ನನಗೂ ಸಾಮಾಜಿಕ ಅಂತರ ಬೇಕು. ನಾನೂ ಸರ್ವೋತ್ತಮನ ಹತ್ತಿರ ಏಕಾಂತದಲ್ಲಿ

ಇರಬೇಕು. ನಿತ್ಯವೂ ಅವನ ಪಾದ ತೊಳೆಯಬೇಕು. ನಿತ್ಯವೂ ಹರಿಪಾದೋದಕವಾಗಿ ಹರಿದು **ವೃದ್ಧಗಂಗೆ** ಎಂಬ ನಾಮವನ್ನು ಇನ್ನೂ ಹೆಚ್ಚು ಸಾರ್ಥಕಪಡಿಸಿಕೊಳ್ಳಬೇಕು" ಎಂದು ಗೋದಾವರಿ ಅಪೇಕ್ಷೆಪಟ್ಟು ಭಕ್ತಿಯ ಪಾಶದಿಂದ ಶ್ರೀಮೂಲರಾಮವೇದವ್ಯಾಸದೇವರನ್ನು ಸೆರೆ ಹಿಡಿದಿದ್ದಾಳೆ. "ಆ ಗುರು ಸಿಂಹದಲ್ಲಿ ಇಲ್ಲದಿದ್ದರೇನಂತೆ. ಈ ಮಹಾಗುರು ವೇದವ್ಯಾಸರನ್ನು ಸಿಂಹದಲ್ಲಿ ಎಲ್ಲಿಯೂ ಸಂಚಾರ ಮಾಡದೇ ಇಲ್ಲಿಯೇ ಇರುವಂತೆ ಮಾಡಿಕೊಳ್ಳುವೆ" ಎಂದು ಚಿಂತಿಸಿ, ಗುರುವೇದವ್ಯಾಸದೇವರು ತನ್ನಲ್ಲಿಯೇ ಚಾತುರ್ಮಾಸ್ಯ ವನ್ನು ಮಾಡುವಂತೆ ಗೌತಮರ ಮೂಲಕ ಪ್ರಾರ್ಥನೆ ಮಾಡಿಸಿದ್ದಾಳೆ. ಅವಳ ಭಕ್ತಿಗೆ ಒಲಿದ ಶ್ರೀಮೂಲರಾಮವೇದವ್ಯಾಸದೇವರು **ಗೋದಾವರೀತೀರದ ಸುವರ್ಣಪುರಿ-ಯಲ್ಲಿಯೇ ನಮ್ಮ 25 ನೆಯ ಚಾತುರ್ಮಾಸ್ಯದ** ಸಂಕಲ್ಪವನ್ನು ಮಾಡಲು ನಮ್ಮನ್ನು ಪ್ರೇರಿಸಿದ್ದಾರೆ. ಅವಳ ಅಪೇಕ್ಷೆಯಂತೆಯೇ ಈ ಚಾತುರ್ಮಾಸ್ಯ **ಅತ್ಯಂತ ಏಕಾಂತದ ಚಾತುರ್ಮಾಸ್ಯ.** ಇದಕ್ಕೆ ಸೇವಾಸಮಿತಿ ಇಲ್ಲ. ಇಲ್ಲಿ ಶ್ರೀರಾಮನ ಅಣತಿ, ಶ್ರೀಮದಾಚಾರ್ಯರ ಸಮ್ಮತಿ, ಗುರುಗಳ ಅನುಮತಿ, ಭಕ್ತರ ಸಹಮತಿಗಳು ಮಾತ್ರ ಇವೆ.

**ಏಷ ಆದೇಶಃ -** ಮುದ್ರಾಧಾರಣೆ, ಚಾತುರ್ಮಾಸ್ಯ, ನಿಮ್ಮ ನಿಮ್ಮವೈಯಕ್ತಿಕವಾದ ಕಾರ್ಯಕ್ರಮಗಳು, ಇನ್ನಾವುದೇ ಹಬ್ಬಹರಿದಿನಗಳು ಇತ್ಯಾದಿ ಯಾವ ವಿಶೇಷ ಸಂದರ್ಭಗಳೇ ಇರಬಹುದು ಅಥವಾ ಸರ್ಕಾರದ ಪ್ರತಿಬಂಧಾಜ್ಞೆ ಮುಗಿಯಿತು, ಸಂಚಾರ ಸುಗಮವಾಗಿದೆ, ಮುಕ್ತವಾಗಿದೆ ಎಂಬ ಕಾರಣಕ್ಕಾಗಿ ಆಗಲೀ **ನೀವುಗಳು ಪ್ರತ್ಯಕ್ಷವಾಗಿ ನಾವು ಇದ್ದ ಸ್ಥಳಕ್ಕೇ ಬಂದು ದೇವರ ದರ್ಶನ, ಪಾದಪೂಜಾ, ಮುದ್ರಾಧಾರಣ, ಮಂತ್ರಾಕ್ಷತೆ ಇತ್ಯಾದಿಗಳನ್ನು ಪಡೆಯುವ ಆತುರವನ್ನು ಸದ್ಯಕ್ಕೆ ತೋರಿಸುವುದು ಬೇಡ. ಸದ್ಯಕ್ಕೆ ನೀವು ನೀವು ಇರುವ ಸ್ಥಳದಲ್ಲಿಯೇ ಇದ್ದು ವ್ರತ, ಪಾರಾಯಣ, ಜಪಾದಿಗಳನ್ನು ಮಾಡಿ ಮೂಲರಾಮದೇವರಿಗೆ ಸಮರ್ಪಣೆ ಮಾಡಿ. ಸೂಕ್ತ ಸಮಯದಲ್ಲಿ ಸೂಕ್ತವಾದ ಸೂಚನೆಯನ್ನು ನೀಡಿದ ನಂತರ ಅವಶ್ಯವಾಗಿ ಎಲ್ಲರೂ ದರ್ಶನಾದಿಗಳಿಗೆ ಬರಬಹುದು. ನಾವೇ ನೀವಿದ್ದಲ್ಲಿಯೂ ಬರುತ್ತೇವೆ.** ಅಲ್ಲಿಯವರೆಗೂ ಎಲ್ಲರೂ ಸಾವಧಾನಚಿತ್ತರಾಗಿ ಕಾಯಬೇಕು. ಇದು ನಮ್ಮ ಶಿಷ್ಯರಿಗೆ ನಮ್ಮ ಅಂತರ್ಯಾಮಿ ಮಾಡುತ್ತಿರುವ ಆದೇಶ. ಅದನ್ನು ನೀವೆಲ್ಲರೂ ಪಾಲಿಸಲೇ ಬೇಕು. ಇದರಿಂದಲೇ ನಮಗೂ ಪ್ರೀತಿ. ರಾಮದೇವರಿಗೂ ಪ್ರೀತಿ. ಈ ಸಮಯದಲ್ಲೂ ಕಾಲಕಾಲಕ್ಕೆ ಎಲ್ಲರಿಗೂ ರಾಮದೇವರ ದರ್ಶನ, ನಮ್ಮ ಉಪನ್ಯಾಸಗಳ ಶ್ರವಣ ಮೊದಲಾದವುಗಳನ್ನು ಯಥಾಯೋಗ್ಯವಾಗಿ ಸಂದರ್ಭೋಚಿತವಾಗಿ ಆಯೋಜನೆ ಮಾಡಲು ಶಿಷ್ಯರಿಗೆ ನಿರ್ದೇಶನ ನೀಡಿದ್ದೇವೆ. ಪರಿಸ್ಥಿತಿಗೆ ಅನುಗುಣವಾಗಿ ನಮ್ಮ ನಿಮ್ಮೆಲ್ಲರ ಹಿತದ ದೃಷ್ಟಿಯಿಂದ ತೆಗೆದುಕೊಂಡ ನಿರ್ಧಾರವಿದು. ಸಮಾಜಕ್ಕೆ ರೋಗದ ಭೀತಿಯೂ ಹೌದು. ನಮ್ಮ ವೈಯಕ್ತಿಕವಾದ ಸಾಧನೆಯ ಪ್ರೀತಿಯೂ ಹೌದು. ಇದಕ್ಕೆ ನೀವೆಲ್ಲರೂ ಪೂರ್ಣವಾಗಿ ಸಹಕರಿಸುತ್ತೀರಿ ಎಂಬ ಪೂರ್ಣಭರವಸೆ ನಮಗಿದೆ.

ರಾಮದೇವರ ಬಗ್ಗೆ, ನಮ್ಮ ಬಗ್ಗೆ, ಶ್ರೀಮಠದ ಬಗ್ಗೆ ನಿಮಗಿರುವ ಅಪಾರವಾದ ಭಕ್ತಿ-ಶ್ರದ್ಧೆಗಳ ಅರಿವು ನಮಗೆ ಪೂರ್ಣವಾಗಿದೆ. ನೀವು ನಾವಿದ್ದಲ್ಲಿ ಬರದೇ ಇರುವುದು ನಿಮ್ಮ

ಭಕ್ತಿ-ಶ್ರದ್ಧೆಗಳಿಗೆ ಅವಮಾನ, ಅಗೌರವ ಎಂದು ಸರ್ವಥಾ ಭಾವಿಸಬೇಡಿ. ಪ್ರತ್ಯಕ್ಷ ದರ್ಶನ ಮಾಡದಿದ್ದರೆ ಭಕ್ತಿ-ಶ್ರದ್ಧೆಗಳ ಸಮರ್ಪಣೆಯಾಗುವುದಿಲ್ಲ ಎಂದೂ ತಿಳಿಯಬೇಡಿ. ನಿಮ್ಮ ಭಕ್ತಿ-ಶ್ರದ್ಧೆಗಳು ಅಷ್ಟು ಅಶಕ್ತವಲ್ಲ. ಎಷ್ಟು ದೂರ ಇದ್ದರೂ ರಾಮದೇವರಿಗೆ ಬಂದು ತಲುಪುವಷ್ಟು ವೇಗ-ಶಕ್ತಿಗಳು ನಿಮ್ಮ ಭಕ್ತಿಶ್ರದ್ಧೆಗಳಿಗೆ ಇವೆ. ಆದ್ದರಿಂದ ನೀವು ಇದ್ದಲ್ಲಿಯೇ ಇದ್ದು ನೀವು ಮಾಡಿದ ಸತ್ಕಾರ್ಯ-ಶುಭಕಾರ್ಯಗಳ ಸಮರ್ಪಣೆಯನ್ನು, ಮುಂದೆ ಮಾಡಲು ಅಪೇಕ್ಷಿಸಿದ ಸತ್ಕಾರ್ಯ-ಶುಭಕಾರ್ಯಗಳ ಸಂಕಲ್ಪವನ್ನು ಭಕ್ತಿಶ್ರದ್ಧಾಪೂರ್ವಕವಾಗಿ ರಾಮದೇವರಿಗೆ ತಲುಪಿಸಬಹುದು. ಸರ್ವವ್ಯಾಪ್ತ, ಸರ್ವಾಂತರ್ಯಾಮಿ, ಸರ್ವಸ್ವಾಮಿಯಾದ ಶ್ರೀಮೂಲರಾಮಚಂದ್ರ ಅವುಗಳನ್ನು ಸ್ವೀಕರಿಸಿ ನಿಮ್ಮ ಅಭೀಷ್ಟವನ್ನು ಅನುಗ್ರಹಿಸುವುದರಲ್ಲಿ ಸಂದೇಹವೇ ಇಲ್ಲ. ಭಕ್ತಿಪೂರ್ಣ ಮನಸ್ಸಿನಿಂದಲೇ ಶ್ರೀರಾಮನನ್ನು ಸಂಪರ್ಕಿಸಬಹುದು. ಆದರೂ ಸಮಾಧಾನಕ್ಕಾಗಿ ಆಧುನಿಕ ವಿವಿಧ ಮಾಧ್ಯಮಗಳ ಮೂಲಕವೂ ನಮ್ಮನ್ನು ಸಂಪರ್ಕಿಸುವ ಉಪಾಯಗಳು ಇದ್ದೇ ಇವೆ.

**ಏಷ ಉಪದೇಶಃ-** ಎಲ್ಲರೂ ಸಂಧ್ಯಾ-ಜಪ-ಪೂಜಾ-ಪಾರಾಯಣದಿ ಸತ್ಕರ್ಮಗಳನ್ನು ತಪ್ಪದೇ ಆಚರಿಸಿ. ಶಕ್ತಿ ಇದ್ದಷ್ಟು ಪರೋಪಕಾರ-ವ್ರತ-ನಿಯಮಾದಿಗಳನ್ನು ಆಚರಿಸಿ. ಸಮಯ ಇದ್ದಷ್ಟು ಭಾರತ-ಭಾಗವತ-ರಾಮಾಯಣ-ಸರ್ವಮೂಲಾದಿ ಗ್ರಂಥಗಳ ಶ್ರವಣಾದಿಗಳನ್ನು ತಪ್ಪದೇ ಮಾಡಿ. ಮಾಡುವ ಸತ್ಕರ್ಮಗಳನ್ನೆಲ್ಲಾ ಭಗವಂತನ ಪೂಜೆ ಎಂದು ಚಿಂತಿಸಿ. ತಂದೆ-ತಾಯಿಗಳನ್ನು ಗೌರವಿಸಿ. ಹೆಂಡತಿ-ಮಕ್ಕಳನ್ನು ಪ್ರೀತಿಸಿ. ಹಿರಿಯರನ್ನು ಆದರಿಸಿ. ಕರ್ತವ್ಯಕರ್ಮಗಳನ್ನು ಪಾಲಿಸಿ. ಇವೆಲ್ಲವೂ ದೇವರ ಪ್ರೀತಿಗಾಗಿ ಎಂದು ಭಾವಿಸಿ.

ಭಗವಂತ ನಿಮಗೆ ಈ ಎಲ್ಲ ಸತ್ಕರ್ಮಗಳನ್ನು ಮಾಡುವ ಇಚ್ಛೆಯನ್ನು, ಶಕ್ತಿಯನ್ನೂ ನೀಡಿ ನಿಮ್ಮಲ್ಲಿ ನಿಂತು ಆ ಸತ್ಕರ್ಮಗಳನ್ನು ನಿರ್ವಿಘ್ನವಾಗಿ ಮಾಡಿಸಲಿ ಎಂದು,

ಈ ಪ್ರಸಂಗದಲ್ಲಿ ನಮ್ಮ ಕರೆಗೆ ಓಗೊಟ್ಟು ನೀವೆಲ್ಲ ಜಗತ್ತಿನ ಕ್ಷೇಮಕ್ಕಾಗಿ ಪಾರಾಯಣ ಜಪಾದಿಗಳನ್ನು ಮಾಡಿದ್ದೀರಿ. ಸಂಕಷ್ಟದಲ್ಲಿರುವವರಿಗೆ ಸಹಾಯದ ಹಸ್ತಗಳನ್ನು ಚಾಚಿದ್ದೀರಿ. ಈ ಸತ್ಕಾರ್ಯಗಳನ್ನು ಮಾಡಿದ ತಮ್ಮೆಲ್ಲರನ್ನೂ ಅಭಿನಂದಿಸುತ್ತಾ ಆ ಎಲ್ಲ ಸತ್ಕರ್ಮಗಳನ್ನೂ ಭಗವಂತ ತನ್ನ ಪೂಜೆ ಎಂಬುದಾಗಿ ಸ್ವೀಕರಿಸಲಿ ಎಂದೂ, ನಿಮ್ಮ ಸೇವಾಕಾರ್ಯಕ್ಕೆ ಮೆಚ್ಚಿ ನಿಮಗೂ ನಿಮ್ಮ ಪರಿವಾರಕ್ಕೂ ಸದಾ ಮಂಗಳವನ್ನು ಮಾಡಲಿ ಎಂದೂ,

ಭಗವಂತ ನಮ್ಮ-ನಿಮ್ಮೆಲ್ಲರ ಪ್ರಾರ್ಥನೆಯನ್ನು ಕೇಳಿ ನಮಗೆ, ನಿಮಗೆ, ದೇಶಕ್ಕೆ, ಇಡೀ ವಿಶ್ವಕ್ಕೆ ಒದಗಿಬಂದ ಈ ಆಪತ್ತು ಅತಿಶೀಘ್ರದಲ್ಲಿ ನಿವಾರಣೆಯಾಗಿ ಪ್ರತಿಯೊಬ್ಬರೂ ಸುಖವಾಗಿ ಇರುವಂತೆ ಮಾಡಲಿ ಎಂದೂ, ಪ್ರತಿಯೊಬ್ಬರಿಗೂ ವಿಶೇಷವಾಗಿ ಜ್ಞಾನ-ಭಕ್ತಿ-ವೈರಾಗ್ಯಗಳನ್ನು, ಧರ್ಮದಲ್ಲಿ ಆಸಕ್ತಿಯನ್ನು ನೀಡಲಿ ಎಂದೂ, ಅಸ್ಮದುಪಾಸ್ಯ ಮೂರ್ತಿ ಶ್ರೀ ಮೂಲಸೀತಾಮಸಮೇತಶ್ರೀಮೂಲರಾಮದಿಗ್ವಿಜಯರಾಮ ವೇದವ್ಯಾಸವಂಶರಾಮಪ್ರಸನ್ನವಿಠ್ಠಲದೇವರಲ್ಲಿ ಪ್ರಾರ್ಥಿಸುತ್ತೇವೆ. ಇತ್ಯನೇಕ ನಾರಾಯಣ ಸ್ಮರಣೆಗಳೊಂದಿಗೆ




**-ಶ್ರೀ ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರು** ಉತ್ತರಾದಿಮಠ



# ಧರ್ಮಕಾಮ

✍ ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ

ಚತುರ್ವಿಧ ಪುರುಷಾರ್ಥಗಳಲ್ಲಿ ಕಾಮವೂ ಒಂದು. ನಮ್ಮ ಜೀವನದ ಫಲಸಾಧನೆಗೆ ಕಾಮವು ಬೇಕು. ಅರ್ಥವೂ ಬೇಕು. ಕಾಮವು ಧರ್ಮಕಾಮವಾಗಿರಬೇಕಷ್ಟೇ. ಕಾಮಕ್ಕೆ ಎರಡು ಮುಖ. ಒಂದು ಬಾಹ್ಯಮುಖ. ಅಂತರಮುಖ. ಬಾಹ್ಯಮುಖ ಗೌಣ. ಅಂತರಮುಖ ಪ್ರಧಾನ. ಈ ಎಚ್ಚರವು ಬ್ರಹ್ಮಕಾಮಕ್ಕೆ ಸುಗಮಸ್ಥಿತಿಯನ್ನೇ ತಂದುಕೊಡುತ್ತದೆ. ಕಾಮ ಅಂತರಮುಖವಾದಾಗ ಅದೇ ಧರ್ಮಕಾಮ. ಕಾಮ ಒಂದು ಶಕ್ತಿ. ಅದು ದುರ್ಬಲರ ಕೈಗೆ ಸಿಕ್ಕಾಗ ನರಕವಾಗುತ್ತದೆ. ಸಮರ್ಥರ ಕೈಗೆ ಸಿಕ್ಕಾಗ ಮೋಕ್ಷವಾಗುತ್ತದೆ. ಕಾಮ ಕೇವಲ ದೇಹಕ್ಕೆ ಸಂಬಂಧಪಟ್ಟಿಲ್ಲ. ಅದು ಮನಸ್ಸಿಗೂ ಸಂಬಂಧಿಸಿದ್ದು.

ಹಿಂದೆ ಭಾರದ್ವಾಜರೆಂಬ ಋಷಿ ಶ್ರೇಷ್ಠರು ಇದ್ದರು. ಒಂದು ಸಂಜೆ ಭಾರದ್ವಾಜರು ಪ್ರವಚನವನ್ನು ಮುಗಿಸಿ ಆಹ್ನೀಕಕ್ಕೆ ಹೊರಟಾಗ ಇಬ್ಬರು ಸಂನ್ಯಾಸಿಗಳು ಅವರನ್ನು ಕಂಡು, ನಾವು ಕಾಶ್ಮೀರದಿಂದ ಬಂದಿದ್ದೇವೆ ಎಂದು ತಿಳಿಸಿದರು. ನನ್ನಿಂದ ಏನಾಗಬೇಕು ? ಎಂದು ಕೇಳಿದರು ಭಾರದ್ವಾಜರು. ಆಗ ಆ ಸಂನ್ಯಾಸಿಗಳಿಬ್ಬರೂ ನಾವು ಸಂನ್ಯಾಸವನ್ನು ಸ್ವೀಕರಿಸಿದ್ದೇವೆ. ನಾವು ಬ್ರಹ್ಮಚರ್ಯವನ್ನೇ ಸಾಧಿಸಬೇಕಿದೆ. ತಾವು ನಮಗೆ ಬ್ರಹ್ಮಚರ್ಯವನ್ನೇ ಕರುಣಿಸಬೇಕು ಎಂದರು. ಭಾರದ್ವಾಜರು ಆ ಸಂನ್ಯಾಸಿಗಳ ಮಾತು ಕೇಳಿ ಮುಗುಳ್ನಕ್ಕು 'ಆಯಿತು. ಬೆಳಿಗ್ಗೆ ಶಿಷ್ಯರು ಬರುವ ಮುನ್ನ ನಮ್ಮ ಪೂಜಾಗೃಹಕ್ಕೆ ಬನ್ನಿ' ಎಂದರು. ಆಗ ಆ ಸಂನ್ಯಾಸಿಗಳಿಬ್ಬರು ಪರಸ್ಪರ ನೋಡಿಕೊಂಡರು. ಅವರಲ್ಲಿ ಒಬ್ಬ ಭಗವನ್ ! ನಿಮ್ಮ ಪೂಜಾಗೃಹದಲ್ಲಿ ಹೆಂಗಸರು ಇರುವದಿಲ್ಲವಷ್ಟೇ ? ಎಂದು ಕೇಳಿದರು. ಆಗ ಭಾರದ್ವಾಜರು ನಿರ್ವಿಕಾರವಾಗಿ ಯಾಕೆ ಇದ್ದರೆ ಏನಾಗುತ್ತದೆ? ಎಂದರು. ಆಗ ''ನಮಗೆ ಬರಲು ಸಾಧ್ಯವಿಲ್ಲ, ನಮಗೆ ಬೇಕಾದದ್ದು ಬ್ರಹ್ಮಚರ್ಯ. ಸ್ತ್ರೀಯರು ಅಲ್ಲಿ ಇರುವಾಗ ನಾವು ಪಡೆಯುವುದಾದರೂ ಹೇಗೆ. ನಾವು ಬರುವದಿಲ್ಲ. ಸ್ತ್ರೀಯರು ಇದ್ದರೆ ಬ್ರಹ್ಮಚರ್ಯ ಹೇಗೆ ಉಳಿದೀತು? ಸ್ತ್ರೀಯರು ಬ್ರಹ್ಮಚರ್ಯಕ್ಕೆ ನಿಷಿದ್ಧ'' ಎಂದು ಅವರಿಬ್ಬರು ಒದ್ದಾಡುತ್ತ ಹೇಳಿದರು. ಆಗ ಭಾರದ್ವಾಜರು ನಿಮಗೆ ತಾಯಿ ಇದ್ದಾಳಲ್ಲವೇ ? ಎಂದು ಕೇಳಿದರು. ಇದ್ದಾಳೆ ಎಂದು ಅವರು ಹೇಳಿದರು. ಅಂತೂ ತಾಯಿ ಎಂಬ ವಸ್ತು ಇಬ್ಬರಿಗೂ ಇದ್ದಮೇಲೆ ಆ ತಾಯಿ ಹೆಂಗಸು ಎಂದು ಖಚಿತವಾಗಿ ನಂಬುತ್ತೇನೆ ಎಂದರು. ಭಾರದ್ವಾಜರ ಮಾತಿಗೆ ಸಂನ್ಯಾಸಿಗಳಿಬ್ಬರು ಗಲಿಬಲಿಗೊಂಡರು. ಭಾರದ್ವಾಜರು ಆಗ ತರುಣಸಂನ್ಯಾಸಿಗಳೇ ! ನಿಮ್ಮ ರಕ್ತ, ಮಾಂಸ, ಮೂಳೆಯಲ್ಲಿ ಸ್ತ್ರೀಯರೇ ಆದ ನಿಮ್ಮ ತಾಯಿಯ ಭಾಗಗಳೇ ಉಂಟು. ನಿಮ್ಮ ಬ್ರಹ್ಮಚರ್ಯಕ್ಕೆ ಸ್ತ್ರೀ ನಿಷಿದ್ಧವಾದರೆ ಇವುಗಳನ್ನೆಲ್ಲ ತಡೆದುಹಾಕಲು ಸಾಧ್ಯವೇ? ಸ್ತ್ರೀಯರ ಬಗ್ಗೆ ಈ ತರಹದ ಭಾವನೆ ಸಲ್ಲದು. ಸ್ತ್ರೀಯರನ್ನು ಕಾಣದೇ ಇರುವದು ಬ್ರಹ್ಮಚರ್ಯವಲ್ಲ. ಪರಸ್ತ್ರೀಯರನ್ನು ಕಂಡರೂ ಸಹೋದರಿ, ಮಾತೃಭಾವನೆಯನ್ನು ಕಾಣುವದು ಬ್ರಹ್ಮಚರ್ಯ. ಭಾರದ್ವಾಜರ ಮಾತನ್ನು ಕೇಳಿ ಅವರಿಬ್ಬರಿಗೂ ಕಾಮದ ಬಗ್ಗೆ ಹೊಸದಾದ ಭಾವನೆ ಬಂದಿತು. ನಾವು ಕಾಮವನ್ನು ಎತ್ತರದಲ್ಲಿಟ್ಟು ನೋಡಬೇಕಷ್ಟೇ. ನಮ್ಮ ಭಾವನೆಯಿಂದ ಅದನ್ನೇ ಮಲಿನಗೊಳಿಸಬಾರದು. ಆದರೆ ನಾವು ನಮ್ಮ ಭಾವನೆಗಳನ್ನು ಕೆಡಿಸಿಕೊಂಡುಬಿಟ್ಟಿದ್ದೇವೆ. ನಾವು ಇದರಿಂದ ಪಾರಾಗದೇ ಇದ್ದರೆ ನಮ್ಮ ಕಾಮವು ಧರ್ಮಕಾಮವಾಗಲು ಸಾಧ್ಯವಿಲ್ಲ. ✻✻

# ಶ್ರೀಕೃಷ್ಣ

✍ ಪಂ. ಮಳಗಿ ಜಯತೀರ್ಥಾಚಾರ್ಯ

''ಕಾಲಾತ್ಮನಾ ಭಗವತಾ ಶಕ್ರದರ್ಪಜಿಘಾಂಸಯಾ'' (ಭಾಗ.10-22-30)
''ಅವಿಸ್ಮರಣಾಯ ತಸ್ಯ । ಮಾ ಮಾನುಷೋಽಯಮಿತಿ ಮಾಮಗಚ್ಛತಾತ್ಸಃ'' ತಾ.ನಿ.

ಭಗವಂತನ ಭಕ್ತರಿಗೂ ಹಲವುಸಲ ಅಧಿಕಾರ, ವೈಭವ, ಬಲ ನಿಮಿತ್ತ ಅಹಂಕಾರ ಬರುವುದು ಸಹಜ. ಅದರಿಂದ ಸರ್ವನಿಯಾಮಕ ದೇವರನ್ನು ಮರೆಯುವರು. ದೇವರು ಉಪಾಯದಿಂದ ಭಕ್ತರ ಅಹಂಕಾರ ಕಳೆಯುವ. ಅದು ಅವಮಾನವಲ್ಲ, ಅನುಗ್ರಹ. ಇಂದ್ರಾವತಾರಿ ಅರ್ಜುನನಿಗೆ ''ನಾನು ಭೀಮನಿಗಿಂತ ಬಲಾಢ್ಯ''ನೆಂಬ ಅಹಂಭಾವ ಮೂಡಿತು. ಅದಕ್ಕೆ ಶ್ರೀಕೃಷ್ಣ ಜರಾಸಂಧನ ಸಂಹಾರಕ್ಕೆ ಭೀಮನ ಜೊತೆಗೆ ಅರ್ಜುನನನ್ನೂ ಕರೆದುಕೊಂಡು ಹೋದ. ಆಗ ಜರಾಸಂಧ ಈ ಅರ್ಜುನನನ್ನು ಕಂಡು ಹಾಸ್ಯ ಮಾಡಿದ. ''ಪಂಚಪಂಚಾಶದಬ್ದೋಽಯಂ ಬಾಲ ಏವ ಮತೋ ಮಮ'' (ತಾ.ನಿ.) ''ಏನು ಕೃಷ್ಣ ! ಈ ಐವತ್ತೈದು ವರುಷದ ಬಾಲಕ ಅರ್ಜುನ. ಇವನೊಡನೆ ನಾನೇನು ಕಾದಾಡುವದು ? ನಾನು ಕಾದಾಡುವುದಾದರೆ ಭೀಮನೊಡನೆ ಮಾತ್ರ'' ಎಂದ. ಅದನ್ನು ಕೇಳಿ ಅರ್ಜುನ ತಲೆ ತಗ್ಗಿಸಿದ. ಅರ್ಜುನನಿಗೆ ಬಂದ ಅಹಂಕಾರ ಜರಾಸಂಧನ ಮಾತಿನಿಂದ ಇಳಿದಿತ್ತು. ಭೀಮನಿಗಿಂತ ತಾನು ಪರಾಕ್ರಮಿ ಎಂದು ಅರ್ಜುನ ಭಾವಿಸಿದ್ದ. ಅದನ್ನು ಶ್ರೀಕೃಷ್ಣ ಜರಾಸಂಧನ ಮಾತಿನಿಂದ ಪರಿಹರಿಸಿದ. ಅರ್ಜುನನಿಗೆ ತನ್ನ ಹಾಗೂ ಭೀಮನ ವಾಸ್ತವಜ್ಞಾನವಾಯಿತು. ಮತ್ತೊಮ್ಮೆ ಶ್ರೀಕೃಷ್ಣ ಒಂದೇ ದಿನದ ಅಶ್ವಮೇಧಯಜ್ಞ ಹೂಡಿದ. ಮಧ್ಯದಲ್ಲಿ ಬ್ರಾಹ್ಮಣನೊಬ್ಬ ಬಂದ. ''ತನ್ನ ಹುಟ್ಟಿದ ಮಕ್ಕಳೆಲ್ಲ ಸಾಯುತ್ತಿವೆ. ಈಗೊಂದು ಮಗುವು ಹುಟ್ಟುವದಿದೆ. ಶ್ರೀಕೃಷ್ಣ! ನೀನೇ ಬಂದು ರಕ್ಷಿಸು'' ಎಂದ. ಶ್ರೀಕೃಷ್ಣ ಯಜ್ಞದೀಕ್ಷಿತ. ಆಗ ಅರ್ಜುನ ಹೇಳಿದ ''ನಾನು ಬರುವೆ. ಹುಟ್ಟುವ ಮಗನನ್ನು ರಕ್ಷಿಸುವೆ'' ಎಂದ. ಬ್ರಾಹ್ಮಣ ನಿಷ್ಠುರ. ಅರ್ಜುನ ! ಈ ಕೆಲಸ ನಿನ್ನಿಂದಾಗದು, ಕೃಷ್ಣನೇ ಸಮರ್ಥನೆಂದ. ಅರ್ಜುನನ ಅಹಂಕಾರ ಹೆಚ್ಚಿತು. ಅಭಿಮಾನ ಉಕ್ಕಿತು. ''ನ ವಿಪ್ರ ತಾದೃಶೋಽಸ್ಮ್ಯಹಮ್ ಯಥೈವ ಕೇಶವಾದಯಃ'' (ತಾ.ನಿ.) ಅರ್ಜುನ ನುಡಿದ - ''ಬ್ರಾಹ್ಮಣ ! ನನ್ನನ್ನು ಏನೆಂದು ತಿಳಿದಿರುವಿ ? ನಾನೇನು ಕೃಷ್ಣನೇನು ? ನಾನು ಅರ್ಜುನ'' ಎಂದ. ಶ್ರೀಕೃಷ್ಣ ನಸುನಕ್ಕ. ''ನಾನು ನಿನ್ನ ಮಗುವನ್ನು ರಕ್ಷಿಸಲಿಲ್ಲವಾದರೆ ಅಗ್ನಿಪ್ರವೇಶ ಮಾಡುವೆ'' ಎಂದ. ಹುಟ್ಟಿದ ಬ್ರಾಹ್ಮಣನ ಶಿಶು ಹುಟ್ಟಿದಾಕ್ಷಣ ಮಾಯವಾಯಿತು. ಆಗ ಶ್ರೀಕೃಷ್ಣ ಅರ್ಜುನನ ಅಹಂಕಾರ ಕಳೆದು, ಮತ್ತೆ ಆ ಶಿಶುವನ್ನು ತಂದು, ಅರ್ಜುನನ ಅಗ್ನಿಪ್ರವೇಶ ಉಳಿಸಿದ. ಹೀಗೆ ತನ್ನ ಭಕ್ತರಿಗೆ ಆಗಾಗ ಬರುವ ಅಹಂಕಾರವನ್ನು ಅವಮಾನದಿಂದ ಇಳಿಸುವ. ಅಭಿಮಾನ ಕಳೆಯುವ. ಅಧಿಕಾರ, ವೈಭವ ಮೊಟಕುಗೊಳಿಸುವ. ಅದಕ್ಕೆ ದಾಸರ ಅನುಭವದ ಮಾತು - ''ಅಪಮಾನವಾದರೆ ಒಳಿತು'' ''ಇಟ್ಹಾಂಗೆ ಇರುವೆನೋ ಹರಿಯೇ'' ಎಂದು. ''ವಿಪದ್ ವಿಸ್ಮರಣಂ ಸ್ಮೃತಮ್'' ದೇವರ ಮರೆವು ಅದೇ ವಿಪತ್ತು. ಅದರಿಂದಲೇ ವಿಪತ್ತು. ಆಪತ್ತು, ಅವಮಾನ. ಶ್ರೀಹರಿಯೇ

''ಉಪರಿಚರ'' ಎಲ್ಲರ ಮೇಲೆ ಅವನ ಶಾಸನ. ಎಲ್ಲರ ಮೇಲೆ ಎಲ್ಲವನ್ನು ನೋಡುವ ದೇವನೊಬ್ಬನಿರುವನೆಂಬುದನ್ನು ಯಾರೂ ಮರೆಯಬಾರದು.

ಇಂದ್ರದೇವರು ಸಾರ್ವಭೌಮ ಸರ್ವೇಶನನ್ನು ಮರೆತರು. 'ಶ್ರೀಕೃಷ್ಣ ಅವನೊಬ್ಬ ಮನುಷ್ಯ. ಮನುಷ್ಯ ಸಹಜಗುಣಗಳು ಅವನಲ್ಲಿ' ಎಂದು ಬಗೆದಿದ್ದರು. ಅದಕ್ಕೆ ಶ್ರೀಕೃಷ್ಣ 'ಇಂದ್ರಯಜ್ಞ ಇಂದ್ರಮಹೋತ್ಸವ' ತಡೆದು ನಿಲ್ಲಿಸಿದ. ನಂದಾದಿಗಳು ಶ್ರೀಕೃಷ್ಣನ ಅಣತೆಯಂತೆ ವೈಭವದಿಂದ ಗೋವರ್ಧನ ಮಹೋತ್ಸವ ಆಚರಿಸಿದರು. ಸರ್ವರ ಅಂತರ್ಯಾಮಿ ಶ್ರೀಹರಿಯನ್ನು ವೈಭವದಿಂದ ಆರಾಧಿಸಿದರು. ಪುಣ್ಯಾಹ-ವಾಚನ ಪೂರ್ವಕವಾಗಿ, ಇಂದ್ರಯಜ್ಞಕ್ಕಾಗಿ ಸಿದ್ಧಪಡಿಸಿದ ಎಲ್ಲ ಪದಾರ್ಥಗಳಿಂದ ಗೋ-ಬ್ರಾಹ್ಮಣರನ್ನು ಆರಾಧಿಸಿದರು. ಎಲ್ಲರಿಗೂ ಅನ್ನದಾನ ಮಾಡಿದರು. ಎಲ್ಲರೂ ಬಂಡಿಯಲ್ಲಿ ಕುಳಿತು ಗೋವರ್ಧನಪರ್ವತಕ್ಕೆ ಪ್ರದಕ್ಷಿಣೆ ಹಾಕಿದರು.

**''ಭೂತ್ವಾऽತಿವಿಸ್ತೃತತನುಃ ಬುಭುಜೇ ಬಲಿಂ ಸಃ'' (ತಾ. ನಿ. 13/63)**

ಶ್ರೀಕೃಷ್ಣ ತಾನು ವಿಶಾಲವಾದ ಪ್ರಚಂಡದೇಹ ಧರಿಸಿದ. ಗೋಪರೆಲ್ಲ ಸಿದ್ಧಪಡಿಸಿದ ಅಪಾರಪದಾರ್ಥಗಳನ್ನು ಸ್ವೀಕರಿಸಿದ. ಅವತಾರಗಳಲ್ಲಿ ಪ್ರಾಕೃತರಸಭೋಗ ಶ್ರೀಹರಿಗೆ ಉಂಟು. ನಾನಾವಿಧವಾದ ರಸ, ಪಾನಗಳನ್ನು ಶ್ರೀಕೃಷ್ಣ ಸ್ವೀಕರಿಸಿದ. ನಂದಾದಿಗಳನ್ನು ಆನಂದಗೊಳಿಸಿದ. ಅಚ್ಚರಿಪಡಿಸಿದ. ಗೋಪರಿಗೆ ಹಿಡಿಸಲಾರದಷ್ಟು ಹರುಷ. ಹಲವರಿಗೆ ಇಂದ್ರಪೂಜೆ ನಿಂತಿದ್ದಕ್ಕೆ ಒಳಗೆ ಭಯ. ಶ್ರೀಕೃಷ್ಣನಲ್ಲಿ ವಿಶ್ವಾಸವೂ ಇದ್ದಿತು. ಶ್ರೀಕೃಷ್ಣನ ಅವತಾರ ಲೀಲೆಗಳನ್ನು ಹಾಡುತ್ತ ಬೆಟ್ಟಕ್ಕೆ ಪ್ರದಕ್ಷಿಣೆ ಹಾಕಿದರು. ಶ್ರೀಕೃಷ್ಣ ಬೆಟ್ಟದಾಕಾರದಲ್ಲಿ ಭುಂಜಿಸಿದ. ಗೋಪರೊಡನೆ ಬೆಟ್ಟಕ್ಕೆ ವಂದಿಸಿದ. ಅನೇಕ ರೂಪ ತಳೆದ. ವಿಶ್ವಾಸ ಹೆಚ್ಚಿಸಿದ.

**ಭಗವಂತನ ತಿರಸ್ಕಾರ ಆಪತ್ತಿಗೆ ಪುರಸ್ಕಾರ – ''ಯೇ ಅತ್ಯಾಯನ್ ತೇ ಪರಾಬಭೂವುಃ, ಯೇ ನ ಅತ್ಯಾಯನ್ ನ ತೇ ಪರಾಬಭೂವುಃ''** (ಐತರೇಯ.ಉಪ.) ಯಾರು ದೇವರನ್ನು ಮರೆತರೋ, ಬಿಟ್ಟರೋ ಅವರೆಲ್ಲ ಬದುಕಿನಲ್ಲಿ ಪರಾಭವ ಹೊಂದುವರು. ಯಾರು ದೇವರನ್ನು ಎಂದಿಗೂ ಮರೆಯಲಿಲ್ಲವೋ ಅವರಿಗೆ ಯಾವ ಕ್ಷೇತ್ರದಲ್ಲಿಯೂ ಪರಾಜಯವೇ ಇಲ್ಲ. ಇದು ಉಪನಿಷತ್ ವಾಣಿ.**''ಯಥಾ ವಿಧಾಯ ಗೋಪಾಲಾಃ ಸಹ ಕೃಷ್ಣಾ ವ್ರಜಂ ಯಯುಃ ।''** ಇತ್ತ ಇಂದ್ರನಿಗೆ ತನ್ನ ಪೂಜೆ ನಿಂತದ್ದು ಕಂಡು ಸಿಟ್ಟು ಬಂದಿತು.

**''ಇಂದ್ರೋऽಥ ವಿಸ್ಮೃತರಥಾಂಗಧರಾವತಾರಃ ಮೇಘಾನ್ ಸಮಾದಿಶತ್''** ತಾ. ನಿ.
**''ಇತ್ಥಂ ಪ್ರಾಚೋದಯತ್ ಕ್ರುದ್ಧಃ ವಾಕ್ಯಂ ಚಾಹೇಶ ಮನ್ಯುನಾ''** ಭಾಗ.

ಇಂದ್ರ ಹೇಳಿದ. ಇವರು ಸಾಮಾನ್ಯಗೊಲ್ಲರು. ಕಾಡಿನಲ್ಲಿ ವಾಸ. ದನಗಳ ಸಹವಾಸ. ಇವರಿಗೆ ಅದೆಷ್ಟು ಸೊಕ್ಕು. ಆ ಕೃಷ್ಣನನ್ನು ನಂಬಿ ನನ್ನನ್ನು ಅವಮಾನಿ-ಸುತ್ತಿರುವರು. ನಾನು ಸ್ವರ್ಗದ ಅಧಿಪತಿ. ದೇವತೆಗಳ ಒಡೆಯ. ದೇವೇಂದ್ರ. ಇಂತಹ ನನಗೆ ಅವಮಾನ ಮಾಡಿದರು. **''ವಾಚಾಲಂ ಮಾನಿನಂ ಮತ್ತಂ ಅಜ್ಞಂ ಪಂಡಿತ-ಮಾನಿನಮ್ । ಕೃಷ್ಣಂ ಮರ್ತ್ಯಂ ಉಪಾಶ್ರಿತ್ಯ ಗೋಪಾ ಮೇ ಚಕ್ರುರಪ್ರಿಯಮ್ ॥''** ಭಾಗ

ಶ್ರೀಕೃಷ್ಣ ಮಾತುಗಾರ. ಅಹಂಕಾರಿ. ಅವನಿಗೆ ನನ್ನ ಸಾಮರ್ಥ್ಯದ ಅರಿವಿಲ್ಲ. ತಾನೊಬ್ಬ ಮಹಾಜ್ಞಾನಿ ಎಂದು ಬಗೆದಿರುವ. ಅವನೊಬ್ಬ ಸಾಮಾನ್ಯ ಮನುಷ್ಯ. ಅವನ ಮಾತು ಕೇಳಿ ನಂದಾದಿಗಳು ನನ್ನ ಆರಾಧನೆ ಮರೆತರು. ಗಿರಿಯಜ್ಞ ಮಾಡಿದರು. ಈ ಜನಗಳಿಗೆ ಶಾಸ್ತ್ರಜ್ಞಾನಕ್ಕಿಂತ ಸಕಾಮಕರ್ಮಗಳ ಆಕರ್ಷಣೆ ಹೆಚ್ಚು. ಇವರಿಗೆ ಬುದ್ಧಿ ಕಲಿಸಬೇಕು. ಅದಕ್ಕಾಗಿ -

**''ಮೇಘಾನ್ ಸಮಾದಿಶದುರೂದಕಪೂಗವೃಷ್ಟ್ಯೈ ।**
**ತೇ ಪ್ರೇರಿತಾಃ ಸಕಲಗೋಕುಲನಾಶನಾಯ ಧಾರಾ ವಿತೇರುಃ ॥''** ತಾ.ನಿ.

ಮೇಘಗಳಿಗೆ ಆಜ್ಞೆ ಮಾಡಿದ. ''ನೀವೆಲ್ಲ ಗೋಕುಲಕ್ಕೆ ತೆರಳಿ ಭಾರೀಮಳೆ ಸುರಿಸಿರಿ. ಗೋಕುಲದ ಮನೆಗಳು ಉಳಿದಿರಬಾರದು. ಗೋಶಾಲೆ ನಾಶಪಡಿಸಿರಿ. ನಾನು ನಿಮ್ಮ ಹಿಂದೆಯೇ ಐರಾವತ ಏರಿ ಬರುವೆ'' ಎಂದು. ವಾಯುದೇವರನ್ನು ಬಿಟ್ಟು ಉಳಿದವರಿಗೆ ಒಮ್ಮೊಮ್ಮೆ ಅಸುರಾವೇಶ ಸಹಜ. ಅದರಿಂದಾಗಿ ಇಂದ್ರನ ಈ ಮಾತುಗಳು. ಗೋಕುಲದಲ್ಲಿ ಮೇಘಗಳು ಸುತ್ತಲೂ ಪಸರಿಸಿದವು. ಕತ್ತಲೆ, ಗುಡುಗು, ಸಿಡಿಲು, ಭಾರೀಮಳೆ. ಮಿಂಚು ಮಿಂಚಿದವು. ಧಾರಾಕಾರ ಮಳೆ. ಗೋಕುಲ ನೀರಿನಲ್ಲಿ ಮುಳುಗಿತು. ಎಲ್ಲಿ ನೋಡಿದರಲ್ಲಿ ಪ್ರವಾಹ. ಅತಿವೃಷ್ಟಿ.ವಿಪರೀತ ಚಳಿಗಾಳಿ. ಶೀತವಾತಕ್ಕೆ ಎಲ್ಲರೂ ನಡುಗಿದರು. ಶ್ರೀಕೃಷ್ಣನಿಗೆ ಎಲ್ಲರೂ ಮೊರೆಹೊಕ್ಕರು. ''ನಿನ್ನ ಮಾತಿನಂತೆ ನಡೆದವು. ಈಗ ರಕ್ಷಿಸು'' ಎಂದು ಬೇಡಿಕೊಂಡರು. ಶ್ರೀಕೃಷ್ಣ ಅಭಯ ನೀಡಿದ. ಮಳೆ, ಗಾಳಿ, ಚಳಿಗಳೆಲ್ಲ ಇಂದ್ರನ ಕಾಯಕವೆಂದು ಅರಿತ. ಗೋಕುಲ, ಗೋಪರು, ಗೋವುಗಳನ್ನು ಕೂಡಲೇ ಕಾಪಾಡಲು ಬಯಸಿದ. ಅಧಿಕಾರ, ಐಶ್ವರ್ಯದ ಮದದಿಂದ ದೇವರನ್ನು ಮರೆತ ಇಂದ್ರನಿಗೆ ಬುದ್ಧಿ ಕಲಿಸಲು ಅಪೇಕ್ಷಿಸಿದ. ತನ್ನ ಭಕ್ತರಿಗೆ ಅಹಂಕಾರ ಬರಬಾರದು. ಭಕ್ತಿ ಹೆಚ್ಚಬೇಕು. ವಿವೇಕ ಬೆಳೆಯಬೇಕು. ವಿನಯ ತುಂಬಿರಬೇಕು. ಇದು ಶ್ರೀಹರಿಯ ಅಪೇಕ್ಷೆ. ಶಿಕ್ಷೆ ನೀಡಲಿಲ್ಲ. ಶಿಕ್ಷಣ ನೀಡಿದ. ತನ್ನ ಮಾತಿನಂತೆ ನಡೆದವರ ರಕ್ಷಣೆ ಸದಾ ತನ್ನ ಹೊಣೆ. ''ಪೂಜಯೇದ್ ಭಕ್ತಿಭಾವೇನ ತಂ ರಕ್ಷಾಮೀತಿ ಮತ್ಪಣಃ'' ಕೂಡಲೇ ಶ್ರೀಕೃಷ್ಣ ಗೋವರ್ಧನ ಪರ್ವತವನ್ನೇ ತನ್ನ ಕಿರುಬೆರಳಿನಲ್ಲಿ ಎತ್ತಿ ಹಿಡಿದ.

**''ವಾಮೇನ ಕಂಜದಲಕೋಮಲಪಾಣಿನೈವ । ಗಿರಿವರಂ ಪ್ರಸಭಂ ದಧಾರ''** ತಾ. ನಿ.
**''ಏಕೇನ ಹಸ್ತೇನ ಕೃತ್ವಾ ಗೋವರ್ಧನಾಚಲಮ್ । ದಧಾರ ಲೀಲಯಾ''** ಭಾಗ.

ಏಳು ವರ್ಷದ ಬಾಲಕ ಶ್ರೀಕೃಷ್ಣ. ತನ್ನ ಮೃದುಮಧುರ ಕೋಮಲ ಕೈಗಳಿಂದ ಪ್ರಚಂಡ ಗೋವರ್ಧನಗಿರಿ ಎತ್ತಿಹಿಡಿದ. ಎಡಗೈಯ ಕಿರುಬೆರಳಿನಿಂದ ಗಿರಿಯನ್ನು ಎತ್ತಿದ. ಎಲ್ಲ ಗೋಪರು, ಗೋವುಗಳನ್ನು ಬೆಟ್ಟದಡಿಯಲ್ಲಿ ಇರಿಸಿ ಚಳಿ-ಮಳೆಯಿಂದ ರಕ್ಷಿಸಿದ. ''ನಾನು ಈಶಾವಾಸ್ಯ. ಸರ್ವತ್ರ ವ್ಯಾಪ್ತ. ಸರ್ವಾಧಾರ. ಬೆರಳಿನಿಂದ ಬೆಟ್ಟ ಜಾರುವದೆಂಬ ಭಯ ಬೇಡ'' ಎಂದ. ಎಲ್ಲರನ್ನೂ ರಕ್ಷಿಸಿದ. ನಂಬಿ ಕೆಟ್ಟವರಿಲ್ಲ ಎಂಬುದನ್ನು ಎಲ್ಲರ ಅನುಭವಕ್ಕೆ ತಂದುಕೊಟ್ಟ. ಗೋಪರಿಗೆಲ್ಲ ವಿಸ್ಮಯ. ವಿಶ್ವಾಸ. ''ನ ವಿಷ್ಣೋಃ ವಚನಂ ಕ್ವಾಪಿ ಮೃಷಾ ಭವತಿ ಕಸ್ಯಚಿತ್'' (ತಾ.ನಿ.) ...ಸಶೇಷ...

# ಮಹರ್ಷಿ ಯಾಜ್ಞವಲ್ಕ್ಯ - ೭

✍ ಪಂ. ಶ್ರೀನಿವಾಸಾಚಾರ್ಯ
ನಾಗರಹಳ್ಳಿ



**"ಆತ್ಮೋದ್ಧಾರಂ ವಿನಾ ಲೋಕೇ ಪರೋದ್ಧಾರಃ ಸುದುಷ್ಕರಃ"**

ಮಹರ್ಷಿಯಾಜ್ಞವಲ್ಕ್ಯರು ಏಕಾಗ್ರತೆಯಿಂದ ಸೂರ್ಯನನ್ನು ಸ್ತುತಿಸಲು ಅವರ ಸ್ತುತಿಯಿಂದ ಪ್ರತ್ಯಕ್ಷನಾಗಿ ಸೂರ್ಯನಾರಾಯಣನು ಹೀಗೆ ಹೇಳಿದನು -

**ವರಂ ವೃಣೀಷ್ವ ವಿಪ್ರರ್ಷೆ ಯದಿಷ್ಟಂ ತೇ ಸುದುರ್ಲಭಮ್ ।**
**ತತ್ ತೇ ದಾಸ್ಯಾಮಿ ಪ್ರೀತಾತ್ಮಾ ಮತ್ಪ್ರಸಾದೋ ಹಿ ದುರ್ಲಭಃ ॥** (ಮ.ಭಾ.ಶಾಂತಿ.ಪ.)

ವಿಪ್ರರ್ಷಿಯೇ! ನಿನ್ನ ಮನೋಭಿಲಷಿತವಾದ ದುರ್ಲಭವಾದ ವರವನ್ನು ಕೇಳು. ನಿನ್ನ ಮೇಲೆ ಸಂತುಷ್ಟನಾಗಿರುವೆನು. ನನ್ನ ಅನುಗ್ರಹ ಸುಲಭವಲ್ಲ.

ಆಗ ಸೂರ್ಯನಾರಾಯಣನ ದರ್ಶನದಿಂದ ಸಂತುಷ್ಟರಾದ ಮಹರ್ಷಿ ಯಾಜ್ಞವಲ್ಕ್ಯರು ಅವನಿಗೆ ಸಾಷ್ಟಾಂಗನಮಸ್ಕಾರವನ್ನು ಮಾಡಿ ಕೇಳಿದರು - ಜಗತ್ಪ್ರಕಾಶಕರನ್ನು ಮೀರಿದ ಪ್ರಕಾಶವುಳ್ಳ ಸೂರ್ಯನಾರಾಯಣನೇ ! ಇಲ್ಲಿಯವರೆಗೆ ಯಾರೂ ಕಾಣದ ಹಾಗೂ ಉಪಯೋಗಿಸದ "ಯಜುರ್ಮಂತ್ರಗಳನ್ನು" ಬೇಗನೇ ತಿಳಿಯಲು ಬಯಸುವೆನು.

**"ಯಜೂಂಷಿ ನೋಪಯುಕ್ತಾನಿ ಕ್ಷಿಪ್ರಮಿಚ್ಛಾಮಿ ವೇದಿತುಮ್ । "** (ಮ.ಭಾ.ಶಾಂತಿ.ಪ.)

ಸೂರ್ಯನಾರಾಯಣನು ಹೇಳಿದನು - ನಾನು ನೀನು ಬಯಸಿದ್ದನ್ನು ಕೊಡುವೆನು. ನೀನು ನಿನ್ನ ಮುಖವನ್ನು ಅಗಲಮಾಡು. ಸರಸ್ವತಿಯು (ನನ್ನ ತೇಜೋರೂಪ ವೇದವಿದ್ಯೆ) ನಿನ್ನನ್ನು ಪ್ರವೇಶಿಸುವಳು.

ಯಾಜ್ಞವಲ್ಕ್ಯರು ಮುಖವನ್ನು ಅಗಲಿಸಿದರು. ರವಿಯ ತೇಜೋರೂಪ ವೇದವಿದ್ಯೆಯು ಅವರ ಮುಖವನ್ನು ಪ್ರವೇಶಿಸಿತು. ಆ ತೇಜಸ್ಸಿನ ಉಗ್ರತೆಯು ಅವರನ್ನು ಸುಡಲಾರಭಿಸಿತು. ರವಿಯ ಮಹಿಮೆಯ ಮಹತಿಯನ್ನು ಸರಿಯಾಗಿ ತಿಳಿಯದೇ ಆ ತೇಜವನ್ನು ಧರಿಸಲು ಅಸಮರ್ಥರಾಗಿ ಅವರು ಸರೋವರವನ್ನು ಪ್ರವೇಶಿಸಿದರು.ತೇಜದಿಂದ ಪೀಡಿತರಾದ ಅವರಿಗೆ ಸೂರ್ಯನಾರಾಯಣನು "ಋಷಿಯೇ ! ಒಂದು ಮುಹೂರ್ತದವರೆಗೆ ಈ ದಾಹವನ್ನು ಸಹಿಸು. ಇದು ತಾನಾಗಿಯೇ ಶಾಂತವಾಗುವದು.ಒಂದು ಮುಹೂರ್ತದ ಅನಂತರ ಆ ದಾಹವು ಶಾಂತವಾಯಿತು.

ಆಗ ಸೂರ್ಯನಾರಾಯಣನು ಯಾಜ್ಞವಲ್ಕ್ಯರಿಗೆ ಹೇಳಿದನು- "ಎಲೈ ಸಾಧಕನೆ ! ಹೊಸ ಯಜುರ್ವೇದವು ಖಿಲಭಾಗ ಹಾಗೂ ಉಪನಿಷತ್ ಭಾಗಸಹಿತವಾಗಿ ನಿನ್ನಲ್ಲಿ ಸ್ಥಿರವಾಗುವದು. ಅದನ್ನು ನೀನು ಜಗತ್ತಿಗೆ ಕೊಡುವಿ. ನೀನು ಸಂಪೂರ್ಣ ಶತಪಥ ಬ್ರಾಹ್ಮಣವನ್ನು ರಚಿಸುವಿ.

ಅನಂತರ ನೀನು ಸಾಂಖ್ಯ-ಯೋಗ (ಭಗವತ್ತತ್ವಜ್ಞಾನ+ಭಗವತ್ಪ್ರಾಪ್ತಿಯ ಉಪಾಯವಾದ ಭಕ್ತಿ)ಗಳನ್ನು ಜಗತ್ತಿಗೆ ತಿಳಿಸಿಹೇಳಿ ಮಹಾನ್ ಸಾಧಕರಾಗುವಿರಿ". ಇಷ್ಟು ಹೇಳಿ ಸೂರ್ಯನಾರಾಯಣನು ಅಂತರ್ಹಿತನಾದನು.

**" ............ ಭಗವಾನಾಹ ಭಾಸ್ಕರಃ ।**

**ಪ್ರತಿಷ್ಠಾಸ್ಯತಿ ತೇ ವೇದಃ ಸಖಿಲಃ ಸೂತ್ತರೋ ದ್ವಿಜ ।**

**ಕೃತ್ಸ್ನಂ ಶತಪಥಂ ಚೈವ ಪ್ರಣೇಷ್ಯಸಿ ದ್ವಿಜರ್ಷಭ ।**

**ತಸ್ಯಾಂತೇ ಚಾಪುನರ್ಭಾವೇ ಬುದ್ಧಿಸ್ತವ ಭವಿಷ್ಯತಿ ।**

**ಪ್ರಾಪ್ಸ್ಯತೇ ಚ ಯದಿಷ್ಟಂ ತತ್ ಸಾಂಖ್ಯಯೋಗೇಪ್ಸಿತಂ ಪದಮ್ ।**

**ಏತಾವದುಕ್ತ್ವಾ ಭಗವಾನಸ್ತಮೇವಾಭ್ಯವರ್ತತ ॥"** (ಮ.ಭಾ.ಶಾಂತಿಪರ್ವ)

ವರವನ್ನು ಸ್ವೀಕರಿಸಿ ಆನಂದದಿಂದ ಮನೆಗೆ ಬಂದ ಯಾಜ್ಞವಲ್ಕ್ಯರು ಏಕಾಗ್ರಚಿತ್ತರಾಗಿ ಧ್ಯಾನಸ್ಥರಾದರು. ಆಗ ಓಂಕಾರಪೂರ್ವವಾದ ಸ್ವರವ್ಯಂಜನ ಸಹಿತವಾದ ವಾಙ್ಮಯ ಸರಸ್ವತಿಯು ಪ್ರತ್ಯಕ್ಷಳಾದಳು. ಆಗ ಯಾಜ್ಞವಲ್ಕ್ಯರು ನಮಸ್ಕರಿಸಿ ಅರ್ಘ್ಯ-ಪಾದ್ಯಗಳನ್ನು ಕೊಟ್ಟು ಹೊಸ ಆ ಯಜುರ್ವೇದವನ್ನು ಸ್ವೀಕರಿಸಿದರು. ತಾವು ಕಂಡ ಯಜುರ್ವೇದವನ್ನು ಅವರು ಶುಭ್ರನಾದ ಸೂರ್ಯನಿಂದ ಪಡೆದುದರಿಂದ ಇದಕ್ಕೆ "ಶುಕ್ಲಯಜುರ್ವೇದ"ವೆಂದು ಕರೆದರು.

**"ಆದಿತ್ಯೇನೇಮಾನಿ ಶುದ್ಧಾನಿ (ಶುಕ್ಲಾನಿ) ಯಜೂಂಷಿ ವಾಜಸನೇಯೇನ ಯಾಜ್ಞವಲ್ಕ್ಯೇನಾಖ್ಯಾಯಂತೇ"** ( ಬೃ.ಉ.ಅ-)

ಸೂರ್ಯನಾರಾಯಣನು ಯಾಜ್ಞವಲ್ಕ್ಯರಿಗೆ ಕುದುರೆಯ ರೂಪದಿಂದ ಯಜುರ್ವೇದ ವಿದ್ಯೆಯನ್ನು ಕೊಟ್ಟಿದ್ದರಿಂದ ಈ ಶುಕ್ಲಯಜುರ್ವೇದ ಸಂಹಿತೆಗಳು "ವಾಜಸನೇಯಸಂಹಿತೆ" ಎಂದು ಪ್ರಸಿದ್ಧವಾದವು.

**"ವಾಜಿನಸ್ತೇ ಸಮಾಖ್ಯಾತಾಃ ಸೂರ್ಯೋಽಪ್ಯಶ್ವೋ ಭವೇದ್ಯತಃ ।"** (ವಿ.ಪು)

ಈ ಶುಕ್ಲಯಜುರ್ವೇದದಲ್ಲಿ ೧೫ ಶಾಖೆಗಳಿವೆ. ಯಾಜ್ಞವಲ್ಕ್ಯರು ಈ ಶಾಖೆಗಳನ್ನು ಕಣ್ವ-ಮಾಧ್ಯಂದಿನ ಇತ್ಯಾದಿ ಶಿಷ್ಯರಿಗೆ ಉಪದೇಶಿಸಿದರು.

**"ಜಗೃಹುಃ ವಾಜಸನ್ಯಸ್ತಾಃ ಕಾಣ್ವಮಧ್ಯಂದಿನಾದಯಃ"** (ಭಾಗ)

**"ಶಾಖಾಭೇದಾಸ್ತು ತೇಷಾಂ ವೈ ದಶ ಪಂಚ ಚ ವಾಜಿನಾಮ್ ।**
**ಕಾಣ್ವಾದ್ಯಾಸ್ಸುಮಹಾಭಾಗ ಯಾಜ್ಞವಲ್ಕ್ಯಾಃ ಪ್ರಕೀರ್ತಿತಾಃ ॥"** (ವಿ.ಪು)

ಆ ಶಾಖೆಗಳು, ಅವುಗಳನ್ನು ಅಧ್ಯಯನ ಮಾಡುವವರು - ೧) ಕಾಣ್ವರು (ಕೃಷ್ಣಾವೇಣಾ ಪ್ರದೇಶದವರು) ೨) ಬೌಧೇಯ (ಮಹಾರಾಷ್ಟ್ರ) ೩)ಶಾಫೇಯ (ಅಮರಕಂಟಕ) (೪) ಮಾಧ್ಯಂದಿನ (ಸರಯೂತೀರ) ೫)ಜಾಬಾಲ (ನರ್ಮದಾ-ವಿಂಧ್ಯ) ೬) ತಾಪನೀಯ (ನರ್ಮದಾ ಉತ್ತರತೀರ) ೭)ಕಾಪೋಲ (ಮಾಳವಾ) ೮) ಪೌಂಡ್ರವತ್ಸ (ಮಾಳವಾ) ೯)

ಆವಟಿಕ (ಮಾಳವಾ). ೧೦)ಪರಮಾವಟಿಕ (ಗೌಡದೇಶ) ೧೧) ಪಾರಾಶರ (ಮರುಪ್ರದೇಶ) ೧೨) ವೈಧೇಯ (ಗೌಡಪ್ರದೇಶ) ೧೩) ವೈನೇಯ (ಬೌದ್ಧಪರ್ವತ-ಟಿಬೇಟ್) ೧೪) ಔಧೇಯ (ಗುರ್ಜರ) ೧೫) ಗಾಲವ (ಸೌರಾಷ್ಟ್ರ) - ಚರಣವ್ಯೂಹ.

ಅನಂತರದಲ್ಲಿ ಶೋಧವಾದ ಮತ್ತೆರಡು ಶಾಖೆಗಳು - ೧) ಬೈಜವ (ನಾರಾಯಣ ಸರೋವರ) ೨) ಕಾತ್ಯಾಯನ (ನರ್ಮದಾ ಸರೋವರ) ಇವುಗಳಲ್ಲಿಯೂ ಸಾಕಷ್ಟು ಉಪಭೇದಗಳಿವೆ. ಎಲ್ಲ ಉಪಭೇದಸೇರಿ ೧೦೧ ಶಾಖೆಗಳು ಈ ವೇದಕ್ಕೆ ಇವೆ. "ವಾಯು ಪುರಾಣ"ದಲ್ಲಿ ಸ್ವಲ್ಪನಾಮಾಂತರದಿಂದ ಪೂರ್ವೋಕ್ತ ೧೫ ಶಾಖೆಗಳ ಉಲ್ಲೇಖ ಹೀಗಿದೆ -

**"ಯಾಜ್ಞವಲ್ಕ್ಯಶ್ಚ ಶಿಷ್ಯಾಸ್ತೇ ಕಣ್ವವೈಧೇಯಶಾಲಿನಃ ।**
**ಮಧ್ಯಂದಿನಶ್ಚ ಶಾಪೇಯೀ ವಿದಗ್ಧಶ್ಚಾಪ್ಯ ಉದ್ದಲಃ ॥**

**ತಾಮ್ರಾಯಣಶ್ಚ ವಾತ್ಸ್ಯಶ್ಚ ತಥಾ ಗಾಲವಶೈಶಿರೀ ।**
**ಆಟವೀ ಚ ತಥಾ ಪರ್ಣೀ ವೀರಣೀ ಸಪರಾಯಣಃ॥**

**ಇತ್ಯೇತೇ ವಾಜಿನಃ ಪ್ರೋಕ್ತಾ ದಶ ಪಂಚ ಚ ಸಂಸ್ಮೃತಾಃ ।**
**ಶತಮೇಕಾಧಿಕಂ ಕೃತ್ಸ್ನಂ ಯಜುಷಾಂ ವೈ ವಿಕಲ್ಪಕಾಃ ॥"** (ವಾ.ಪು)

ಇಷ್ಟೆಲ್ಲ ವಿವರಣೆಯನ್ನು ಕೊಡುವ ಉದ್ದೇಶ್ಯ ನಮ್ಮ ವೈದಿಕಸಾಹಿತ್ಯವು ಅದೆಷ್ಟು ಶ್ರೀಮಂತವಾಗಿದೆ ಎನ್ನುವದನ್ನು ತಿಳಿಸುವದಾಗಿದೆ.

(ಆದರೆ ಇಂದಿನ ಯುವಜನಾಂಗ ಈ ಸಾಹಿತ್ಯದಿಂದ ಅನಭಿಜ್ಞವಾಗಿದೆಯಲ್ಲ ಎಂದು ದುಃಖವಾಗುತ್ತಿದೆ.) **"ಕ್ರಿಯಾಸಿದ್ಧಿಃ ಸತ್ವೇ ವಸತಿ ಮಹತಾಂ ನೋಪಕರಣೇ"** ಮಹರ್ಷಿ ಯಾಜ್ಞವಲ್ಕ್ಯರು ಜೀವನದಲ್ಲಿ ಅನೇಕ ಅಡೆತಡೆಗಳು ಬಂದರೂ ಸೋಲನ್ನೊಪ್ಪಲಿಲ್ಲ. ಶುಕ್ಲಯಜುರ್ವೇದವೆಂಬ ವಾಙ್ಮಯಕೋಶವನ್ನೇ ಪಡೆದರು.

ಈ ಶುಕ್ಲಯಜುರ್ವೇದದಲ್ಲಿ ಒಟ್ಟು ೪೦ ಅಧ್ಯಾಯಗಳಿವೆ. ೩೦೩ ಅನುವಾಕಗಳಿವೆ. ೧೯೩೫ ಮಂತ್ರಗಳಿವೆ. ಕರ್ಮಕಾಂಡಕ್ಕೆ ಹಾಗೂ ಅಧ್ಯಾತ್ಮಚಿಂತನೆಗೆ ಅತ್ಯುಪಯುಕ್ತ ಮಂತ್ರಗಳು ಈ ವೇದದಲ್ಲಿವೆ. (ಇದರ ವಿವರ ಮುಂದಿನ ಸಂಚಿಕೆಯಲ್ಲಿ... ) ...ಕ್ರಮಶಃ...

## ಸೌರಭ ದಾಸಸಾಹಿತ್ಯ ವಿದ್ಯಾಲಯ ಬೇಸಿಗೆ ಶಿಬಿರ

ಏಪ್ರಿಲ್ 24 ರಿಂದ ಮೇ 24 ರ ವರೆಗೆ ಬಾಲಕ ಹಾಗೂ ಬಾಲಕಿಯರಿಗೆ ಪ್ರತ್ಯೇಕ ಶಿಬಿರ ನಡೆಸಲಾಯಿತು. ನಿತ್ಯಸ್ತೋತ್ರ, ಪೂಜಾಪದ್ಧತಿ, ಪಂಚಗವ್ಯ ಹಾಗೂ ಯಜ್ಞೋಪವೀತಧಾರಣ ಪದ್ಧತಿ, ದಾಸರ ಹಾಡುಗಳು, ಸುಳಾದಿಗಳು, ತುಳಸೀಪೂಜೆ ಇತ್ಯಾದಿಗಳನ್ನು ಕಲಿಸಲಾಯಿತು. ದಶಾವತಾರದ ಪರಿಚಯ, ರಾಮಾಯಣ ಪಾತ್ರಗಳ ಪರಿಚಯ ಮಾಡಿಸಲಾಯಿತು.

ಶ್ರೀಗಳ ಅನುಗ್ರಹದಿಂದ ಮಧ್ಯೆ ಮಧ್ಯೆ ಪರೀಕ್ಷೆಯೊಂದಿಗೆ ಶಿಬಿರವು ಅಪರೂಪವಾಗಿ ನಡೆದು ಯಶಸ್ಸು ಪಡೆಯಿತು **-ಪಂ. ಪ್ರಮೋದಾಚಾರ್ಯ ಪೂಜಾರ**

ವನಿತಾ ವಿಜ್ಞಾನ

# ನವವಧುವಿಗೆ ಕಿವಿಮಾತು – ೭

✍ ಪಂ. ಆತ್ರೇಯ ಪ್ರಹ್ಲಾದ

ಯೋಗಾಚಾರ್ಯ ಕರ್ದಮರ ಪತ್ನಿ ದೇವಹೂತಿಯು ೧೨ ಗುಣಗಳಿಂದ ತನ್ನ ಪತಿಯನ್ನು ಒಲಿಸಿಕೊಂಡಳು ಎಂಬ ವಿಷಯವನ್ನು ಉಪಸಂಹಾರ ಮಾಡುತ್ತ ಭಾಗವತ-ಕಾರರು ಹೀಗೆ ಹೇಳುತ್ತಾರೆ - “ತೇಜೀಯಾಂಸಮತೋಷಯತ್” = ಅಪರೋಕ್ಷಜ್ಞಾನಿಯಾದ ತನ್ನ ಪತಿಯನ್ನು ಒಲಿಸಿದಳು.

ಸ್ತ್ರೀಧರ್ಮ-ಸ್ತ್ರೀಕರ್ತವ್ಯಗಳನ್ನು ನಾವು ಪ್ರವಚನಗಳಲ್ಲಿ ಉಪದೇಶಿಸಿದಾಗ ಎಲ್ಲ ಹೆಣ್ಣುಮಕ್ಕಳು ಕೇಳುವ ಒಂದೇ ಪ್ರಶ್ನೆ - ಕರ್ತವ್ಯ ಹಾಗೂ ಉಪದೇಶವೆಲ್ಲ ನಮಗೋಸ್ಕರ ಮಾತ್ರವೇ ? ನಮ್ಮ ಗಂಡನಿಗೆ ಯಾವ ಕರ್ತವ್ಯವಿಲ್ಲವೇ ? ಕರ್ದಮರು ಜ್ಞಾನಿಗಳು. ನಮ್ಮ ಗಂಡ ಹಾಗಿಲ್ಲ. ನಾವೇಕೆ ಅವನನ್ನು ಒಲಿಸಬೇಕು ?

ಅಹುದು. ಈ ಪ್ರಶ್ನೆಗಳು ಸರಿಯಾಗಿವೆ. ಕುಟುಂಬದ ಸ್ವಾಸ್ಥ್ಯ ಕೇವಲ ಗೃಹಿಣಿಯ ಜವಾಬ್ದಾರಿಯಲ್ಲ. ಮನೆಯಲ್ಲಿರುವ ಎಲ್ಲರದೂ ಜವಾಬ್ದಾರಿಯಾಗಿದೆ. ಮನೆಯ ಯಜಮಾನ ಎನ್ನಿಸಿಕೊಂಡವನ ಜವಾಬ್ದಾರಿ ಅತಿಹೆಚ್ಚಾಗಿದೆ. ಸಕಲ ಧರ್ಮಶಾಸ್ತ್ರಗಳಲ್ಲಿ ೯೦ ಪ್ರತಿಶತ ಉಪದೇಶಗಳು (ಉಪನಯನಾದಿ ಮರಣಾಂತ) ಮನೆಯ ಯಜಮಾನನಿಗೋಸ್ಕರವೇ ಇವೆ. ಅವನ್ನು ಜೀವನದಲ್ಲಿ ಕಾರ್ಯರೂಪಕ್ಕೆ ತರುವುದು ಅನಿವಾರ್ಯವಾಗಿದೆ.

ವಿವಾಹಸಂಸ್ಕಾರದಲ್ಲಿ ಪತಿ-ಪತ್ನಿಯರಿಂದ ಪುರೋಹಿತರು ಜತೆಜತೆಯಾಗಿ ಮಾಡುವ ಕರ್ತವ್ಯಗಳನ್ನು ಪ್ರತಿಜ್ಞೆ ಮಾಡಿಸುತ್ತಾರೆ. ಸಂಸ್ಕೃತ ಬಾರದಿದ್ದುದರಿಂದ ಯಾರೂ ಈ ಕಡೆಯಲ್ಲಿ ಗಮನ ಹರಿಸುವದಿಲ್ಲ.

ಇಬ್ಬರೂ ಜತೆಯಾಗಿಯೇ ಮಾಡಲೇಬೇಕಾದ ಕರ್ತವ್ಯಗಳು -

ಕನ್ಯಾದಾನ ಮಾಡುವ ಮಾವನು ಅಳಿಯನಿಂದ ಹೀಗೆ ಪ್ರತಿಜ್ಞೆ ಮಾಡಿಸುತ್ತಾನೆ - "ಧರ್ಮೇ ಚ ಅರ್ಥೇ ಚ ಕಾಮೇ ಚ ನ ಅತಿಚರಿತವ್ಯಾ ತ್ವಯಾ” (ಧರ್ಮ-ಅರ್ಥ(ಆರ್ಥಿಕ ವ್ಯವಹಾರ) ಹಾಗೂ ಮನದಿಚ್ಛೆಯ ವ್ಯವಹಾರಗಳಲ್ಲಿ ಹೆಂಡತಿಯನ್ನು ದೂರವಿಡಬೇಡ)

ದ್ಯೂತದಲ್ಲಿ ಗಂಡಂದಿರು ಸೋತರೂ ನಾನು ಅವರ ಸಹಧರ್ಮಿಣಿ, ಅವರು ದಾಸರಾದರೂ ನಾನು ಅವರ ಜತೆಯಲ್ಲಿರುವದು ನನ್ನ ಧರ್ಮವಾಗಿದೆ ಎಂದು ದ್ರೌಪದಿಯು ಕೌರವಸಭೆಯಲ್ಲಿ ಸಾರಿ ಹೇಳುತ್ತಾಳೆ.

**“ಸಮಾನಧರ್ಮಿಣೀಮಾಹುಃ ಭಾರ್ಯಾಂ ಯಸ್ಮಾದ್ವಿಪಶ್ಚಿತಃ ।**
**ಸಹೈವ ಕರ್ಮ ಕರ್ತವ್ಯಂ ಪತೌ ದಾಸೇ ಹಿ ಭಾರ್ಯಯಾ ।।”** ಮ.ಭಾ.ತಾ.ನಿ

೧) ಧರ್ಮಾಚರಣೆ ಜತೆಯಾಗಿ ಮಾಡಬೇಕು. ಧರ್ಮಾಚರಣೆಯಲ್ಲಿ ನನಗೆ ವಿಶ್ವಾಸವಿಲ್ಲ, ಅದರಲ್ಲಿ ಆಸಕ್ತಿಯಿಲ್ಲ, ಬೇಕಾದರೆ ನೀನು ಮಾಡಿಕೋ ಎನ್ನುವಂತಿಲ್ಲ. ಆಸಕ್ತಿ-ವಿಶ್ವಾಸ ಬೆಳೆಸಿಕೊಳ್ಳಲೇಬೇಕು. ಇಲ್ಲದಿದ್ದರೆ ಮಾನವನು ಪಶುವಾಗುವನು. "ಧರ್ಮೇಣ ಹೀನಾಃ ಪಶುಭಿಃ ಸಮಾನಾಃ"

೨) ಆರ್ಥಿಕವ್ಯವಸ್ಥೆಯಲ್ಲಿ ಇಬ್ಬರೂ ಭಾಗವಹಿಸಬೇಕು. ಗಂಡನು ಗಳಿಸಿ ತಂದರೆ ಹೆಂಡತಿಯು ತಿಂಗಳ ಕೊನೆವರೆಗೆ ಕಡಿಮೆ ಬೀಳದಂತೆ ಸಂಯೋಜಿಸಬೇಕು.

**ಸದಾ ಪ್ರಹೃಷ್ಟಯಾ ಭಾವ್ಯಂ ಗೃಹಕಾರ್ಯೇಷು ದಕ್ಷಯಾ ।**
**ಸುಸಂಸ್ಕೃತೋಪಸ್ಕರಯಾ ವ್ಯಯೇ ಚಾಮುಕ್ತಹಸ್ತಯಾ ।** ಮನು-೫/೧೫೦

ನಾನು ಭೋಗ ಮಾಡುತ್ತೇನೆ, ಹೆಂಡತಿ ಅಥವಾ ಗಂಡ ಹಾಳುಬಾವಿ ಬೀಳಲಿ ಎನ್ನಬಾರದು. ಇಬ್ಬರೂ ಸೇರಿ ಸಂಸಾರದ ಭಾರವನ್ನು ಹೊತ್ತುಕೊಳ್ಳಬೇಕು. ವಿಶೇಷವಾಗಿ ಧನಸಂಗ್ರಹ, ಖರ್ಚು, ಮನೆಯ ಪಾವಿತ್ರ್ಯ, ಧರ್ಮಕಾರ್ಯ, ಊಟ-ಆತಿಥ್ಯ, ಮನೆಯ ವಸ್ತುಗಳ ಸಂರಕ್ಷಣೆ ಇವೆಲ್ಲವುಗಳ ಜವಾಬ್ದಾರಿ ಹೆಣ್ಣುಮಕ್ಕಳದ್ದಾಗಿದೆ.

**"ಅರ್ಥಸ್ಯ ಸಂಗ್ರಹೇ ಚೈನಾಂ ವ್ಯಯೇ ಚೈವ ನಿಯೋಜಯೇತ್ ।**
**ಶೌಚೇ ಧರ್ಮೇಽನ್ನಪಂಕ್ತ್ಯಾಂ ಚ ಪಾರಿಣಾಹ್ಯಶ್ಚ ವೀಕ್ಷಣೇ ॥"** ಮನು

ದ್ರೌಪದಿಯು ಹೇಳುತ್ತಾಳೆ - ಕುಟುಂಬದ ಎಲ್ಲ ಜವಾಬ್ದಾರಿಯನ್ನು ನನ್ನ ಗಂಡಂದಿರು ನನ್ನಮೇಲೆ ಹಾಕಿ ತಮ್ಮ ಸದಾಚರಣೆಯಲ್ಲಿ ಆಸಕ್ತರಾಗುತ್ತಾರೆ. ನಾನು ಅದನ್ನು ಹಗಲು-ರಾತ್ರಿ ಎನ್ನದೇ ವ್ಯವಸ್ಥೆ ಮಾಡುತ್ತೇನೆ.

**ಮಯಿ ಸರ್ವಂ ಸಮಾಸಜ್ಯ ಕುಟುಂಬಂ ಭರತರ್ಷಭಾಃ । .........**
**ಸುಖಂ ಸರ್ವಂ ಪರಿತ್ಯಜ್ಯ ರಾತ್ರ್ಯಹಾನಿ ಘಟಾಮಿ ವೈ ॥** ಮ.ಭಾ.ವನ ಪ.

೩) ಕಾಮವೆಂದರೆ ಇಚ್ಛೆ. ಇಚ್ಛೆಗಳು ಆರ್ಥಿಕ-ದೈಹಿಕ-ಮಾನಸಿಕ ಯಾವುದೇ ಆಗಿರಬಹುದು. ಅವನ್ನು ಪರಸ್ಪರ ಸುಖಕ್ಕಾಗಿ ಪರಸ್ಪರರು ಪೂರೈಸುವದು ಅತ್ಯವಶ್ಯಕವಾಗಿದೆ. ಹೆಂಡತಿಗೆ ಒಬ್ಬಂಟಿಯಾಗಿ ಇರಲು ಸ್ವಾತಂತ್ರ್ಯವಿಲ್ಲದಿದ್ದರೂ ಮನೆಯಲ್ಲಿ ಅವಳನ್ನು ತಂದೆ-ತಾಯಿಗಳು, ಗಂಡ-ಮೈದುನಾದಿಗಳು ಅತ್ಯಂತ ಆದರದಿಂದ ನೋಡಿಕೊಳ್ಳಬೇಕು. ಕಾಲಕಾಲದಲ್ಲಿ ಭೂಷಣ-ಆಭೂಷಣಗಳಿಂದ ಅವಳನ್ನು ಸಂತಸಪಡಿಸಬೇಕು. ಇದರಿಂದ ಕುಟುಂಬಕ್ಕೆ ಕಲ್ಯಾಣವಾಗುತ್ತದೆ. ಮಂಗಲವಾಗುತ್ತದೆ.

**"ಪಿತೃಭಿಃ ಭ್ರಾತೃಭಿಶ್ಚೈತಾಃ ಪತಿಭಿರ್ದೇವರೈಸ್ತಥಾ ।**
**ಪೂಜ್ಯಾ ಭೂಷಯಿತವ್ಯಾಶ್ಚ ಬಹುಕಲ್ಯಾಣಮೀಪ್ಸುಭಿಃ ॥"** ಮನು

ಯಾವ ಮನೆಯಲ್ಲಿ ಹೆಂಡತಿ ಗಂಡನಿಂದ ಸಂತುಷ್ಟಳಾಗಿದ್ದಾಳೆ, ಹೆಂಡತಿಯಿಂದ ಗಂಡ ಸಂತುಷ್ಟನಾಗಿದ್ದಾನೆ ಆ ಮನೆಯಲ್ಲಿ ಮಂಗಳ, ಆನಂದ ಯಾವಾಗಲೂ ಇರುತ್ತದೆ.

“ಸಂತುಷ್ಟೋ ಭಾರ್ಯಯಾ ಭರ್ತಾ ಭರ್ತ್ರಾ ಭಾರ್ಯಾ ತಥೈವ ಚ।
ಯಸ್ಮಿನ್ನೇವ ಕುಲೇ ನಿತ್ಯಂ ಕಲ್ಯಾಣಂ ತತ್ರ ವೈ ಧ್ರುವಮ್ ॥” ಮನು ೩/೬೦

ವೈವಾಹಿಕಜೀವನವೆಂದರೆ ಜಗಳವಾಡುತ್ತ ದುಃಖಪಡುವದಲ್ಲ. ಕಿಂತು ಇದ್ದುದರಲ್ಲಿ ಪರಸ್ಪರ ಹೊಂದಾಣಿಕೆ ಮಾಡಿಕೊಂಡು ಆನಂದದಿಂದ ಇರುವುದರಲ್ಲಿಯೇ ಸಾರ್ಥಕತೆಯಿದೆ.

ಮನುಸ್ಮೃತಿಯು ಹೇಳಿದ “ನ ಸ್ತ್ರೀ ಸ್ವಾತಂತ್ರ್ಯಮರ್ಹತಿ” (ಮನು.೯.೩) ಎಂಬ ಅರ್ಧವಾಕ್ಯವನ್ನು ಇಟ್ಟುಕೊಂಡು ಭಾರತೀಯಸಂಸ್ಕೃತಿಯು ಹೆಣ್ಣುಮಕ್ಕಳ ಶೋಷಣೆಯನ್ನು ಅನುಮೋದಿಸುತ್ತದೆ ಎಂದು ೧೯ನೇ ಶತಮಾನದಿಂದ ಸ್ವಯಂಘೋಷಿತ ವಿಮರ್ಶಕರು, ಸಾಹಿತ್ಯಕಾರರು ನೂರಾರು ವಿಮರ್ಶೆ, ಕಥೆ, ಕಾದಂಬರಿಗಳನ್ನು ರಚಿಸಿದ್ದಾರೆ. ಜನರ ಮನಸ್ಸನ್ನೂ ಕೆಡಿಸಿದ್ದಾರೆ. ಇವರಾರೂ ನಮ್ಮ ಧರ್ಮಗ್ರಂಥಗಳನ್ನು ಓದಿಲ್ಲ. ಪಾಶ್ಚಿಮಾತ್ಯದೇಶದಲ್ಲಿ ಸ್ತ್ರೀಯು “ಭೋಗದ ಸಾಧನ”ಳಾಗಿದ್ದಾಳೆ. ನಮ್ಮಲ್ಲಿ ಅವಳು ತಂಗಿ, ಅಕ್ಕ, ತಾಯಿಯಾಗಿದ್ದಾಳೆ. ಆದರಣೀಯಳಾಗಿದ್ದಾಳೆ.

“ಸ್ತ್ರೀಸಬಲೀಕರಣವು” ವಿದೇಶದ ಹೆಣ್ಣುಮಕ್ಕಳಿಗೆ ಬೇಕು. ನಮ್ಮ ಸಂಸ್ಕೃತಿಯಲ್ಲಿ ಬೆಳೆದವರಿಗಲ್ಲ. ಇಂದು ನಮ್ಮ ಯುವಕ-ಯುವತಿಯರು ಪಾಶ್ಚಾತ್ಯಸಂಸ್ಕೃತಿಯ ಅಂಧಾನು-ಕರಣದಿಂದ ತಮ್ಮ ಹುಟ್ಟಿನ ಉದ್ದೇಶ್ಯವನ್ನು ಮರೆತು, ವಿದೇಶೀಯ ಆಕರ್ಷಣೆರಗೊಳಗಾಗಿ, ಯಾವ ಸಾಧನೆಯನ್ನೂ ಮಾಡದೇ, ಮಾನವಜೀವನವನ್ನು ಹಾಳುಮಾಡಿಕೊಂಡು ದುಃಖಿಗಳಾಗುತ್ತಿದ್ದಾರೆ.

ಸತ್ಯವಾಗಿಯೂ ಯಾರೂ ಸ್ವತಂತ್ರರಲ್ಲ. ಎಲ್ಲರೂ ಭಗವಂತನ ಅಧೀನರು. ಭಗವಂತನ ಆಜ್ಞಾರೂಪವಾದ ಶಾಸ್ತ್ರಗಳ ಮಾರ್ಗದರ್ಶನದಲ್ಲಿ ಸಾಧನೆ ಮಾಡುವುದೇ ಸಾರ್ಥಕತೆ-ಯಾಗಿದೆ. ಯೋಗ್ಯಗುರುಗಳ ಮಾರ್ಗದರ್ಶನದಲ್ಲಿ ಶಾಸ್ತ್ರದ ಅಧ್ಯಯನ ಮಾಡಿ, ತಾನು ಯಾವ ನಿಯಮಗಳನ್ನು ಪಾಲಿಸಬೇಕು ಎಂದು ನಿರ್ಧರಿಸಿ, ಸುವ್ಯಸ್ಥಿತ (Self-Disciplined) ಜೀವನ ಮಾಡುವುದೇ ಇಂದಿನ ಸ್ವಾತಂತ್ರ್ಯಶಬ್ದದ ಅರ್ಥವಾಗಿದೆ. ಸ್ವಾತಂತ್ರ್ಯವೆಂದರೆ ಉಚ್ಛೃಂಖಲತೆ ಅಲ್ಲ.

ಉಚ್ಛೃಂಖಲ ಸ್ವಾತಂತ್ರ್ಯವು ಗಂಡು-ಹೆಣ್ಣು ಇಬ್ಬರಿಗೂ ಇಲ್ಲ. ಅದರಲ್ಲಿಯೂ ದೂಷಿತ ಸಮಾಜವು ಒಬ್ಬಂಟಿಗಳಾದ ಹೆಣ್ಣನ್ನು ಪವಿತ್ರವಾಗಿರಲು ಬಿಡುವದಿಲ್ಲ. ಇದು ಪ್ರಕೃತಿ ನಿಯಮ. ಇಂದು ಹೆಚ್ಚಿನ ಹೆಣ್ಣುಮಕ್ಕಳು ಉಚ್ಛೃಂಖತೆಯನ್ನೇ ಸ್ವಾತಂತ್ರ್ಯವೆಂದು ತಿಳಿದಿದ್ದರಿಂದ ದಿನಾಲೂ ನೂರಾರು ಬಲಾತ್ಕಾರದ ಸುದ್ದಿಯನ್ನು ಕೇಳುತ್ತೇವೆ. ತಮ್ಮನ್ನು ಕೆಡಿಸುವ ಆರು ದೋಷಗಳಿಂದ ಸ್ತ್ರೀಯರು ಯಾವಾಗಲೂ ದೂರವಿರಬೇಕೆಂದು ಮನು ಮಹರ್ಷಿಯು ಹೇಳುತ್ತಾನೆ -

**“ಪಾನಂ ದುರ್ಜನಸಂಸರ್ಗಃ ಪತ್ಯಾ ಚ ವಿರಹೋಽಟನಮ್ ।**

**ಸ್ವಪ್ನೋಽನ್ಯಗೇಹವಾಸಶ್ಚ ನಾರೀಸಂದೂಷಣಾನಿ ಷಟ್ ॥”** ಮನು

೧) ಪಾನಂ=ಅಪೇಯಪಾನ (ಹೋಟೇಲ್ ನಲ್ಲಿ ಪಾರ್ಟಿ) ೨) ದುರ್ಜನಸಂಸರ್ಗಃ =ಶಾಲೆ ಕಾಲೇಜಿನಲ್ಲಿಯ ಗಂಡು ಹುಡುಗರ ಜತೆಯಲ್ಲಿ ಅಥವಾ ವಿಲಾಸೀ ಗೆಳತಿಯರ ಜತೆಯಲ್ಲಿ ಮಿತ್ರತೆ. ೩) ಪತ್ಯಾ ಚ ವಿರಹಃ = ಗಂಡನನ್ನು ಬಿಟ್ಟು ವೃತ್ತಿಗಾಗಿ ಬೇರೆ ಕಡೆಯಲ್ಲಿ ಇರುವುದು. ೪) ಅಟನಮ್ = ಗಂಡನನ್ನು ಬಿಟ್ಟು ಆಫೀಸಿನ ಅಥವಾ ಅನ್ಯಪುರುಷರ ಜತೆಯಲ್ಲಿ ಪಿಕ್ನಿಕ್ ಅಥವಾ ತಿರುಗಾಟ ೫) ಸ್ವಪ್ನಃ = ಇದು ಎರಡುರೀತಿ. ಅ) ಹಗಲು-ರಾತ್ರಿಯನ್ನದೇ ಯಾವಾಗ ಬೇಕಾದಾಗ ಮಲಗುವದು, ಏಳುವದು. ಆ)ಮನೆ-ಗಂಡ-ಮಕ್ಕಳನ್ನು ಬಿಟ್ಟು ತನ್ನ ಲೌಕಿಕ ಉನ್ನತಿಯ, ವೃತ್ತಿಜೀವನದ (Career) ಬಗ್ಗೆಯೇ ಹಗಲುಗನಸು ಕಾಣುವದು. ೬) ಅನ್ಯಗೇಹವಾಸಃ = ತಂದೆ-ತಾಯಿ-ಗಂಡನನ್ನು ಬಿಟ್ಟು ವಿದೇಶ, ಹೋಟೆಲ್, ಹಾಸ್ಟೇಲ್ ಗಳಲ್ಲಿ ಮತ್ತು ಪೇಯಿಂಗ್ಗೆಸ್ಟ್ ಆಗಿ ಇರುವದು. ಈ ಆರು ಕಾರಣಗಳು ಮನಸ್ಸಿನ ವಿಕೃತಿಗೆ ಕಾರಣವಾಗಿ ಸ್ತ್ರೀಯರ ಪಾವಿತ್ರ್ಯವನ್ನು ಕೆಡಿಸುವವು.

ಇಂದು ಅನಿವಾರ್ಯ ಕಾರಣವಿಲ್ಲದೇ ಹೆಣ್ಣುಮಕ್ಕಳು ಈ ತರಹದ ತಪ್ಪುಗಳನ್ನು ಮಾಡುತ್ತಿದ್ದಾರೆ. ಅಭಿಭಾವಕರು ಹಾಗೂ ಗಂಡಂದಿರೂ ಇದಕ್ಕೆ ಸಹಕರಿಸುತ್ತಿದ್ದಾರೆ. ಕೈ ಮೀರಿದ ಮೇಲೆ ಪಶ್ಚಾತ್ತಾಪಪಡುವುದು ಬಿಟ್ಟು ಬೇರೆ ದಾರಿ ಇರುವದಿಲ್ಲ.

ಹೀಗಾಗಬಾರದೆಂದೇ ಮನುಮಹರ್ಷಿಯು ಕಲಿಯುಗದ ಸಮಾಜದ ವಿಕೃತಿಯನ್ನು ಅನುಲಕ್ಷಿಸಿ, ತಂದೆ ಗಂಡ ಅಥವಾ ಮಕ್ಕಳ ರಕ್ಷಣೆಯಲ್ಲಿಯೇ ಹೆಣ್ಣುಮಕ್ಕಳು ಇರಬೇಕು. ಇಲ್ಲದಿದ್ದರೆ (ನಿರ್ಭಯಾಳಂತೆ) ದುಃಖಾಂತದ ಪರಿಸ್ಥಿತಿ ಬರುವದು ಎಂದು ಮೇಲೆ ಸೂಚಿಸಿದ ಮಾತನ್ನು ಹೇಳಿದನು. **“ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ । ರಕ್ಷಂತಿ ಸ್ಥವಿರೇ ಪುತ್ರಾಃ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ ॥”** ಮನು.

...ಕ್ರಮಶಃ


## ಅಧ್ಯಾತ್ಮವಾಣೀ

ಮನೆಯಲ್ಲಿಯೇ ಕುಳಿತು ಸ್ತೋತ್ರಮಂತ್ರಗಳ ಪಠನವನ್ನು, ಸದಾಚಾರ-ಸದ್ವಿಚಾರಗಳ ಅನುಷ್ಠಾನವನ್ನು ಕಲಿಯಲು ಹಾಗೂ ಭಾಗವತಾದಿ ಪುರಾಣಗಳ ಸವಿಯನ್ನು, ಶ್ರೀ ಶ್ರೀ ಶ್ರೀಪಾದಂಗಳವರ ಉಪದೇಶದ ಅಮೃತವನ್ನು ಆಸ್ವಾದಿಸಲು ಹೊಮ್ಮಿದ ಅಧ್ಯಾತ್ಮವಾಣೀ **YOUTUBE** ಚಾನೆಲ್ ಇಂದು ೬೫ ಸಾವಿರಕ್ಕೂ ಹೆಚ್ಚು ಜನರನ್ನು ತನ್ನತ್ತ ಆಕರ್ಷಿಸಿದೆ. ಈ ಲಾಕ್ಡೌನ್ ಪ್ರಸಂಗದಲ್ಲಂತೂ ಇದು ಎಲ್ಲರಿಗೂ ಸನ್ಮಿತ್ರನಾಗಿ ಸಂಗಾತಿಯಾಗಿ ಒದಗಿ ಬಂದಿದೆ. ಅನೇಕ ವಿದ್ವಾಂಸರು ವಿವಿಧ ಭಾಷೆಗಳಲ್ಲಿ ವಿವಿಧ ವಿಷಯಗಳ ಉಪನ್ಯಾಸಗಳನ್ನು, ಕಾರ್ಯಾಗಾರಗಳನ್ನು ಈ ಮೂಲಕ ಮಾಡಿದ್ದಾರೆ. ಮಾಡುತ್ತಿದ್ದಾರೆ. ಇದರ ಸದುಪಯೋಗವನ್ನು ಸಾವಿರಾರು ಜನರು ಪಡೆದುಕೊಂಡಿದ್ದಾರೆ. ಎಲ್ಲ ಭಾಷೆಯ ಜನರೂ ಮೆಚ್ಚಿಕೊಂಡಿದ್ದಾರೆ. ಎಲ್ಲರಿಗಾಗಿಯೂ ಇಲ್ಲಿ ಜ್ಞಾನದ ಔತಣವಿದೆ.

ಬನ್ನಿ ಇಂದೇ subscribe ಆಗಿ **SRI UTTARADIMATH ADHYATMAVANI**

# ಲಕ್ಷ್ಮೀನರಸಿಂಹಾತ್ಮಕ ವಿಶೇಷಣದ ಔಚಿತ್ಯ

✍ ಪಂ. ಸಗ್ರಿ ರಾಘವೇಂದ್ರಾಚಾರ್ಯ

ಶ್ರೀರಾಘವೇಂದ್ರ ಗುರುಗಳು ಪ್ರಾತಃಸಂಕಲ್ಪಗದ್ಯದಲ್ಲಿ ತಮ್ಮ ಆರಾಧ್ಯನಾದ ಸೀತಾಪತಿ ರಾಮಚಂದ್ರನಲ್ಲಿ ಕರ್ತೃತ್ವಕಾರಯಿತೃತ್ವಗಳ ಸಂಕಲ್ಪವನ್ನು ಮಾಡುವಾಗ ರಾಮಚಂದ್ರನಿಗೆ ಲಕ್ಷ್ಮೀನರಸಿಂಹಾತ್ಮಕ ಎಂಬ ವಿಶೇಷಣವನ್ನು ನೀಡಿರುವರು. ರಾಮಚಂದ್ರ ನರಸಿಂಹ ರೂಪದಿಂದ ಹೇಗೋ ಹಾಗೆಯೇ ಭಗವಂತನ ಮತ್ಸ್ಯಾದ್ಯನಂತರೂಪಗಳಿಂದಲೂ ಅಭಿನ್ನನಾಗಿರುವವನು. ಹೀಗಿರುವಾಗ ಅಂತಹ ವಾಸುದೇವಾದಿರೂಪಗಳನ್ನೆಲ್ಲ ಬಿಟ್ಟು ನರಸಿಂಹರೂಪವನ್ನಷ್ಟೇ ಪರಿಗಣಿಸಿ ಲಕ್ಷ್ಮೀನರಸಿಂಹಾತ್ಮಕ ಎಂದು ಅದರ ತಾದಾತ್ಮ್ಯದ ಚಿಂತನೆಯನ್ನಷ್ಟೇ ಯಾಕೆ ಮಾಡಿರುವರು ? ಶ್ರೀಟೀಕಾಕೃತ್ಪಾದರು ತತ್ತ್ವೋದ್ಯೋತದ ಟೀಕೆಯಲ್ಲಿ ಮಂಗಲಾಚರಣೆಯ ಪದ್ಯದ ವಿಶೇಷಣಗಳ ಬಗ್ಗೆ

**"ಯದ್ಯಪ್ಯತ್ರ ನ ವಿಶೇಷಣಾನಾಂ ಪರಸ್ಪರಸಂಗತ್ಯಪೇಕ್ಷಾ । ವಿಶೇಷ್ಯಪ್ರಶಂಸಾ-ಮಾತ್ರಪರತ್ವೇನ ನಿರಾಕಾಂಕ್ಷತ್ವಾತ್ । ತಥಾಪ್ಯೇತೈರೇವ ಸ್ತವನೇ ಕಿಮಪಿ ಪ್ರಯೋಜನಮಭಿಧೀಯತೇ"**

ಎಂದು ಅಭಿಪ್ರಾಯಪಟ್ಟಿರುವಂತೆ ರಾಮಚಂದ್ರನನ್ನು ಸ್ತುತಿಸಿ ನಿವೇದಿಸಿಕೊಳ್ಳುವ ಈ ಪ್ರಸಂಗದಲ್ಲಿ ಸ್ತುತಿರೂಪದಲ್ಲಿ ರಾಮಚಂದ್ರನಿಗೆ ಯಾವ ವಿಶೇಷಣವನ್ನಾದರೂ ನೀಡಬಹುದು. ಆದರೂ ಸ್ತುತಿಸುವಲ್ಲೂ ಈ ವಿಶೇಷಣವನ್ನೇ ವಿಶೇಷವಾಗಿ ವಿನಿಯೋಗಿಸಿಕೊಳ್ಳುವಲ್ಲಿ ಪ್ರಯೋಜನವಿಶೇಷವನ್ನು ಗುರುತಿಸಬಹುದಾಗಿದೆ.

ರಾಮಚಂದ್ರನಲ್ಲಿ ಕರ್ತೃತ್ವಕಾರಯಿತೃತ್ವಸಂಕಲ್ಪ ಮಾಡುವಾಗ ಅವನು ಅದನ್ನು ನಿರಾಕರಿಸುವ ಅಪಾಯ ಇದೆ. ಯಾಕೆಂದರೆ "ಶ್ರುತಿಸ್ಮೃತೀ ಹರೇರಾಜ್ಞೇ" ಎಂದಿರುವಂತೆ ತನ್ನ ಆಜ್ಞಾರೂಪದಲ್ಲಿರುವ ಶ್ರುತಿಸ್ಮೃತಿಗಳ ವಿಧಿನಿಷೇಧಗಳ ಉಲ್ಲಂಘನೆ ಎಸಗುವ ಮೂಲಕ ತನ್ನ ವಿರುದ್ಧವಾಗಿ ಅಪರಾಧವನ್ನೆಸಗಿರುವ ನಿನ್ನ ಸಂಕಲ್ಪವನ್ನು ನಾನೇಕೆ ಸ್ವೀಕರಿಸಲಿ ? ಎಂದು. ರಾಮಚಂದ್ರ ಹೀಗೆ ತನ್ನ ಬಗ್ಗೆ ಅಸಮಾಧಾನ ತಾಳದಂತೆ ಕ್ಷಮಾಸಮುದ್ರ ಭಕ್ತಾಪರಾಧಸಹಿಷ್ಣೋ.. ಎಂಬ ಎರಡು ಸಂಬೋಧನೆಗಳ ಮೂಲಕ ತನ್ನ ಶ್ರುತಿಸ್ಮೃತಿಗಳ ವಿಧಿನಿಷೇಧಗಳ ಉಲ್ಲಂಘನೆ ಪ್ರಯುಕ್ತವಾದ ಅಪರಾಧಗಳನ್ನು ಸಹಿಸಿಕೊಳ್ಳಬಲ್ಲ ಸ್ವಭಾವದವನು ತಾನೆ ನೀನು ? ಆ ನಿಟ್ಟಿನಲ್ಲಿ ಭಕ್ತನಾದ ನನ್ನ ಬಗ್ಗೆ ಕ್ಷಮೆಯ ಸಾಗರವನ್ನೇ ಹರಿಸುವವನು ನೀನು ತಾನೇ ? ಎಂದು ವಿನಂತಿಸಿಕೊಳ್ಳಲಾಗಿದೆ.

ಭಕ್ತವತ್ಸಲನಾದ ರಾಮಚಂದ್ರ ಈ ವಿನಂತಿಗೆ ಸ್ಪಂದಿಸಿಯೇ ತೀರುವನು. ಸ್ಪಂದಿಸಿ ಏನು ಮಾಡುವನು ?

**ಅವಶ್ಯಮೇವ ಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಮ್ ।**

**ನಾಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ ॥**

ಎಂದು ಗರುಡಪುರಾಣದಲ್ಲಿ ಸಾರಲ್ಪಟ್ಟಿರುವಂತೆ ಎಸಗಿಸಲ್ಪಟ್ಟ ಅಪರಾಧದ ಫಲವನ್ನು ಅನುಭವಿಸದೆಯೇ ಅದನ್ನು ಪರಿಹರಿಸಲಾಗದು. “ಉಪಮರ್ದಂ ಚ” ಎಂಬ ಬ್ರಹ್ಮಸೂತ್ರ-ದಲ್ಲಿ ಸಿದ್ಧಾಂತಿಸಿರುವಂತೆ ಎಸಗಲ್ಪಟ್ಟ ಪಾಪಕರ್ಮ ವಸ್ತು ಉಪಮರ್ದಕ್ಕೆ, ಕುಸಿತಕ್ಕೆ ಒಳಪಡಿಸಿ ಅದು ಆದಷ್ಟು ಕಡಿಮೆ ಪ್ರಮಾಣದ ದುಷ್ಫಲಕ್ಕೆ ಪ್ರಯೋಜಕವಾಗುವಂತೆ ಮಾಡಬಹುದಷ್ಟೇ. ಈ ಉಪಮರ್ದದಲ್ಲಿ ಎರಡು ಅಂಶಗಳು “ಸ್ವಾಮಿನ್ ನಿರ್ದೋಷ ಮದ್ದೋಷಂ ವಿವೇಚಯ” ಎಂದು ಪ್ರಾರ್ಥಿಸಿಕೊಂಡಿರುವಂತೆ ಪಾಪವನ್ನು ಎಸಗುವಲ್ಲಿ ಮುಖ್ಯಪಾತ್ರ ಕಾಮಾದಿದೋಷಗಳಿಗೆ ಅವಾಂತರಾಭಿಮಾನಿಗಳಾಗಿರುವ ಕಾಲನೇಮಿ ಮುಂತಾದ ಅಸುರರದ್ದು. ಹಾಗಾಗಿ ಅವರ ಪ್ರೇರಣೆಯಿಂದ ಎಸಗಲ್ಪಟ್ಟ ಪಾಪಗಳ ದುಷ್ಫಲಗಳ ಅಧಿಕಾಂಶಗಳು ಅವರಿಗೆ ಸೇರಬೇಕಾದದ್ದು. ಹೀಗೆ ಪಾಪಗಳ ದುಷ್ಫಲಗಳನ್ನು ವಿವೇಚನೆಗೆ ಒಳಪಡಿಸುವುದು ಒಂದಂಶ.

ಹೀಗೆ ವಿವೇಚಿಸಿ ಲಬ್ಧವಾದ ಪಾಪದ ದುಷ್ಫಲದ ಅಂಶವೂ ಆದಷ್ಟು ಕಡಿಮೆ ಫಲಕ್ಕೆ ಪ್ರಯೋಜಕವಾಗುವಂತೆ ಮಾಡುವುದು ಮತ್ತೊಂದು ಅಂಶ.

ಈ ಎರಡು ಅಂಶಗಳನ್ನೊಳಗೊಂಡ ಉಪಮರ್ದವನ್ನು ಭಗವಂತ ತನ್ನ ನರಸಿಂಹ-ರೂಪದಿಂದ ನಡೆಸುವನು. “ನೃಸಿಂಹಾದಿಕಮನ್ಯಚ್ಚ ದುರಿತಾದಿನಿವೃತ್ತಯೇ । ಉಪಾಸ್ಯತೇ” ಎಂಬ ಬ್ರಹ್ಮತರ್ಕ (ಬ್ರಹ್ಮಸೂತ್ರ.ಭಾ.3-3-61) ದುರಿತನಿವರ್ತಕನನ್ನಾಗಿ ನರಸಿಂಹನನ್ನು ಗುರುತಿಸಿಟ್ಟಿದೆ. ಭಗವಂತನ ರೂಪಗಳಲ್ಲಿ ಅತ್ಯಂತಾಭೇದ ಇರುವುದಾದರೂ ಭೇದಪ್ರತಿನಿಧಿ-ಯಾದ ವಿಶೇಷದ ಪ್ರಭಾವದಿಂದಾಗಿ ಭಗವಂತ ಭಕ್ತರ ದುರಿತಗಳ ನಿವೃತ್ತಿಯನ್ನು ತನ್ನ ನರಸಿಂಹರೂಪದಿಂದಲೇ ನಡೆಸುವನು. ಉಳಿದ ರೂಪಗಳ ಮೂಲಕ ಪಾಪನಾಶ-ವಾಯಿತೆನ್ನುವಾಗಲೂ ಆ ರೂಪಗಳು ತಮ್ಮ ಅತ್ಯಂತಾಭೇದಕ್ಕೊಳಗಾದ ನೃಸಿಂಹರೂಪದ ಮೂಲಕವೇ ಪಾಪನಿವೃತ್ತಿಯನ್ನು ನಡೆಸಿದರೆಂದರ್ಥ.

ಪ್ರಕೃತ ರಾಮಚಂದ್ರ “ಭಕ್ತಾಪರಾಧಸಹಿಷ್ಣೋ” ಎಂಬ ವಿಶೇಷಣಕ್ಕನುಗುಣವಾಗಿ ಭಕ್ತರ ಅಪರಾಧಗಳನ್ನು ಪರಿಹರಿಸಿ, ಅವುಗಳನ್ನು ಸಹಿಸುವುದು ತನ್ನ ಅತ್ಯಂತಾಭೇದ-ಕ್ಕೊಳಗಾಗಿರುವ ನರಸಿಂಹರೂಪದ ಮೂಲಕವೇ. ಅದರ ಸೂಚನೆಗಾಗಿಯೇ ಶ್ರೀರಾಘವೇಂದ್ರಗುರುಗಳು ಲಕ್ಷ್ಮೀನರಸಿಂಹಾತ್ಮಕ ಎಂಬ ವಿಶೇಷಣವನ್ನು ರಾಮಚಂದ್ರನಿಗೆ ನೀಡಿರುವರು. ನರಸಿಂಹ ಹಾಗೆ ಉಪಮರ್ದಗೊಳಿಸುವಲ್ಲಿ ಭಕ್ತನ ಬಗ್ಗೆ ಲಕ್ಷ್ಮೀದೇವಿಯ ಶಿಫಾರಸ್ಸೂ ಸೇರಿಕೊಂಡಿರುವುದೆಂಬುದರ ಸೂಚನೆಗಾಗಿಯೇ ನರಸಿಂಹನ ಸಾಹಿತ್ಯಕ್ಕೊಳಗಾದ ಲಕ್ಷ್ಮೀದೇವಿಯನ್ನೂ ಉಲ್ಲೇಖಿಸಿರುವರು.

..ಕ್ರಮಶಃ...

# ವಿಷ್ಣುಸಹಸ್ರನಾಮ

✍ ಪಂ. ಪದ್ಮನಾಭಾಚಾರ್ಯ ಚಿಟಗುಪ್ಪ

**ಯಜ್ಞ ಇಜ್ಯೋ ಮಹೇಜ್ಯಶ್ಚ ಕ್ರತುಃ ಸತ್ರಂ ಸತಾಂಗತಿಃ ।**
**ಸರ್ವದರ್ಶೀ ವಿಮುಕ್ತಾತ್ಮಾ ಸರ್ವಜ್ಞೋ ಜ್ಞಾನಮುತ್ತಮಮ್ ॥48॥**

**451.** ಯಜ್ಞಃ – ಯಜ್ಞಭೋಕ್ತೃವಾದುದರಿಂದ ಭಗವಂತನು ಯಜ್ಞನಾಗಿರುವನು. ಭಗವಂತನು ತನ್ನ ಸ್ವರೂಪಾತ್ಮಕವಾದ ಆನಂದಾದಿ ಹವಿಸ್ಸನ್ನು ಅಗ್ನಿರೂಪದಿಂದ ತಾನೇ ಭುಂಜಿಸುವನು. ಆದ್ದರಿಂದ ಯಜ್ಞನು. ಗೀತಾತಾತ್ಪರ್ಯದಲ್ಲಿ ಶ್ರೀಮದಾಚಾರ್ಯರು ''ಸ್ವಭೋಗ್ಯತ್ವಾತ್ ಸ್ವಯಮೇವ ಯಜ್ಞಃ'' ಎಂದು ಹೇಳಿದ್ದಾರೆ.

★ ಯದಸ್ತಿ ತಜ್ಜಾನಾತಿ ಇತಿ ಯಜ್ಞಃ । ಭಗವಂತನು ಸರ್ವಜ್ಞನು. ಏನೇನಿದೆಯೋ ಅದೆಲ್ಲವನ್ನೂ ತಿಳಿದಿರುವನು. ಆದ್ದರಿಂದ ಯಜ್ಞನು. ಅಥವಾ ಯದಸ್ತಿ ತದ್ ಜ್ಞಾಪಯತಿ ಇತಿ ಯಜ್ಞಃ । ಯಾವ ಭಗವಂತನ ಅನುಗ್ರಹದಿಂದ ಎಲ್ಲರೂ ಜ್ಞಾನವನ್ನು ಪಡೆಯುವರೋ ಆ ಭಗವಂತನು ಯಜ್ಞನು. ಈಶಾವಾಸ್ಯ ಉಪನಿಷತ್ತಿನಲ್ಲಿ ಯಜ್ಞನಾಮಕ ಭಗವಂತನನ್ನು ಸ್ತುತಿಸುವಾಗ ಶ್ರೀಮದಾನಂದ ತೀರ್ಥಭಗವತ್ಪಾದರು ಯಾವ ಬ್ರಹ್ಮ, ರುದ್ರ , ಇಂದ್ರ ಮೊದಲಾದ ದೇವತೆಗಳು ಹಾಗೂ ಲಕ್ಷ್ಮೀದೇವಿಯೂ ಭಗವಂತನಿಂದ ಜ್ಞಾನಸ್ಫುರಣವನ್ನು ಹೊಂದುವರೋ ಆ ಭಗವಂತನು ಯಜ್ಞ ಎಂದು ತಿಳಿಸಿರುವರು.

**ಯಸ್ಮಾತ್ ಬ್ರಹ್ಮೇಂದ್ರರುದ್ರಾದಿದೇವತಾನಾಂ ಶ್ರಿಯೋಽಪಿ ಚ ।**
**ಜ್ಞಾನಸ್ಫೂರ್ತಿಃ ಸದಾ ತಸ್ಮೈ ಹರಯೇ ಗುರವೇ ನಮಃ ॥**

★ 'ಜ್ಞ ದೇವಪೂಜಾಸಂಗತಿಕರಣದಾನೇಷು' ಎಂದು ಧಾತುವಿದೆ. ಅವುಗಳಲ್ಲಿ ಸಂಗತಿಕರಣ ಎಂದರೆ ಸಂಯೋಜನೆ ಎಂದರ್ಥ. ಭಗವಂತನು ಪಾತಾಳಾದಿ ಕೆಳಗಿನ ಲೋಕಗಳನ್ನು, ಭೂರಾದಿ ಮೇಲಿನ ಲೋಕಗಳನ್ನು ಅನ್ಯೋನ್ಯವಾಗಿ ಒಂದಕ್ಕೊಂದು ಘರ್ಷಣೆಯಾಗದಂತೆ, ಸುವ್ಯವಸ್ಥಿತವಾಗಿ ಸಂಯೋಜನೆಯನ್ನು ಮಾಡಿರುವನು. ಆದ್ದರಿಂದ ಯಜ್ಞನು.

ಅಥವಾ ದಾನ. ಭಗವಂತನು ತನ್ನನ್ನು ಆರಾಧಿಸುವ ಭಕ್ತರಿಗೆ ಅವರವರ ಅಭೀಷ್ಟಗಳನ್ನು ಕೊಡುವದರಿಂದ ಯಜ್ಞನು ಎಂದೂ ಉಪಾಸನೆಯನ್ನು ಮಾಡಬೇಕು.

ಅಥವಾ ಯದಸ್ತಿ ತದ್ ಜ್ಞಪಯತಿ । ಏನೇನು ಸೃಷ್ಟವಾಗಿರುತ್ತದೆಯೋ, ಪ್ರಳಯಕಾಲದಲ್ಲಿ ಅದೆಲ್ಲವನ್ನು ಸಂಹರಿಸುವನು. ಆದ್ದರಿಂದ ಯಜ್ಞ ಎಂದು ತಿಳಿಯಬಹುದು.

**452.** ಇಜ್ಯಃ :- ಪೂಜ್ಯನಾಗಿರುವವನು. ಪೂಜೆಗೊಳ್ಳುವವನು. ಭಗವಂತನು ಎಲ್ಲರಿಂದಲೂ, ಸಕಲವಿಧಗಳಿಂದಲೂ ಪೂಜ್ಯನಾಗಿರುವನು. ಕೇವಲ ಪ್ರತಿಮೆಗಳಲ್ಲಿ ಅಷ್ಟೇ ಅಲ್ಲ. ಅಗ್ನಿ, ನೀರು, ಆಕಾಶ, ವಾಯು, ವೃಕ್ಷ, ಗೋ, ಬ್ರಾಹ್ಮಣರು, ಸುಮಂಗಲಿಯರು, ಸಂನ್ಯಾಸಿ, ನದಿ, ಸರೋವರ, ಪುಷ್ಕರಣಿ, ತಿನ್ನುವ ಪದಾರ್ಥ,

ಗುರು-ಹಿರಿಯರು, ದೇವತೆಗಳು, ತನ್ನ ಹೃದಯ ಹೀಗೆ ಒಂದೇ ಎರಡೇ ? ಅನಂತ ಅಧಿಷ್ಠಾನಗಳಲ್ಲಿ ಪೂಜೆಗೊಳ್ಳುವನು ಭಗವಂತ. ವೇದ, ಸ್ಮೃತಿ, ಪುರಾಣ ಎಲ್ಲದರಲ್ಲಿ ಇದ್ದು ಪೂಜ್ಯನಾಗಿರುವನು. ಆದ್ದರಿಂದ ಇಜ್ಯನು. ಪ್ರತಿಯೊಂದು ವಸ್ತುವೂ ಅವನಿಗೆ ಪೂಜಾಸ್ಥಾನವೇ ಆಗಿದೆ.

★ಯಜ್ಞಾದಿಗಳಲ್ಲಿ ನಿಯಾಮಕನಾಗಿರುವನು. ಅಂತರ್ಯಾಮಿಯಾಗಿರುವನು. ಯಜ್ಞಕ್ಕೆ ಒಡೆಯನಾಗಿರುವನು. ಯಜ್ಞದ ಸಾಧನ, ಫಲಗಳ, ಸಾಮಗ್ರಿಗಳ, ಯಜಮಾನನ, ಯಜ್ಞಾಗ್ನಿಯ, ಹವಿಸ್ಸುಗಳ ನಾಯಕನು ಆಗಿರುವನು.

**453.** ಮಹೇಜ್ಯಃ :- ಮಹ = ಉತ್ಸವ. ಭಗವಂತನು ಉತ್ಸವಗಳಲ್ಲಿ ಪೂಜ್ಯನಾಗಿರುವನು. ಉತ್ಸವವನ್ನು ಆಚರಿಸುವದು ಆನಂದದಿಂದ ಮತ್ತು ಆನಂದದ ಉದ್ದೇಶ್ಯದಿಂದ. ಭಗವಂತನು ಸರ್ವೋತ್ತಮನು, ಸರ್ವತಂತ್ರಸ್ವತಂತ್ರನು. ಅವನ ಮಹಿಮೆಯನ್ನರಿತ ಮಹಾನುಭಾವರು ಭಕ್ತಿಯಿಂದ ಅವನ ಆರಾಧನೆಯನ್ನು, ಉತ್ಸವವನ್ನು ಮಾಡುವರು.

ಅಥವಾ ಯಜ್ಞ ಮೊದಲಾದ ಉತ್ಸವಗಳಲ್ಲಿ ಪೂಜೆಗೊಳ್ಳುವವನು. ಯಾವ ಯಜ್ಞಗಳಾಗಲೀ, ಉತ್ಸವಗಳಾಗಲೀ, ಸತ್ಕರ್ಮಗಳಾಗಲೀ ನಡೆದರೂ ಅವುಗಳಲ್ಲಿ ಆಯಾ ದೇವತೆಗಳನ್ನು ಮಂತ್ರಗಳಿಂದ ಆಹ್ವಾನಿಸಿ ಆಹುತಿಯನ್ನು ಕೊಡುವುದಾಗಲೀ, ಪೂಜಿಸುವುದಾಗಲೀ ಅದು ಕೇವಲ ಅವರಿಗೆ ಅಲ್ಲ. ಅಂತರ್ಯಾಮಿಯಾದ ಭಗವಂತ ನಿಗೆಯೇ ಸಲ್ಲುತ್ತದೆಯೆಂದು ಶ್ರೀಕೃಷ್ಣನು ಗೀತೆಯಲ್ಲಿ ಸ್ಪಷ್ಟವಾಗಿ ಹೇಳಿರುತ್ತಾನೆ.

**''ಯೇಽಪ್ಯನ್ಯದೇವತಾಭಕ್ತಾ ಯಜಂತೇ ಶ್ರದ್ಧಯಾನ್ವಿತಾಃ ।**
**ತೇಽಪಿ ಮಾಮೇವ ಕೌಂತೇಯ ಯಜಂತ್ಯವಿಧಿಪೂರ್ವಕಮ್ ॥**
**ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ ॥''**

ಆದ್ದರಿಂದ ಭಗವಂತನು ಮಹೇಜ್ಯನು.

★ ಮಹೇ ಜ್ಯಾ ಯಸ್ಯ ಸಃ ಮಹೇಜ್ಯಃ । ಸೀತಾದೇವಿಯ ವಿವಾಹೋತ್ಸವದಲ್ಲಿ ಸೀತಾದೇವಿಯನ್ನು ಪಡೆಯುವುದಕ್ಕಾಗಿ ಬಿಲ್ಲಿನ ಹಗ್ಗವನ್ನು ಏರಿಸಿದವನು. ಸೀತೆಯನ್ನು ಪಡೆದವನು. ಆದ್ದರಿಂದ ಮಹೇಜ್ಯ ಎಂದು ತಿಳಿಯಬಹುದು.

★ ಈ ಎಂದರೆ ಶ್ರೀದೇವಿ. ಜ್ಯಾ ಎಂದರೆ ಭೂದೇವಿ. ಮಹಾ = ಉತ್ತಮರಾದ, ಪೂಜ್ಯರಾದ ಶ್ರೀದೇವಿ-ಭೂದೇವಿಯರನ್ನು ಪತ್ನಿಯರನ್ನಾಗಿ ಪಡೆದಿರುವನು. ಆದ್ದರಿಂದ ಮಹೇಜ್ಯನು.

★ ಮಹ್ಯಂತೇ ಇತಿ ಮಹಾಃ, ತೈಃ ಇಜ್ಯಃ = ಮಹೇಜ್ಯಃ । ಮಹ ಪೂಜಾಯಾಂ ಎಂದು ಧಾತುಪಾಠವಿದೆ. ಪೂಜ್ಯರಾದ ದೇವತೆಗಳಿಂದ, ಋಷಿಗಳಿಂದ, ಜ್ಞಾನಿಗಳಿಂದ, ಪೂಜಿಸಲ್ಪಡುವನು. ಆದ್ದರಿಂದ ಮಹೇಜ್ಯನು.

ಅಥವಾ ಯಜ ಧಾತುವಿಗೆ ಪೂಜಾ ಎಂಬ ಅರ್ಥವಿರುವಂತೆ ದಾನ ಎಂದೂ ಅರ್ಥವಿದೆ. ಮಹ = ಮಹಾತ್ಮರಾದ ಜ್ಞಾನಿಗಳಿಂದ ಶಿಷ್ಯ, ಪ್ರಶಿಷ್ಯ, ಪರಂಪರೆಯಿಂದ

ಉಪದೇಶಾದಿಗಳ ಮುಖಾಂತರ ಕೊಡಲ್ಪಡುವವನು. ಬೋಧಿಸಲ್ಪಡುವವನು. ಆದ್ದರಿಂದ ಮಹೇಜ್ಯನು.

**454.** **ಕ್ರತುಃ** :- ಜ್ಞಾನಸ್ವರೂಪನು. ಭಗವಂತನನ್ನು ಈಶಾವಾಸ್ಯ ಉಪನಿಷತ್ತಿನಲ್ಲಿ 'ಕ್ರತೋ ಸ್ಮರ' ಎಂಬುದಾಗಿ ಪ್ರಾರ್ಥಿಸಿದ್ದಾರೆ. 'ಜ್ಞಾನರೂಪಿಯಾದ ಭಗವಂತನೇ ! ನನ್ನನ್ನು ಅನುಗ್ರಹಿಸು' ಎಂದು ಸಂಬೋಧಿಸಲಾಗಿದೆ.

ಕ್ರತು ಎಂಬ ಶಬ್ದಕ್ಕೆ ಕೃತಿ ಎಂದೂ ಅರ್ಥವಿದೆ. ಗೀತಾಚಾರ್ಯನು ಭಗವದ್ಗೀತೆಯ 9ನೆಯ ಅಧ್ಯಾಯದಲ್ಲಿ ''ಅಹಂ ಕ್ರತುರಹಂ ಯಜ್ಞಃ ಸ್ವಧಾಽಹಮಹಮೌಷಧಮ್'' ಎಂದು ತಾನು ಕ್ರತು ಎಂದು ಹೇಳಿಕೊಂಡಿದ್ದಾನೆ. ಅಲ್ಲಿ ಕ್ರತು ಶಬ್ದವನ್ನು ವ್ಯಾಖ್ಯಾನಿಸುವಾಗ ಶ್ರೀಮದಾಚಾರ್ಯರು 'ಕ್ರತುಃ ಕೃತಿಸ್ವರೂಪತ್ವಾತ್' ಎಂದು ಭಗವಂತನು ಕೃತಿಸ್ವರೂಪನಾದುದರಿಂದ ಕ್ರತು ಎಂದು ತಿಳಿಸಿದ್ದಾರೆ.

★ ಸರ್ವಂ ಕರೋತಿ ಇತಿ ಕ್ರತುಃ । ಎಲ್ಲವನ್ನು ಮಾಡುವವನು. ಸರ್ವಕರ್ತೃವಾದುದರಿಂದ ಭಗವಂತನು ಕ್ರತು ಎಂದು ಕರೆಯಲ್ಪಡುವನು. ಜಗತ್ತಿನ ಸೃಷ್ಟ್ಯಾದಿವ್ಯಾಪಾರವನ್ನು ಮಾಡುವದರಿಂದ ಕ್ರತು.

**455.** **ಸತ್ರಂ** :- ಸತಃ ತ್ರಾಯತೇ ಇತಿ ಸತ್ರಮ್ । ಸಜ್ಜನರನ್ನು ರಕ್ಷಿಸುವನು. ಭಗವಂತನು ಎಲ್ಲರನ್ನು ರಕ್ಷಿಸುವನು. ವಿಶೇಷವಾಗಿ ಸಾತ್ವಿಕರನ್ನು, ಸಜ್ಜನರನ್ನು ರಕ್ಷಿಸುವನು. ಆದ್ದರಿಂದ ಸತ್ರಮ್.

ತ್ರೈಙ್ ಪಾಲನೇ ಎಂದು ಧಾತುವಿದೆ. ತ್ರ ಎಂದರೆ ಪಾಲನೆ ಎಂದರ್ಥ. ಅದರಿಂದ ಸಹಿತನಾದವನು ಸತ್ರಮ್. ಭಗವಂತನು ಸಮಸ್ತ ಜಗತ್ತಿನ ಪಾಲನೆಯನ್ನು ಮಾಡುತ್ತಿರುವನು. ಅದು ಅವನ ಸ್ವಭಾವವಾಗಿದೆ. ದ್ವಾದಶಸ್ತೋತ್ರದಲ್ಲಿ ''ಪೀನವೃತ್ತಾಜಗದ್ರಕ್ಷಾಕೇವಲೋದ್ಯೋಗಿನೋಽನಿಶಮ್'' ಎಂದು ತನ್ನ ಕೈಗಳಿಂದ ಸದಾ ಜಗತ್ತಿನ ರಕ್ಷಣೆಯನ್ನು ಮಾಡುತ್ತಿರುವನು ಎಂದು ತಿಳಿಸಿದ್ದಾರೆ.

★ ಯಜ್ಞವು ಏಕಕರ್ತೃಕವಾಗಿರುವದು. ಸತ್ರವು ಅನೇಕ ಕರ್ತೃಕವಾಗಿರುತ್ತದೆ. ಅನೇಕರು ಸೇರಿ ಮಾಡುವ ಪಾರಾಯಣ, ಹವನ, ಭಜನೆ, ಜ್ಞಾನಕಾರ್ಯ, ಯಾತ್ರೆ ಮುಂತಾದವುಗಳನ್ನು ಸತ್ರ ಎಂದು ಕರೆದಿರುವರು. ಅಂತಹ ಸತ್ರಕ್ಕೆ ಭಗವಂತನು ಪ್ರೇರಕನು, ನಿಯಾಮಕನು, ಚಾಲಕನು ಆದ್ದರಿಂದ ಭಗವಂತನು ಸತ್ರನು.

★ ಸತಃ ರಮಯತಿ ಇತಿ ಸತ್ರಮ್ । ಭಗವಂತನು ಸಜ್ಜನರನ್ನು ಆನಂದಪಡಿಸುವನು. ಸತ್=ನಿರ್ದೋಷರಾದ (ಸಂಸಾರದೋಷದಿಂದ ದೂರರಾದ) ಮುಕ್ತರನ್ನು, ಲಕ್ಷ್ಮೀದೇವಿಯನ್ನು ರ=ರಕ್ಷಿಸುವನು.

ಸತ್ = ಉತ್ತಮನಾದವನು. ರ - ಆನಂದರೂಪನು. ಆದ್ದರಿಂದ ಸತ್ರನು. ಛಾಂದೋಗ್ಯ ಉಪನಿಷತ್ತಿನ ಭಾಷ್ಯದಲ್ಲಿ ಶ್ರೀಮದಾಚಾರ್ಯರು ''ಸರ್ವೋತ್ತಮತ್ವಾತ್ ಸನ್ನಾಮಾ'' ಎಂದು ಹೇಳಿರುವರು. ಸಾರರೂಪನಾದ್ದರಿಂದ ಸತ್ರ ಎಂದೂ ತಿಳಿಯಬಹುದು.                    ...ಸಶೇಷ...

# ಜ್ಞಾನ ಹಾಗೂ ಧನದ ಪ್ರಾಪ್ತಿ ಯಾರಿಂದ ?

## ಶ್ರುತಿಸುಧಾ

✍ ಡಾ.ವೆಂಕಟಗಿರೀಶಾಚಾರ್ಯ

ಸರ್ವೋತ್ತಮನಾದ , ಸರ್ವಶಕ್ತನಾದ, ಸ್ವತಂತ್ರನಾದ ಶ್ರೀಹರಿಯು ಸಕಲ ಜೀವರಿಗೆ ಆವಶ್ಯಕವಾದ ಸಕಲವನ್ನು ಕೊಡಲು ಸಮರ್ಥನಾಗಿರುವನು. ದೇವತೆಗಳಿಗೆ ಯೋಗ್ಯವಾದದ್ದನ್ನು ಕೊಡುವ ಭಗವಂತನಿಗೆ ಹಿತ ಎಂದು ಕರೆಯುವರು. ಮನುಷ್ಯರಿಗೂ ಸಹ ಅವರವರಿಗೆ ಯೋಗ್ಯವಾದದ್ದನ್ನು ದೇವರು ಕೋಡುವುದರಿಂದ ಇಷ್ಟ ನಾಮಕನಾಗಿರುವನು. ಸರ್ವರಿಗೂ ಸರ್ವಪ್ರದನಾದ ಇಂತಹ ಪರಮಾತ್ಮನನ್ನು ನಾವು ಭಜಿಸಿ ಅನೇಕ ಪದಾರ್ಥಗಳನ್ನು ಪಡೆಯುತ್ತೇವೆ. ಅಂತಹ ಪದಾರ್ಥಗಳಲ್ಲಿ ಎರಡು ಆವಶ್ಯಕವಾದವುಗಳು ಜ್ಞಾನ ಹಾಗೂ ಧನ. ಇವೆರಡನ್ನು ಸಹ ನಾವು ಸರ್ವಶಕ್ತನಾದ ದೇವರಿಂದಲೇ ಪಡೆಯಲು ಸಾಧ್ಯ ಎಂಬುದನ್ನು ವೇದವು ನಮಗೆ ತಿಳಿಸಿಕೊಡುತ್ತದೆ. ಅಂತಹ ಒಂದು ಮಂತ್ರವು ಋಗ್ವೇದದಲ್ಲಿ ಬರುತ್ತದೆ –

**ತಂ ತ್ವಾ ವಾಜೇಷು ವಾಜಿನಂ ವಾಜಯಾಮಃ ಶತಕ್ರತೋ ।**
**ಧನಾನಾಮಿಂದ್ರ ಸಾತಯೇ ।।** (೧.೪.೯)

ಈ ಮಂತ್ರಕ್ಕೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ತಮ್ಮ ಋಗ್ಭಾಷ್ಯದಲ್ಲಿ ಹೀಗೆ ವ್ಯಾಖ್ಯಾನವನ್ನು ಮಾಡಿರುವರು -

**ಯೋಧಯಾಮೋ ವಯಂ ತಂ ತ್ವಾಂ ಜ್ಞಾನಾದಿಧನಲಬ್ಧಯೇ ।**
**ಅಜ್ಞಾನಾದ್ಯಸ್ಮದರಿಭಿಃ ।।**

ಹೇ ಇಂದ್ರನೇ ! ಪರಿಪೂರ್ಣವಾದ ಜ್ಞಾನಾದಿಗುಣಗಳಿಂದ ಯುಕ್ತನಾದ, ಯುದ್ಧ ಮಾಡುವ ನಿನ್ನ ಜೊತೆಗೆ ಧನದ ಪ್ರಾಪ್ತಿಗಾಗಿ ಶತ್ರುಗಳಿಂದ ಯುದ್ಧವನ್ನು ಮಾಡೋಣ.

ಮೇಲಿನ ಮಂತ್ರದಲ್ಲಿ ವೇದವು ನಮಗೆ ಧನಾದಿಸಂಪತ್ತು ಯಾರಿಂದ ಪ್ರಾಪ್ತವಾಗುವುದೆಂದು ತಿಳಿಸಿಕೊಡುತ್ತದೆ.

ಭಗವಂತನನ್ನು ಶತಕ್ರತು ಎಂದು ಮಂತ್ರದಲ್ಲಿ ಕರೆದಿರುವರು. ಕ್ರತು ಎಂದರೆ ಜ್ಞಾನ ಎಂದು ಅರ್ಥವು. "ಸ ಕ್ರತುರ್ಜ್ಞಾನರೂಪತ್ವಾತ್" ಎಂಬ ಪ್ರಮಾಣದಲ್ಲಿ ಇದನ್ನು ತಿಳಿಸಿದ್ದಾರೆ.

ಶತಶಬ್ದಕ್ಕೆ ಅಮಿತ ಎಂಬ ಅರ್ಥವನ್ನು ಶ್ರೀರಾಘವೇಂದ್ರಸ್ವಾಮಿಗಳವರು ತಮ್ಮ ಮಂತ್ರಾರ್ಥಮಂಜರಿ ಗ್ರಂಥದಲ್ಲಿ ತಿಳಿಸುವರು. ಹಾಗಾಗಿ ಭಗವಂತನು ಅಪರಿಮಿತವಾದ ಅಥವಾ ಅನಂತವಾದ ಜ್ಞಾನ ಉಳ್ಳವನಾದ್ದರಿಂದ ಶತಕ್ರತು ಎಂದು ಕರೆಯಲ್ಪಡುವನು. ಈ ಭಗವಂತನು ಹಿಂದಿನ ಮಂತ್ರಗಳಲ್ಲಿ ಹೇಳಿದ ಹಾಗೆ ಆನಂದ, ಜ್ಞಾನ ಮುಂತಾದ ಗುಣಗಳಿಂದ ಯುಕ್ತನಾಗಿರುವನು.

ಈ ಭಗವಂತನು ಒಳ್ಳೆಯ ಯೋಧನಾಗಿರುವನು. ಅವನಿಗೆ ಶತ್ರುಗಳನ್ನು ನಾಶ ಮಾಡುವ ಸಾಮರ್ಥ್ಯ ಇದೆ. ಆದ್ದರಿಂದ ಹೇ ಶತಕ್ರತೋ ! ಯುದ್ಧಗಳಲ್ಲಿ ನಿನ್ನ ಜೊತೆಗೆ ನಾವು ಧನಾದಿಗಳ ಪ್ರಾಪ್ತಿಗಾಗಿ ಶತ್ರುಗಳಿಂದ ಯುದ್ಧವನ್ನು ಮಾಡುತ್ತೇವೆ.

ಇದರ ಅಭಿಪ್ರಾಯವೇನೆಂದರೆ – ಹೇ ಭಗವನ್ ! ನಮಗಾಗಿ ನೀನೇ ನಮ್ಮ ಶತ್ರುಗಳ ಜತೆ ಯುದ್ಧವನ್ನು ಮಾಡಿ, ಅವರನ್ನು ಜಯಿಸಿ, ನಮಗೆ ಸಂಪತ್ತನ್ನು ಕೊಡುವವನಾಗು ಎಂದು ಅರ್ಥವು.

ಲೌಕಿಕ ಪ್ರಪಂಚದಲ್ಲಿ ನಮಗೆ ಧನಾದಿಸಂಪತ್ತು ದೊರೆಯಬೇಕಾದರೆ ಅನೇಕ ವಿಧವಾದ ವಿಘ್ನಗಳು ಬರುತ್ತವೆ. ಹಾಗೂ ಅನೇಕ ವಿಧರಾದ ಶತ್ರುಗಳು ಸಹ ನಮಗೆ ವಿರೋಧಿ-ಯಾಗಿರುವರು. ಆ ಎಲ್ಲ ವಿಘ್ನಗಳು ಹಾಗೂ ವಿರೋಧಿಗಳು ನಮ್ಮಿಂದ ದೂರವಾಗಬೇಕಾದರೆ ಅದಕ್ಕೆ ಭಗವಂತನ ಸಹಾಯ ಬೇಕು. ಸರ್ವಶಕ್ತನಾದ ಭಗವಂತನೇ ಆ ಎಲ್ಲ ಶತ್ರುಗಳ ಜೊತೆ ಯುದ್ಧವನ್ನು ಮಾಡಿ ಅವುಗಳನ್ನು ನಾಶಮಾಡಿ ನಮಗೆ ಸಂಪತ್ತನ್ನು ತಂದುಕೊಡಲು ಸಮರ್ಥನಾಗಿರುವನು. ಅದಕ್ಕಾಗಿ ನಾವು ಪರಮಾತ್ಮನಿಗೆ ಮೇಲಿನ ಮಂತ್ರದಲ್ಲಿ ತಿಳಿಸಿದಂತೆ ಪ್ರಾರ್ಥನೆಯನ್ನು ಮಾಡಿದರೆ, ಅವನು ನಮ್ಮ ಶತ್ರುಗಳನ್ನು ಯುದ್ಧದಲ್ಲಿ ಸೋಲಿಸಿ ನಮಗೆ ಐಹಿಕಸಂಪತ್ತನ್ನು ತಂದುಕೊಡುವನು.

ನಮ್ಮ ಬದುಕಿಗೆ ಲೌಕಿಕ ಸಂಪತ್ತು ಆವಶ್ಯಕವಾಗಿರುವಂತೆ ಆಧ್ಯಾತ್ಮಿಕ ಸಂಪತ್ತಾದ ಜ್ಞಾನವು ಸಹ ಆವಶ್ಯಕವಾಗಿದೆ. ಈ ಸಂಪತ್ತನ್ನು ಸಹ ನಾವು ಭಗವಂತನಿಂದಲೇ ಪಡೆಯಲು ಸಾಧ್ಯವಾಗಿದೆ. ಇದನ್ನು ಸಹ ಪಡೆಯಬೇಕಾದರೆ ನಮಗೆ ಅನೇಕ ವಿರೋಧಿಗಳಾದ ಶತ್ರುಗಳು ಇರುವರು – ಅಜ್ಞಾನ, ಲೌಕಿಕ ಪದಾರ್ಥಗಳಲ್ಲಿನ ಬಯಕೆ, ಆಲಸ್ಯ, ವಿಷಯಗಳ ಭೋಗದ ಆಶೆ, ಕ್ರೋಧ ಮುಂತಾದವುಗಳು ನಮಗೆ ಜ್ಞಾನಪ್ರಾಪ್ತಿಯಾಗಲು ವಿರೋಧಿಯಾಗಿವೆ. ಇವುಗಳ ಜೊತೆ ನಾವು ಯುದ್ಧವನ್ನು ಮಾಡಲು ಸಮರ್ಥರಲ್ಲ. ನಮ್ಮ ಜೊತೆಗೆ ಭಗವಂತನು ಇದ್ದರೆ ಮಾತ್ರ ನಾವು ಈ ಎಲ್ಲ ಶತ್ರುಗಳೊಂದಿಗೆ ಯುದ್ಧವನ್ನು ಮಾಡಿ ಅವುಗಳನ್ನು ಗೆಲ್ಲಲು ಸಮರ್ಥರಾಗುವೆವು. ಅದಕ್ಕಾಗಿ ನಮಗೆ ವೇದವು ದೇವರಲ್ಲಿ ಮೇಲಿನ ಪ್ರಾರ್ಥನೆಯನ್ನು ಮಾಡಬೇಕೆಂದು ಬೋಧಿಸುತ್ತದೆ. ಸರ್ವಸಮರ್ಥನಾದ ಹಾಗೂ ಸರ್ವಸ್ವಾಮಿಯಾದ ಶ್ರೀಹರಿಯು ಸದಾಕಾಲ ನಮ್ಮ ಜೊತೆಗೆ ಇರುವನು. ಸಕಲರ ಹೃದಯದಲ್ಲಿ ವಾಸಿಸುವ ಪರಮಾತ್ಮನು ನಮಗೆ ಅತ್ಯಂತ ಸಮೀಪದಲ್ಲಿ ಇರುವವನಾದ್ದರಿಂದ ನಾವು ದೇವರಲ್ಲಿ ಭಕ್ತಿಯಿಂದ ಪ್ರಾರ್ಥನೆಯನ್ನು ಮಾಡಿದ್ದಾದರೆ ಅವನು ಖಂಡಿತವಾಗಿ ನಮ್ಮ ಆಂತರಿಕ ಹಾಗೂ ಬಾಹ್ಯ ವಿರೋಧಿಗಳಾದ ಶತ್ರುಗಳನ್ನು ನಾಶಪಡಿಸಿ ನಮ್ಮ ಅಪೇಕ್ಷೆಯನ್ನು ಪೂರ್ಣ ಮಾಡುವನು.

ಈ ಜ್ಞಾನವೆಂಬ ಸಂಪತ್ತನ್ನು ಭಗವಂತನು ನಮಗೆ ತಾನು ಸಾಕ್ಷಾತ್ತಾಗಿ ಬಂದು ಕೊಡುವುದಿಲ್ಲ. ಕಿಂತು ನಮ್ಮ ಗುರುಗಳಲ್ಲಿ ನೆಲೆಸಿದ್ದು ಅವರ ಉಪದೇಶದ ದ್ವಾರಾ ನಮಗೆ ಕರುಣಿಸುವನು. ಆದ್ದರಿಂದ ಗುರುಗಳ ಅಂತರ್ಯಾಮಿಯಾದ ಪರಮಾತ್ಮನಿಗೆ ನಾವು, ಗುರುಗಳಿಗೆ ಗೌರವ ಸಮರ್ಪಣೆ, ಸೇವೆ ಮಾಡುವ ಮೂಲಕ ಪೂಜೆಯನ್ನು ಮಾಡಿದ್ದಾದರೆ ಅದರಿಂದ ಪ್ರೀತನಾದ ದೇವರು ನಮಗೆ ಗುರುಗಳ ಮೂಲಕವೇ ಈ ಎರಡು ವಿಧವಾದ ಸಂಪತ್ತನ್ನು ಕೊಟ್ಟು ಅನುಗ್ರಹಿಸಿಸುವನು.

ಆದ್ದರಿಂದ ಮೇಲಿನ ವೇದಮಂತ್ರದಲ್ಲಿ ಹೇಳಿದಂತೆ ಗುರ್ವಂತರ್ಯಾಮಿಯಾದ ದೇವರನ್ನು ಭಕ್ತಿಯಿಂದ ಸೇವಿಸಿ, ಲೌಕಿಕ ಹಾಗೂ ಆಧ್ಯಾತ್ಮಿಕವಾದ ಸಂಪತ್ತನ್ನು ಪಡೆದು, ಸಾಧನೆಯ ಮಾರ್ಗದಲ್ಲಿ ನಡೆದು, ಮುಕ್ತಿಯೆಂಬ ಗುರಿಯನ್ನು ತಲುಪೋಣ. ★

## ಉತ್ತರಾದಿಮಠ ಯತಿ ಪರಂಪರೆ

# ಶ್ರೀಮದಕ್ಷೋಭ್ಯತೀರ್ಥರು

✍ ಪಂ. ವಾದಿರಾಜಾಚಾರ್ಯ ಕರಣಂ

**ಅಕ್ಷೋಭ್ಯತೀರ್ಥೋ ವಿರರಾಜ ಭೂಮೌ ಸಂಕ್ಷೋಭಿತಾಶೇಷಕುವಾದಿಸಂಘಃ ।**
**ಮಧ್ವಾಗಮಾಂಭೋಜನಿಸಾರಭಾವಮರಂದಭೃಂಗೋ ವಿಷಯೇಷ್ವಸಂಗಃ ॥**ಬೃ.ಜ.ವಿ

ಶ್ರೀಮದಾಚಾರ್ಯರು ರಚಿಸಿದ ಗ್ರಂಥಗಳನ್ನು ಸರ್ವತ್ರ ಪ್ರಚಾರಪಡಿಸುವುದು ಅಕ್ಷೋಭ್ಯತೀರ್ಥರ ಗುರಿಯಾಗಿತ್ತು. ಈ ಮೂಲಕ ವೇದವ್ಯಾಸರ ಹಾರ್ದವನ್ನು ಎಲ್ಲ ಸಜ್ಜನರಿಗೆ ತಿಳಿಸುವುದೇ ಅವರ ಅಪೇಕ್ಷೆಯಾಗಿತ್ತು. ಆ ಅಪೇಕ್ಷೆಯನ್ನು ಪರಿಪೂರ್ಣ-ಗೊಳಿಸಲು ಶ್ರೀಅಕ್ಷೋಭ್ಯತೀರ್ಥರು ಸಿದ್ಧರಾದರು. ಅದಕ್ಕಾಗಿ ದುರ್ವಾದಿಗಳ ದುರ್ವಾದಗಳನ್ನು ಖಂಡಿಸಲು ಮುಂದಾದರು.

ಶ್ರೀಮದಾಚಾರ್ಯರ ಸಮಗ್ರಗ್ರಂಥಗಳನ್ನು ಅಧ್ಯಯನ ಮಾಡಿದ್ದರು. ಶ್ರೀಮದಾಚಾರ್ಯರಿಂದಲೇ ತತ್ತ್ವೋಪದೇಶವನ್ನು ಪಡೆದಿದ್ದರು. ಶ್ರೀಮದಾ-ಚಾರ್ಯರ ಶಾಸ್ತ್ರಗಳಲ್ಲಿಯ ಸಾರವನ್ನು ಸರಿಯಾಗಿ ಗ್ರಹಣ ಮಾಡಿದ್ದರು. ಅಲ್ಲಿಯ ಮಾಧುರ್ಯವನ್ನು ಆಸ್ವಾದನೆ ಮಾಡಿದ್ದರು. ಹೀಗಾಗಿ ಅವರಿಗೆ ಈ ಕಾರ್ಯ ಅನಾಯಾಸವಾಯಿತು.

ವಿಷಯಾಂತರದಲ್ಲಿ ಸ್ನೇಹ ಮನುಷ್ಯನ ಗುರಿಯನ್ನು ಸಡಿಲಗೊಳಿಸುತ್ತದೆ. ಪ್ರಧಾನವಾದ ಹೆಗ್ಗುರಿಯ ಸಾಧನೆಗಾಗಿ ಸರ್ವವನ್ನೂ ತೊರೆಯಬೇಕಾಗುತ್ತದೆ. ಶ್ರೀಅಕ್ಷೋಭ್ಯತೀರ್ಥರು ಸ್ವಯಂ ವಿಷಯವಿರಕ್ತರಾಗಿದ್ದರು. ಅವರಿಗೆ ಯಾವ ವಿಷಯಗಳಲ್ಲಿಯೂ ಸ್ನೇಹ ಇರಲಿಲ್ಲ. ವಿರಕ್ತರಾಗಿಯೇ ಸನ್ನ್ಯಾಸವನ್ನು ಸ್ವೀಕರಿಸಿದ್ದರು. ಅಕ್ಷೋಭ್ಯತೀರ್ಥರ ಈ ಗುರುವಾದ ಗುರಿಯನ್ನು ಬೇರೆ ಯಾವ ಕಾರ್ಯವೂ ಸಡಿಲಗೊಳಿಸಲಿಲ್ಲ. ಹೀಗೆ ಸ್ಥಿರವಾದ ಗುರಿಯಿಂದ ಈ ಗುರುಗಳು ಜಗತ್ತಿನಲ್ಲಿ ಸರ್ವತ್ರ ಪರಿಶೋಭಿಸಿದರು. ವಿಶ್ವಗುರುಗಳಾಗಿ ಸುಪ್ರಸಿದ್ಧರಾದರು.

### ರಂಗಣ್ಣ-ದಾಮಣ್ಣರ ವಿಚಿತ್ರ ಕಥೆ

**ಕದಾಚಿದಾಜಗ್ಮತುರತ್ರ ವಿಪ್ರೌ ಬಹಿಷ್ಕೃತೌ ಬ್ರಾಹ್ಮಣಹತ್ಯಯಾ ಜನೈಃ ।**
**ಪ್ರಾಜ್ಞಂ ಯತೀಂದ್ರಂ ಸಮವೇತ್ಯ ಪಾಪ ನಿವಾರಣೇಽತ್ಯಂತವಿಚಿತ್ರವೀರ್ಯಮ್ ॥** ಬೃ.ಜ.ವಿ

ಇಬ್ಬರು ಬ್ರಾಹ್ಮಣರಿದ್ದರು. ರಂಗಣ್ಣ ಮತ್ತು ದಾಮಣ್ಣ (ಧಾಮಣ್ಣ). ಅನಾಲೋಚಿತವಾಗಿ ಅವರಿಂದ ಬ್ರಹ್ಮಹತ್ಯೆಯು ಘಟಿಸಿತು. ಪಶ್ಚಾತ್ತಾಪದಿಂದ ಬೆಂದುಹೋದರು. ಜನರೆಲ್ಲರೂ ಆ ಬ್ರಾಹ್ಮಣರಿಗೆ ಬಹಿಷ್ಕಾರ ಹಾಕಿದರು.

ತಮ್ಮಿಂದ ಪಾಪ ಘಟಿಸಿದ್ದಂತೂ ಸತ್ಯ. ಅದಕ್ಕೆ ಜನರು ತಮಗೆ ಬಹಿಷ್ಕಾರ ಹಾಕಿದ್ದಾರೆ. ಅದಕ್ಕೆ ಅವರಿಗೆ ಬೇಸರವಾಗಲಿಲ್ಲ. ತಮ್ಮಿಂದ ಸಾಧುಸಮಾಜಕ್ಕೆ

ಹಾನಿಯಾಗಬಾರದೆಂದು ಅವರು ಬಯಸಿದರು. ಹೀಗಾಗಿ ಗೌರವದಿಂದಲೇ ಸಂತೋಷದಿಂದಲೇ ಆ ಬಹಿಷ್ಕಾರವನ್ನು ಸ್ವೀಕರಿಸಿದರು.

ಬಹಿಷ್ಕೃತರಾದ ಆ ಬ್ರಾಹ್ಮಣರು ತಾವು ಮಾಡಿದ ಪಾಪಕ್ಕೆ ಯೋಗ್ಯವಾದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲು ಸಿದ್ಧರಾದರು. ಆ ಪಾಪದಿಂದ ಮುಕ್ತರಾಗಲು ಬಯಸಿದರು. ತಾವು ಮಾಡಿದ ಪಾಪವನ್ನು ಪರಿಹರಿಸುವಂಥ ಮೇಧಾವಿಗಳು ಯಾರೆಂಬುದನ್ನು ಆಲೋಚಿಸಿದರು. ಎಲ್ಲ ಕಡೆಯಿಂದಲೂ ಅವರಿಗೆ ಕೇಳಿಸಿದ ಹೆಸರು ಅಕ್ಷೋಭ್ಯತೀರ್ಥರು. ಪ್ರತಿಯೊಬ್ಬರೂ ಅಕ್ಷೋಭ್ಯತೀರ್ಥರ ಸಾಮರ್ಥ್ಯವನ್ನು ಕೊಂಡಾಡಿದರು. ಅವರು ಮಾತ್ರ ನಮ್ಮ ಈ ಪಾಪವನ್ನು ಪರಿಹರಿಸಲು ಸಮರ್ಥರೆಂಬುದನ್ನು ತಿಳಿದರು. ಅವರಿದ್ದಲ್ಲಿಗೆ ಓಡಿ ಓಡಿ ಬಂದರು. ಅವರಿಗೆ ಶರಣಾದರು.

**ಪ್ರಸಂಗಕ್ಕೆ ತಕ್ಕಂತೆ ಆಚರಣೆ**

**ತತ್ಪಾದನಿರ್ಣೇಜನಮೃತ್ಸ್ನಯಾಂಗೇ ವಿಲೇಪನಾತ್ತತ್ಪದವಾರಿಸೇವನಾತ್ ।**
**ತೌ ಪೂತದೇಹಾವಪಿ ದೂರತೋ ಯತಿಂ ಪುನಃ ಪುನಃ ಸಂಪ್ರಣಿಪತ್ಯ ಚೋಚತುಃ ॥** ಬೃ.ಜ.ವಿ

ರಂಗಣ್ಣ-ದಾಮಣ್ಣರು ಬಹಿಷ್ಕೃತರಾಗಿದ್ದರು. ಬ್ರಾಹ್ಮಣರಿಗೆ ವಿಹಿತವಾದ ವಿಶಿಷ್ಟ ಧರ್ಮಗಳನ್ನು ಸಮಗ್ರವಾಗಿ ಆಚರಿಸುವಂತಿರಲಿಲ್ಲ. ತಾವು ಪಾಪಿಗಳೆಂದು ತೋರಿಸುವ ಚಿಹ್ನೆಗಳನ್ನು ಧರಿಸಿದ್ದರು. ಅಂಥ ಬ್ರಾಹ್ಮಣರು ಅಕ್ಷೋಭ್ಯತೀರ್ಥರ ಹತ್ತಿರ ಬಂದರು.

ಅದೇ ಸಂದರ್ಭದಲ್ಲಿ ಅಕ್ಷೋಭ್ಯತೀರ್ಥರ ಪಾದಪ್ರಕ್ಷಾಲನೆಯನ್ನು ಶಿಷ್ಯರು ಮಾಡುತ್ತಿದ್ದರು. ಅವರೆಲ್ಲರೂ ತೆರಳಿದ ಮೇಲೆ ತಾವಿಬ್ಬರೂ ಆ ಸ್ಥಳಕ್ಕೆ ಧಾವಿಸಿದರು. ಆ ಮೃತ್ತಿಕೆಯನ್ನು ತಮ್ಮ ಶರೀರದಲ್ಲಿ ಧರಿಸಿದರು. ಅಲ್ಲಿಯ ಪಾದಪ್ರಕ್ಷಾಲನದ ಜಲವನ್ನು ಕುಡಿದರು. ಯದ್ಯಪಿ ಗುರುಪಾದೋದಕವನ್ನು ಕುಡಿಯಬಾರದು. ಇದು ವೀರವೈಷ್ಣವ ವ್ರತ. ಆದರೂ ಅವರಿರುವ ಪ್ರಸಂಗಕ್ಕೆ ಮೃತ್ತಿಕಾಧಾರಣೆ, ಪಾದೋದಕಪ್ರಾಶನ ಇದು ಯೋಗ್ಯವೆಂದು ಅವರು ತಿಳಿದರು. ಹಾಗೆ ಪಾಲಿಸಿದರು. ಪ್ರಸಂಗಗಳಿಗೆ ತಕ್ಕಂತೆ ಆಚರಣೆಗಳನ್ನು ಪಾಲಿಸುವವರು ಸಾಧಕರೆನಿಸುತ್ತಾರೆ. ಅವರು ತೋರಿದ ಗುರುಗಳಲ್ಲಿಯ ಶ್ರದ್ಧೆ ಮತ್ತು ಭಕ್ತಿಗಳಿಂದ ಪವಿತ್ರರಾದರು. ಆದರೂ ಅಕ್ಷೋಭ್ಯತೀರ್ಥರ ಸಮಕ್ಷಮದಲ್ಲಿ ತಾವು ಮಾಡಿದ ಪಾಪವನ್ನು ಹೇಳಿಕೊಳ್ಳಲು ಬಯಸಿದರು. ಗುರುಗಳು ಹೇಳಿದ ಪ್ರಾಯಶ್ಚಿತ್ತವನ್ನು ಅನುಷ್ಠಾನ ಮಾಡಲು ಕೂಡಾ ಅವರು ಸಿದ್ಧರಾದರು. ತಾವು ಪಾಪಿಗಳು. ಗುರುಗಳ ಹತ್ತಿರ ಹೋಗುವುದು ಉಚಿತವಲ್ಲ ಎಂದು ಭಾವಿಸಿದರು. ದೂರದಿಂದಲೇ ಗುರುಗಳಿಗೆ ಸಾಷ್ಟಾಂಗ ಎರಗಿದರು. ಅವರೊಂದಿಗೆ ಮಾತನಾಡಿದರು.

**ಪತನವಾಗದಂತೆ ಉದ್ಧರಿಸಬೇಕು**

**ಆವಾಂ ಮಹಾಪಾತಕಿನೌ ಭವತ್ಕೃಪಾಕಟಾಕ್ಷವೀಕ್ಷಾರಸತಃ ಸುಪೂತೌ ।**
**ಭವಾವ ತೇನಾನುಗೃಹಾಣ ಪಾತಕಾತ್ ಅಕ್ಷೋಭ್ಯತೀರ್ಥಾರ್ಯವರೇತಿ ವಾಚಮ್ ॥**

ಆ ಇಬ್ಬರು ಬ್ರಾಹ್ಮಣರು ಅತ್ಯಂತ ಪ್ರಾಂಜಲವಾಗಿ ಅಕ್ಷೋಭ್ಯತೀರ್ಥರನ್ನು ಪ್ರಾರ್ಥಿಸಿದರು. ಅವರಲ್ಲಿ ಪಶ್ಚಾತ್ತಾಪದ ತಾಪ ತಾಂಡವವಾಡುತ್ತಿತ್ತು. ಇದೇನು ಘೋರಕೃತ್ಯ ನಮ್ಮಿಂದ ನಡೆದಿದೆ ಎಂದು ತಮ್ಮನ್ನು ತಾವೇ ಹಳಿದುಕೊಳ್ಳುತ್ತಿದ್ದರು. ಎಲ್ಲವನ್ನೂ ಕಳೆದುಕೊಂಡಂತೆ ಕಂಗಾಲಾಗಿದ್ದರು. ಗುರುಗಳು ಹೇಳಿದ ಯಾವ ಪ್ರಾಯಶ್ಚಿತ್ತಕ್ಕೂ ಸಿದ್ಧರಾಗಿದ್ದರು. ದೂರದಿಂದಲೇ ಅಕ್ಷೋಭ್ಯತೀರ್ಥರೊಂದಿಗೆ ಮಾತನಾಡಿದರು.

ಸ್ವಾಮಿನ್ ! ತಾವು ಶ್ರೇಷ್ಠಯತಿಗಳಾಗಿರುವಿರಿ. ನಾವಾದರೋ ಪಾಪಿಶ್ರೇಷ್ಠ-ರಾಗಿದ್ದೇವೆ. ತಮ್ಮ ಕೃಪಾಕಟಾಕ್ಷ ಘೋರಪಾಪಕೃತ್ಯಗಳನ್ನೂ ಭಸ್ಮಮಾಡಲು ಅತ್ಯಂತ ಸಮರ್ಥವಾಗಿದೆ. ಆ ಕೃಪಾಕಟಾಕ್ಷದ ವೀಕ್ಷಣದಿಂದ ನಾವು ಪವಿತ್ರರಾಗಿದ್ದೇವೆ. ಇದು ನಮ್ಮ ಅನುಭವ. ಆದರೂ ಇಷ್ಟು ಸಾಲದು. ತಾವು ನಮ್ಮನ್ನು ಅನುಗ್ರಹಿಸಬೇಕು. ಮಹಾಪಾತಕಿಗಳಾದ ನಮ್ಮನ್ನು ನಿಗ್ರಹಿಸಬೇಕು. ಪ್ರಾಯಶ್ಚಿತ್ತವನ್ನು ಹೇಳಿ ನಮ್ಮನ್ನು ಉದ್ಧರಿಸಬೇಕು. ನಾವು ಮಾಡಿದ ಈ ಮಹಾಪಾತಕದಿಂದ ನಾವು ಮುಕ್ತರಾಗಬೇಕು. ಮತ್ತೆ ಮೊದಲಿನಂತೆ ಧರ್ಮ ಮಾಡಲು ಅರ್ಹರಾಗಬೇಕು. ಇದುವೇ ತಾವು ಮಾಡುವ ಮಹದನುಗ್ರಹ ಎಂದು ಗುರುಗಳೊಂದಿಗೆ ಮಾತನಾಡಿದರು. ...ಸಶೇಷ...

## ಶ್ರೀಯುತ ಕೆ.ಆರ್. ಗಂಡಮಾಲಿ ಇವರ ಅಗಲಿಕೆ



ಹುಬ್ಬಳ್ಳಿ ನಿವಾಸಿಗಳಾಗಿದ್ದ, ಶತಾಯುಷಿಗಳಾದ, ಶ್ರೀಮಠದ ಅತ್ಯಂತ ಆತ್ಮೀಯ ಅಭಿಮಾನಿ ಶಿಷ್ಯರಾಗಿದ್ದ ಶ್ರೀಯುತ ಕೆ.ಆರ್.ಗಂಡಮಾಲಿ ಇವರ ಅಗಲಿಕೆಯು ಶ್ರೀಸುಧಾ ಬಳಗಕ್ಕೆ ತೀವ್ರ ವಿಷಾದಕರ ಸಂಗತಿ. ಪರಮಪೂಜ್ಯ ಶ್ರೀ ಶ್ರೀಸತ್ಯಪ್ರಮೋದತೀರ್ಥರ ಅತ್ಯಂತ ನೆಚ್ಚಿನ ಆತ್ಮೀಯ ಶಿಷ್ಯರಲ್ಲಿ ಒಬ್ಬರಾಗಿದ್ದ ಇವರು ಶ್ರೀಪಾದಂಗಳವರ ಅನೇಕ ಸಾಮಾಜಿಕ ಕಾರ್ಯಗಳಲ್ಲಿ ಮುಂದಾಳುಗಳಾಗಿ ಸೇವೆಯನ್ನು ಮಾಡುತ್ತಿದ್ದರು. ಕಳೆದ ೩೦ಕ್ಕೂ ಹೆಚ್ಚು ವರ್ಷಗಳಿಂದ ಜಯಸತ್ಯಪ್ರಮೋದನಿಧಿಯ ಧರ್ಮದರ್ಶಿಗಳಾಗಿದ್ದವರು. ಪರಮಪೂಜ್ಯ ಶ್ರೀಶ್ರೀಪಾದಂಗಳವರು ಇವರ ನಿಧನವಾರ್ತೆಗೆ ವಿಷಾದದಿಂದ ಪ್ರತಿಕ್ರಯಿಸುತ್ತ "ಶ್ರೀಯುತ ಗಂಡಮಾಲಿಯವರು ನಮಗೂ ನಮ್ಮ ಗುರುಗಳಿಗೂ ಅತ್ಯಂತ ಆತ್ಮೀಯರಾಗಿದ್ದರು. ಇಳಿವಯಸ್ಸಿನಲ್ಲಿಯೂ ಶ್ರೀಮಠದ ಬಗ್ಗೆ ಅವರಿಗಿದ್ದ ದೀಕ್ಷೆ, ಶ್ರೀಮಠದ ಕಾರ್ಯಗಳಲ್ಲಿ ಉತ್ಸಾಹ ಇವು ಅತ್ಯಂತ ಅನುಕರಣೀಯ ಹಾಗೂ ಪ್ರಶಂಸನೀಯ" ಎಂದು ತಿಳಿಸುತ್ತ ಭಗವಂತ ಅವರಿಗೆ ಸದ್ಗತಿಯನ್ನು ನೀಡಲಿ ಎಂದು ತಮ್ಮ ಉಪಾಸ್ಯಮೂರ್ತಿಗಳಲ್ಲಿ ಪ್ರಾರ್ಥಿಸಿದರು.

- ದಿವಾನರು ಶ್ರೀಉತ್ತರಾದಿಮಠ

**ದಧಿವ್ರತ-**

**ಸುಪ್ತೇ ದೇವೇ ದ್ವಿತೀಯೇ ತು ಮಾಸ್ಯೇನಾಂಸಿ ಸಮಸ್ತಶಃ ।**
**ದಧ್ಯಾಶ್ರಿತಾನಿ ತಿಷ್ಠಂತಿ ತದ್ಭುಕ್ತ್ವಾ ಪಾಪಭುಗ್ ಭವೇತ್ ।**
**ದ್ವಿತೀಯೇ ಭಕ್ಷಿತೇ ದಧ್ನಿ ಗೋಮಾಂಸಂ ತೇನ ಭಕ್ಷಿತಮ್ ॥**

ಚಾತುರ್ಮಾಸ್ಯ ಕಾಲದ ಎರಡನೆಯ ಮಾಸವೇ ಶ್ರಾವಣಮಾಸ. ಈ ಮಾಸದಲ್ಲಿ ಅಂದರೆ ಶ್ರಾವಣಶುಕ್ಲದ್ವಾದಶಿಯಿಂದ ಭಾದ್ರಪದ ಶುಕ್ಲದಶಮಿಯವರೆಗೆ ದಧಿ ವ್ರತವನ್ನು ಆಚರಿಸಬೇಕು. ಆ ಕಾಲದಲ್ಲಿ ದಧಿ (ಮೊಸರು) ಭಕ್ಷಣವನ್ನು ನಿಷೇಧಿಸಲಾಗಿದೆ. ಮಾಸಪೂರ್ತಿಯಾಗಿ ತಾನು ದಧಿಯನ್ನು ತ್ಯಜಿಸುವದಲ್ಲದೇ ಇನ್ನೊಬ್ಬರಿಗೂ ದಾನವಾಗಿ ದಧಿಯನ್ನು ಕೊಡಬಾರದು. ಕಾರಣ ಈ ಮಾಸದಲ್ಲಿ ಸಕಲಪಾಪಗಳು ಮೊಸರನ್ನು ಆಶ್ರಯಿಸಿ ಇರುತ್ತವೆ. ಯಾರು ಈ ಮಾಸದಲ್ಲಿ ದಧಿ ಭಕ್ಷಣ ಮಾಡುತ್ತಾರೋ ಅವರು ಗೋಮಾಂಸವನ್ನೇ ಭಕ್ಷಣ ಮಾಡಿದಂತೆ.

ಅಲ್ಲದೇ ಮೊಸರು ಇದು ಉಷ್ಣಗುಣವುಳ್ಳದ್ದು. ದೇಹದಲ್ಲಿ ಕೊಬ್ಬನ್ನು ವೃದ್ಧಿಗೊಳಿಸುವಂತಹದ್ದು. ಇಂತಹ ಉಷ್ಣಗುಣವುಳ್ಳ ಮೊಸರನ್ನು ಶ್ರಾವಣಮಾಸದಲ್ಲಿ ಬಳಸಿದರೆ ಮತ್ತಷ್ಟು ಉಷ್ಣವಾಗಿ ಆರೋಗ್ಯ ಕೆಡಬಹುದು. ಆ ಕಾರಣದಿಂದಾಗಿಯೂ ದಧಿವ್ರತವನ್ನು ಆಚರಿಸುವದು ಸೂಕ್ತ.

ಮೊಸರುಭಕ್ಷಣವನ್ನು ಸರ್ವಕಾಲದಲ್ಲಿ ನಿಷೇಧಿಸಲಾಗಿದೆ. ಇತರ ದಿನಗಳಲ್ಲಿಯೂ ಮೊಸರನ್ನು ತಿನ್ನಬೇಕು ಎಂಬುದಾಗಿ ಶಾಸ್ತ್ರ ಎಲ್ಲಿಯೂ ಹೇಳಿಲ್ಲ. ''ರಾತ್ರೌ ದಧ್ಯನ್ನ-ಭೋಜನಾತ್'' ಎಂಬ ವಚನಕ್ಕೆ ಅನುಗುಣವಾಗಿ ರಾತ್ರಿಕಾಲದಲ್ಲಿ ಮೊಸರನ್ನವನ್ನು ಉಂಡರೆ ಆಯುಷ್ಯಹಾನಿ ಆಗುತ್ತದೆ ಎನ್ನಲಾಗಿದೆ. ಅನ್ನುವದಕ್ಕಾಗಿಯೇ ಶ್ರೀಕೃಷ್ಣ ಅಕ್ರೂರನ ಮನೆಗೆ ಹೋದಾಗ ರಾತ್ರಿ ಭೋಜನದಲ್ಲಿ ಹಾಲನ್ನು ಮಾತ್ರ ಬಳಿಸಿದ ಎನ್ನುವ ಐತಿಹ್ಯವನ್ನು ಭಾಗವತ ತಿಳಿಸುತ್ತದೆ. ಅದಕ್ಕಾಗಿಯೇ ನಮ್ಮ ಹಿರಿಯರು ಮೊಸರನ್ನು ಹೀಗೆ ಬಳಿಸುತ್ತಿದ್ದರು. ಮೊಸರನ್ನು ಚೆನ್ನಾಗಿ ಕಡೆದು, ನೀರು ಹಾಕಿ, ಶುಂಠಿ ಕರಿಬೇವು ಉಪ್ಪು ಸೇರಿಸಿ, ಉಪಯೋಗಿಸುತ್ತಿದ್ದರು. ಇದು ಬಹಳ ತಂಪು, ಜೀರ್ಣಕಾರೀ, ಆರೋಗ್ಯಕರವೂ ಆಗಿದೆ. ಒಬ್ಬ ಸುಭಾಷಿತಕಾರ ಹೇಳುವಂತೆ ''ತಕ್ರಂ ಶಕ್ರಸ್ಯ ದುರ್ಲಭಮ್'' ಎನ್ನುವ ಮಾತು ಮಜ್ಜಿಗೆಯ ಮಹತ್ತ್ವವನ್ನು ಎತ್ತಿ ತೋರಿಸುತ್ತದೆ.

ಶಾಸ್ತ್ರದೃಷ್ಟಿಯಿಂದ ತಿಳಿಯುವದಾದರೆ ಭಗವಂತನ ಪ್ರೀತಿಗಾಗಿ ಒಂದು ತಿಂಗಳು ಮೊಸರನ್ನು ತ್ಯಜಿಸಿ, ಭಾದ್ರಪದ ಶುಕ್ಲ ದ್ವಾದಶಿಯಂದು ಶ್ರೋತ್ರಿಯ ಬ್ರಾಹ್ಮಣನಿಗೆ

ಮೊಸರನ್ನು ದಾನ ಮಾಡಿ, ತಾನು ಆಚರಿಸಿದ ದಧಿವ್ರತವನ್ನು ಭಗವಂತನಿಗೆ ಅರ್ಪಿಸಬೇಕು.

**ಕ್ಷೀರವ್ರತ-** ಭಾದ್ರಪದ ಶುಕ್ಲ ದ್ವಾದಶಿಯಿಂದ ಆಶ್ವಯುಜ ಶುಕ್ಲ ದಶಮಿಯವರೆಗೆ ಒಂದು ತಿಂಗಳು ಕ್ಷೀರವ್ರತವನ್ನು ಆಚರಿಸಬೇಕು. ಈ ಕಾಲದಲ್ಲಿ ಹಾಲನ್ನು ಬಳಸಬಾರದು. ಹಾಲಿನಿಂದ ಮಾಡಿದ ಖಾದ್ಯಗಳನ್ನು ತಿನ್ನಬಾರದು ಎನ್ನುವದು ಒಂದು ಶಿಷ್ಟಾಚಾರ ಇದೆ. ಗೋವಿನ ಹಾಲು ಶ್ರೇಷ್ಠ ಹಾಗೂ ಪುಷ್ಟಿಕರ ಎಂದಾದರೂ ಕೆಲವು ಕಾಲದಲ್ಲಿ ಹಾಲೂ ದೋಷಪೂರಿತವಾಗಿರುತ್ತದೆ. ಆ ಕಾಲದಲ್ಲಿ ಹಾಲನ್ನು ಸ್ವೀಕರಿಸಿದರೆ ಆರೋಗ್ಯವು ಕ್ಷೀಣಿಸುತ್ತ ಹೋಗುತ್ತದೆ.

ಹಸುವಿನ ಹಾಲು ಕೆಲವು ಕಾಲದಲ್ಲಿ ದೋಷಪೂರಿತವಾಗಿರುತ್ತದೆ ಎನ್ನುವದಕ್ಕೆ ನಾವು ಉದಾಹರಣೆಯಾಗಿ ತಿಳಿಯುವದಾದರೆ - ಕರು ಹಾಕಿದ ಹತ್ತು ದಿವಸಗಳವರೆಗೂ ಹಸುವಿನ ಹಾಲು ಕರುವಿಗೆ ಮಾತ್ರ ದಿವ್ಯೌಷಧಿ. ಆ ದಿನಗಳಲ್ಲಿ ನಾವು ಹಸುವಿನ ಹಾಲು ಸ್ವೀಕರಿಸಿದರೆ ಅದೇ ನಮಗೆ ರೋಗಜನಕವಾಗುತ್ತದೆ. ಆದ್ದರಿಂದ ಕರು ಹಾಕಿದ ಹಸುವಿನ ಹಾಲನ್ನು ಹತ್ತುದಿನ ಸ್ವೀಕರಿಸಬಾರದು. ಹಾಗೆಯೇ ಪ್ರತಿನಿತ್ಯ ನಾವು ಹಸುವಿನ ಹಾಲನ್ನು ಬಳಿಸುತ್ತೇವೆ. ಅಲ್ಲಿಯೂ ಕೂಡ ಒಂದು ನಿಯಮ ಇದೆ. ಹಸುವಿನ ಮಧ್ಯದ ಹಾಲನ್ನು ಮಾತ್ರ ಮನುಷ್ಯರು ಸ್ವೀಕರಿಸಬೇಕು. ಹಾಲು ಕರೆಯುವಾಗ ಮೊದಲು ಹಾಗೂ ಕೊನೆಗೆ ಬಂದ ಹಾಲು ಅದು ಕರುವು ಕುಡಿಯುವದಕ್ಕೆ ಯೋಗ್ಯವಾಗಿರುತ್ತದೆ. ಆದ್ದರಿಂದಲೇ ಹಾಲು ಕರೆಯುವವರು ಮೊದಲಿಗೆ ಕರುವಿಗೆ ಹಾಲು ಕುಡಿಯಲು ಬಿಟ್ಟು ನಂತರ ಮನುಷ್ಯರಿಗಾಗಿ ಸ್ವಲ್ಪ ಕರೆದು ಕೊನೆಗೆ ಮತ್ತೆ ಕರುವಿಗೆ ಹಾಲು ಕುಡಿಯಲು ಬಿಡುತ್ತಾರೆ. ಇದೇ ಕಾರಣಕ್ಕಾಗಿ ಕರುವು ಸತ್ತು ಹೋಗಿರುವ ಹಸುವಿನ ಹಾಲನ್ನು ಉಪಯೋಗಿಸಬಾರದು ಎನ್ನಲಾಗುತ್ತದೆ. ಇದರಂತೆ ಕ್ಷೀರವ್ರತಕಾಲದಲ್ಲಿಯೂ ಹಾಲಿನಲ್ಲಿ ದೋಷವಿರುವದರಿಂದ ಆ ಕಾಲದಲ್ಲಿ ಹಸುವಿನ ಹಾಲನ್ನು ಸ್ವೀಕರಿಸಬಾರದು. ಕ್ಷೀರವ್ರತದಲ್ಲಿ ಹಸುವಿನ ಹಾಲನ್ನು ಮಾತ್ರ ನಿಷೇಧಿಸದೇ ಆಡು ಕುರಿ ಎಮ್ಮೆ ಈ ಮೊದಲಾದ ಪ್ರಾಣಿಗಳ ಹಾಲನ್ನೂ ನಿಷೇಧಿಸಲಾಗಿದೆ. ಈ ಮಾಸದಲ್ಲಿ ಹಾಲನ್ನು ಸೇವಿಸುವವರು ಸುರೆಯನ್ನು ಪಾನ ಮಾಡಿದ ಪಾಪಕ್ಕೆ ಗುರಿಯಾಗುತ್ತಾರೆ.

ಮಹಿಷಾದಿ(ಎಮ್ಮೆ ಮೊದಲಾದ ಪ್ರಾಣಿಗಳ) ಕ್ಷೀರಗಳು ಸರ್ವದಾ ನಿಷಿದ್ಧವಾದ್ದರಿಂದ ಚಾತುರ್ಮಾಸ್ಯದಲ್ಲಿ ವಿಶೇಷವಾಗಿ ನಿಷೇಧಿಸಲಾಗಿದೆ. ಪಾಯಸಾದಿಗಳಿಗೆ ಕ್ಷೀರವನ್ನು ಬಳಸುವವರು ತೆಂಗಿನಕಾಯಿಯ ಹಾಲನ್ನು ಉಪಯೋಗಿಸಬಹುದಾಗಿದೆ.

ಆಶ್ವಯುಜ ಶುಕ್ಲ ದ್ವಾದಶಿಯಂದು ಕ್ಷೀರವ್ರತವನ್ನು ಭಗವಂತನಿಗೆ ಸಮರ್ಪಿಸಿ ಶ್ರೋತ್ರಿಯ ಬ್ರಾಹ್ಮಣನಿಗೆ ಕ್ಷೀರವನ್ನು ದಾನ ಮಾಡಿ ವ್ರತವನ್ನು ಮುಕ್ತಾಯಗೊಳಿಸಬೇಕು.

...ಸಶೇಷ...

# ಪುರಾಣಗಳು ತಿಳಿಸಿದಂತೆ ತೀರ್ಥ - ಕ್ಷೇತ್ರಗಳ ಮಹಿಮೆ

ವ್ಯಾಸಸುಧಾ

✍ ಪಂ. ಪುರಂದರಾಚಾರ್ಯ ಹಯಗ್ರೀವ

ಜಗದ್ಗುರು ಶ್ರೀಮಧ್ವಾಚಾರ್ಯರು ತಮ್ಮ ಶ್ರೀಮಹಾಭಾರತತಾತ್ಪರ್ಯನಿರ್ಣಯ ಎಂಬ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ -

**ದಾನತೀರ್ಥತಪೋಯಜ್ಞಪೂರ್ವಾಃ ಸರ್ವೇಽಪಿ ಸರ್ವದಾ ।**
**ಅಂಗಾನಿ ಹರಿಸೇವಾಯಾಂ ಭಕ್ತಿಸ್ತ್ವೇಕಾ ವಿಮುಕ್ತಯೇ ॥**

ಅಂದರೆ ನಾವು ಮಾಡುವ ದಾನಗಳು, ತೀರ್ಥಯಾತ್ರೆಗಳು, ತಪಸ್ಸು ಮತ್ತು ಯಜ್ಞ ಮೊದಲಾದವುಗಳು ಶ್ರೀಹರಿಸೇವೆಯ ಅಂಗಗಳಾಗಿವೆ. ಭಕ್ತಿಯೇ ಮುಕ್ತಿಗೆ ಪ್ರಧಾನ ಕಾರಣವಾಗಿದೆ. ತೀರ್ಥಯಾತ್ರೆಗಳು ಮೋಕ್ಷಕ್ಕೆ ಪರಂಪರೆಯಾಗಿ ಕಾರಣವಾಗಿವೆ ಎಂದು ಈ ಮಾತಿನಿಂದ ನಮಗೆ ತಿಳಿದುಬರುತ್ತದೆ. ಶಾಸ್ತ್ರದಲ್ಲಿ ತಿಳಿಸಿದಂತೆ ವೈಷ್ಣವ ತೀರ್ಥಕ್ಷೇತ್ರಗಳ ಸ್ಮರಣ, ಚಿಂತನೆ, ಸ್ನಾನಪಾನಾದಿ ರೂಪ ಸೇವೆಯನ್ನು ಮಾಡಬೇಕು. ತೀರ್ಥಕ್ಷೇತ್ರಗಳ ಸಂದರ್ಶನ ಮನೋರಂಜನೆಗಾಗಿ ಮಾಡುವ ಆಧುನಿಕ ಪರಿಭಾಷೆಯ ಪಿಕ್ನಿಕ್ ಆಗಬಾರದು. ನಿಷಿದ್ಧವಾದ ಸ್ಥಳಗಳು ಎಷ್ಟೇ ಸುಂದರವಾಗಿದ್ದರೂ ಅವುಗಳ ಸಂದರ್ಶನ ತೀರ್ಥಯಾತ್ರೆ ಎಂದು ಕರೆಸಿಕೊಳ್ಳುವುದಿಲ್ಲ. ಪೌರಾಣಿಕ ಹಿನ್ನೆಲೆಯಿರುವ ಸ್ಥಳಗಳಿಗೇ ತೀರ್ಥಯಾತ್ರೆ ನಿಮಿತ್ತವಾಗಿ ಹೋಗಬೇಕು.

**ಅನ್ಯಕ್ಷೇತ್ರಕೃತಂ ಪಾಪಂ ಪುಣ್ಯಕ್ಷೇತ್ರೇ ವಿನಶ್ಯತಿ ।**
**ಪುಣ್ಯಕ್ಷೇತ್ರಕೃತಂ ಪಾಪಂ ವಜ್ರಲೇಪೋ ಭವಿಷ್ಯತಿ ॥**

ಇತರ ಸ್ಥಳಗಳಲ್ಲಿ ಮಾಡಿದ ಪಾಪಗಳು ಪುಣ್ಯಕ್ಷೇತ್ರಗಳಲ್ಲಿ ನಾಶಹೊಂದುತ್ತವೆ. ಆದರೆ ಪುಣ್ಯಕ್ಷೇತ್ರಗಳಲ್ಲಿ ಮಾಡಿದ ಪಾಪಗಳು ವಜ್ರಲೇಪವಾಗುತ್ತವೆ. ಅಂದರೆ ಆ ಪಾಪಗಳ ಫಲವನ್ನು ಅನುಭವಿಸಲೇಬೇಕಾಗುತದೆ. ಆದ್ದರಿಂದ ತೀರ್ಥಯಾತ್ರೆಗೆ ಹೋದಾಗ ಬಹಳ ಎಚ್ಚರಿಕೆಯಿಂದ ಇರಬೇಕು. ನದಿಗಳನ್ನು ಮತ್ತು ಕ್ಷೇತ್ರಗಳನ್ನು ನಮ್ಮ ಕೆಟ್ಟ ವರ್ತನೆಗಳಿಂದ ಕೆಡಿಸಬಾರದು. ಇದರಂತೆ ಉತ್ತಮ ಶಾಸ್ತ್ರಗ್ರಂಥಗಳನ್ನು ಗುರುಗಳ ಮುಖದಿಂದ ಶ್ರವಣ ಮಾಡುವುದು, ಶ್ರವಣ ಮಾಡಿದ್ದನ್ನು ಯಥೋಚಿತವಾಗಿ ಚಿಂತನ ಮಾಡುವುದೂ ಕೂಡ ತೀರ್ಥಯಾತ್ರೆ ಎಂದು ಕರೆಸಿಕೊಳ್ಳುತ್ತದೆ. ಕ್ಷೇತ್ರಸಂದರ್ಶನರೂಪವಾದ ತೀರ್ಥಯಾತ್ರೆಯನ್ನು ಮಾಡಿದಾಗ ಮಧ್ವಶಾಸ್ತ್ರಾಧ್ಯಯನರೂಪವಾದ ಮುಖ್ಯತೀರ್ಥಯಾತ್ರೆಯನ್ನು ಮಾಡಲು ಬೇಕಾದ ಅಂತಃಕರಣಶುದ್ಧಿಯು ಲಭಿಸುತ್ತದೆ. ಆ ದೃಷ್ಟಿಯಲ್ಲಿ ಕ್ಷೇತ್ರಸಂದರ್ಶನರೂಪವಾದ ತೀರ್ಥಯಾತ್ರೆ ಸಾರ್ಥಕವಾದುದು ಮತ್ತು ಅವಶ್ಯಕವಾದುದು.

**ಬ್ರಹ್ಮಜ್ಞಾನೇನ ವಾ ಮುಕ್ತಿಃ ಪ್ರಯಾಗಮರಣೇನ ವಾ ।**
**ಅಥವಾ ಸ್ನಾನಮಾತ್ರೇಣ ಗೋಮತ್ಯಾಂ ಕೃಷ್ಣಸನ್ನಿಧೌ ॥**

{ಬ್ರಹ್ಮಜ್ಞಾನ, ಪ್ರಯಾಗದಲ್ಲಿ ಮರಣ ಹೊಂದುವುದು, ಅಥವಾ ಶ್ರೀಕೃಷ್ಣನ ಸನ್ನಿಧಿಯಿರುವ ಗೋಮತೀ ನದಿಯಲ್ಲಿ ಮಾಡುವ ಸ್ನಾನ- ಇವುಗಳು ಮೋಕ್ಷಕ್ಕೆ ಸಾಧನ ಗಳಾಗಿವೆ} ಈ ಮೊದಲಾದ ಮಾತುಗಳು ಸಾಮಾನ್ಯ ತೀರ್ಥಯಾತ್ರೆಯೇ ಮುಕ್ತಿಗೆ ಸಾಧನ

ವಾಗಿದೆ ಎಂದು ಅರ್ಥಬರುವಂತೆ ಹೇಳುವುದುಂಟು. ಶ್ರೀಮದಾಚಾರ್ಯರು ಇಂತಹ ಮಾತುಗಳಿಗೆ ಹೇಗೆ ಅರ್ಥಮಾಡಿಕೊಳ್ಳಬೇಕೆಂದು ತಮ್ಮ ಗೀತಾಭಾಷ್ಯಾದಿ ಗ್ರಂಥಗಳಲ್ಲಿ ತಿಳಿಸಿದ್ದಾರೆ. ಅದು ಹೀಗಿದೆ - ಬ್ರಹ್ಮಜ್ಞಾನದಿಂದಲೇ ಮುಕ್ತಿ ಇದರಲ್ಲಿ ಸಂಶಯವಿಲ್ಲ. ಆದರೆ ಪ್ರಯಾಗಮರಣ, ಗೋಮತೀಸ್ನಾನ ಮೊದಲಾದವುಗಳು ಕೆಲವು ಪಾಪಗಳಿಂದ ಮಾತ್ರ ಮುಕ್ತಿಯನ್ನು ಕೊಡುತ್ತವೆ. ಮತ್ತು ಅವುಗಳಿಂದ ಅಂತಃಕರಣಶುದ್ಧಿಯಾಗಿ ಕ್ರಮವಾಗಿ ಅಪರೋಕ್ಷಜ್ಞಾನವಾಗಿ, ನಂತರ ಮೋಕ್ಷವು ದೊರೆಯುವುದು ಎಂದು ಅರ್ಥ.

**{ ತೀರ್ಥಯಾತ್ರೆಗಾಗಿ ಮಾಡಿಕೊಳ್ಳಬೇಕಾದ ಪೂರ್ವಸಿದ್ಧತೆ }**

ತೀರ್ಥಯಾತ್ರೆಗೆ ಹೊರಡುವವರು ಮೊದಲು ಆಯಾ ತೀರ್ಥ-ಕ್ಷೇತ್ರಗಳ ಮಹತ್ವವನ್ನು ಪೌರಾಣಿಕಹಿನ್ನೆಲೆಯಲ್ಲಿ ತಿಳಿದುಕೊಂಡಿರಬೇಕು. ಈ ದೃಷ್ಟಿಯಲ್ಲಿ, ಯಾತ್ರಾಕಾಲದಲ್ಲಿ ತೀರ್ಥ-ಕ್ಷೇತ್ರಗಳ ಮಹಿಮೆಗಳನ್ನು ತಿಳಿಸಿಕೊಡುವ ಶ್ರೀವಾದಿರಾಜಸ್ವಾಮಿಗಳವರ ತೀರ್ಥಪ್ರಬಂಧ ಮತ್ತು ಶ್ರೀವಿಜಯದಾಸರ ತೀರ್ಥಕ್ಷೇತ್ರ ಸುಳಾದಿಗಳು ನಮ್ಮ (ಯಾತ್ರಿಕರ) ಜೊತೆಗೆ ಇರುವುದು ಬಹಳ ಒಳ್ಳೆಯದು. ಮಧ್ಯ-ಮಧ್ಯದಲ್ಲಿ ಪುರಾಣ-ಪುಣ್ಯಕಥೆಗಳನ್ನು ಶ್ರವಣ ಮಾಡುತ್ತಾ ಇರಬೇಕು. ಅದಕ್ಕಾಗಿ ಸತ್ಪಾತ್ರರನ್ನು ಜೊತೆಗೆ ಕರೆದುಕೊಂಡು ಯಾತ್ರೆ ಮಾಡಬೇಕು. ಪಾತ್ರರ ಸಂಗಡ ಯಾತ್ರೆ ಮಾಡಿ ಎಂದು ಶ್ರೀಜಗನ್ನಾಥದಾಸರು ಆದೇಶಿಸಿದ್ದಾರಲ್ಲವೇ ? ನದಿ(ಅಭಿಮಾನಿ)ಗಳ ತಾರತಮ್ಯವನ್ನು ತಿಳಿದಿರಬೇಕು. ಆಯಾ ಕ್ಷೇತ್ರಗಳಲ್ಲಿ ಪಠಿಸಬೇಕಾದ ಸಂಕಲ್ಪಗಳು, ಸ್ನಾನ ಮತ್ತು ಅರ್ಘ್ಯಗಳಿಗೆ ವಿಹಿತವಾದ ಮಂತ್ರ-ಸ್ತೋತ್ರಗಳನ್ನು ತಿಳಿದಿರಬೇಕು. ಸಂಧ್ಯಾವಂದನೆ, ಸಾಲಗ್ರಾಮಪೂಜೆ, ಜಪಗಳು ಈ ಮೊದಲಾದ ನಿತ್ಯಕರ್ಮಗಳನ್ನು ಆಚರಿಸುತ್ತಾ {ಸಾಧ್ಯವಾದಲ್ಲಿ ಇನ್ನೂ ಹೆಚ್ಚಾಗಿ ಆಚರಿಸುತ್ತಾ} ಯಾತ್ರೆ ಮಾಡಬೇಕು. ಆಯಾ ಕ್ಷೇತ್ರಗಳಲ್ಲಿ ಆಚರಣೆಗೆ ಯೋಗ್ಯವಾದ ವಿಶೇಷತೆಗಳನ್ನು ಸ್ಥಳೀಯ ವಿದ್ವಾಂಸರಿಂದ ತಿಳಿದು {ಉದಾಹರಣೆಗೆ ಪ್ರಯಾಗದಲ್ಲಿ ಮಾಡುವ ವೇಣೀದಾನ} ಅವುಗಳಂತೆ ನಡೆಯಬೇಕು. ಅಧಿಕಾರವಿದ್ದವರು ಮುಂಡನಾದಿಗಳನ್ನು ಮಾಡಿಸಿಕೊಂಡು ತಮ್ಮ ಪಿತೃಗಳನ್ನು ಉದ್ದೇಶಿಸಿ ತೀರ್ಥವಿಧಿಗಳನ್ನಾಚರಿಸಬೇಕು. ಏಕಾದಶೀವ್ರತ, ಚಾತುರ್ಮಾಸ್ಯವ್ರತಗಳನ್ನೂ ಅನುಷ್ಠಾನ ಮಾಡುತ್ತಾ ಇರಬೇಕು. ಸಂಧ್ಯಾವಂದನೆ, ಸಾಲಗ್ರಾಮಪೂಜೆ, ಏಕಾದಶೀವ್ರತ, ಚಾತುರ್ಮಾಸ್ಯವ್ರತಗಳ ಅನುಷ್ಠಾನ ಮಾಡದೇ, ಮಾಡುವ ತೀರ್ಥಯಾತ್ರೆ ಫಲದಾಯಕವಾಗಲಾರವು. ಯಾತ್ರಾಕಾಲದಲ್ಲಿ ಬ್ರಹ್ಮಚರ್ಯವನ್ನು ಪಾಲಿಸಬೇಕು. ಅಶುದ್ಧವಾದ ಆಹಾರವನ್ನು ಸೇವಿಸಬಾರದು. ಪಾದಚಾರಿಯಾಗಿಯೇ ಯಾತ್ರೆ ಮಾಡಬೇಕು. ಅಂದಾಗಲೇ ಪೂರ್ಣಪ್ರಮಾಣದ ಪುಣ್ಯ ಬರುತ್ತದೆ. ಪಾದರಕ್ಷಾಸಹಿತವಾಗಿ ಪಾದಚಾರಿಯಾಗಿ ಯಾತ್ರೆ ಮಾಡಿದರೆ ಕಾಲುಭಾಗದಷ್ಟು ಪುಣ್ಯ ಕಡಿಮೆಯಾಗುತ್ತದೆ. ಇತರ ವಾಹನಗಳನ್ನೇರಿ ಯಾತ್ರೆ ಮಾಡಿದರೆ ಅರ್ಧಪುಣ್ಯ ಮಾತ್ರ ಬರುತ್ತದೆ. ಯಾತ್ರಾಕಾಲದಲ್ಲಿ ಮತ್ತೊಬ್ಬರ ಅನ್ನವನ್ನು ಉಣ್ಣುತ್ತಾ ಇದ್ದರೆ ಮುಕ್ಕಾಲು ಭಾಗದಷ್ಟು ಪುಣ್ಯ ಕಡಿಮೆಯಾಗುತ್ತದೆ. ಸ್ವಂತ ಹಣದಲ್ಲಿ ಯಾತ್ರೆ ಮಾಡಬೇಕು. ಇತರರ ಹಣದಲ್ಲಿ ಯಾತ್ರೆ ಮಾಡಿದರೆ ಆ ಯಾತ್ರೆಯ ಪುಣ್ಯ ಅವರಿಗೆ ಹೋಗುತ್ತದೆ. ಯಾವುದೇ ಯಾತ್ರೆಯನ್ನು ಸಂಕಲ್ಪಪೂರ್ವಕವಾಗಿ ಆರಂಭಿಸಬೇಕು. {ಉದಾ - ಕಾಶೀಯಾತ್ರೆ, ತ್ರಿಸ್ಥಳೀಯಾತ್ರೆ, ರಾಮೇಶ್ವರಯಾತ್ರೆ}. ತೀರ್ಥಯಾತ್ರಾಸಂದರ್ಭದಲ್ಲಿ ಅನ್ನದಾನ, ವಸ್ತ್ರದಾನ ಇತ್ಯಾದಿದಾನಗಳನ್ನು ಮಾಡಬೇಕು.

...ಸಶೇಷ...

# ಶ್ರೀ ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರ ಕಾರುಣ್ಯಸ್ಮರಣೆ

✍ ಡಾ. ಎ.ಬಿ. ಶ್ಯಾಮಾಚಾರ್ಯ.

ಅನಾದಿಕಾಲದಿಂದ ಜಗತ್ತಿನಲ್ಲಿ ಯಾವುದೇ ಪ್ರಾಕೃತಿಕ ವಿಕೋಪಗಳ ಪ್ರಸಂಗ ಒದಗಿದಾಗ ಆಯಾ ಕಾಲದಲ್ಲಿ ಲೋಕಹಿತಕ್ಕಾಗಿ, ಸಜ್ಜನರ ಏಳಿಗೆಗಾಗಿ ಅನೇಕ ರೀತಿಯಲ್ಲಿ ಸಹಕರಿಸುತ್ತ ಬಂದ ಮಹಾತ್ಮರನ್ನು ಇತಿಹಾದದುದ್ದಕ್ಕೂ ಕಾಣುತ್ತೇವೆ. ಯಾವುದೇ ವ್ಯತ್ಯಾಸಗಳು ದೈವಸಂಕಲ್ಪ. ಅಂತಹ ಪ್ರಸಂಗಗಳಲ್ಲಿ ಭಗವಂತನಲ್ಲಿ ಪ್ರಾರ್ಥನೆ, ತಪ-ಜಪಾದಿಗಳು, ಯಾಗ-ಯಜ್ಞಾದಿಗಳು, ಪರೋಪಕಾರ ಹೀಗೆ ಆಚರಣೆ ಎಲ್ಲರ ಕರ್ತವ್ಯವೂ ಆಗಿರುತ್ತದೆ. ಪ್ರಸಕ್ತದಲ್ಲಿ ಭಾರತಕ್ಕೆ ಅಲ್ಲದೇ ಜಗತ್ತಿಗೇ ಆವರಿಸಿದ ಕರೋನಾ ಎಂಬ ಹೆಮ್ಮಾರಿ ಒಂದು ಆಸುರೀಶಕ್ತಿ. ಇದರಿಂದಾಗಿ ಜಗತ್ತೇ ತತ್ತರಿಸಿದೆ. ಲಕ್ಷಾಂತರ ಜನರ ಮಾರಣಹೋಮವಾಗಿದೆ.ಇದನ್ನರಿತ ನಮ್ಮ ಪರಮಪೂಜ್ಯ ಶ್ರೀಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರು ಬಹುವಿಧವಾಗಿ ಸ್ಪಂದಿಸಿ ಭಗವಂತನಲ್ಲಿ ಅರ್ಚಿಸುವುದರ ಜೊತೆಗೆ ಸಜ್ಜನ ಭಕ್ತರಿಂದಲೂ ಸತ್ಕಾರ್ಯಗಳನ್ನು ಮಾಡಿಸಿ ಜಗತ್ತಿನ ಕಲ್ಯಾಣಕ್ಕೆ ಕಾರಣರಾದರು. ಇದು ನಿಜಕ್ಕೂ ಅವರು ತೋರಿದ ಅಪಾರ ಕಾರುಣ್ಯ. ಸಜ್ಜನರ ಪರಮಭಾಗ್ಯ.

ಶ್ರೀ ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರು ಸಮಯೋಚಿತವಾಗಿ ಕೈಗೊಂಡ ಕಾರ್ಯಗಳು ಅವರು ತೋರಿದ ಕಾರುಣ್ಯದ ವೈಶಾಲ್ಯದ ದ್ಯೋತಕವಾಗಿದೆ. ಇಲ್ಲಿ ಒಂದೆರಡನ್ನು ನೋಡುವ ಪ್ರಯತ್ನ ಮಾತ್ರವಿದೆ. ಶ್ರೀಪಾದರು ತಾವು ವೈಯಕ್ತಿಕವಾಗಿ ಮಾಡಿದ ಹಾಗೂ ಸಜ್ಜನರಿಂದ ಮಾಡಿಸಿದ ವಿಶೇಷವಾಗಿ ವಿಶ್ವಮಧ್ವಪರಿಷತ್‌ನಿಂದ ಮಾಡಿದ ಕಾರ್ಯಗಳೂ ಬಹುಮುಖವಾಗಿವೆ. ಶ್ರೀಪಾದಂಗಳವರು ಸೊನ್ನಿ ಕ್ಷೇತ್ರದಲ್ಲಿ ಉಪಸ್ಥಿತರಿದ್ದು, ನಿತ್ಯದಲ್ಲಿಯೂ ಶ್ರೀಮೂಲರಾಮ, ದಿಗ್ವಿಜಯರಾಮ, ವೇದವ್ಯಾಸರ ಪೂಜೆ, ಜಪ, ಪಾರಾಯಣ, ಶಿಷ್ಯರಿಗೆ ಸುಧಾದಿ ಪಾಠಗಳು ಹೀಗೆ ಮಾಡುತ್ತಾ ದೇವರಲ್ಲಿ ಜಗತ್ತಿನ ಕಲ್ಯಾಣಕ್ಕಾಗಿ ಪ್ರಾರ್ಥಿಸುತ್ತಿದ್ದು ಕೆಲ ಮೂಲಗಳಿಂದ ವ್ಯಕ್ತವಾಗಿದೆ. 10.5.2020 ರಂದು ಶ್ರೀಪಾದರು ಕರೋನಾ ಪರಿಹಾರದ ಹಿನ್ನೆಲೆಯಲ್ಲಿ, ಜಗತ್ತಿನ ಕ್ಷೇಮಕ್ಕಾಗಿ ಶ್ರೀನರಸಿಂಹದೇವರ ಪ್ರೀತಿಯನ್ನುದ್ದೇಶಿಸಿ 73,25,000 ಆವರ್ತಿ ಜಪಿಸಿದ ''ಅಚ್ಯುತ-ಅನಂತ-ಗೋವಿಂದ'' ನಾಮಗಳ ಜಪವನ್ನು ಶ್ರೀಮೂಲರಾಮನಲ್ಲಿ ಸಮರ್ಪಿಸಿದರು. ಈ ಲಾಕ್‌ಡೌನ್‌ನ ಸಂದರ್ಭದಲ್ಲಿ ಸಜ್ಜನರಿಗೆ ಜ್ಞಾನೋಪದೇಶ ವಾಗಲೆಂದು ಪ್ರತಿನಿತ್ಯ ವಿಷ್ಣುಸಹಸ್ರನಾಮದ ವ್ಯಾಖ್ಯಾನ, ಕೃಷ್ಣಾಮೃತಮಹಾರ್ಣವದ ಅನುಗ್ರಹ ಸಂದೇಶವನ್ನು ಅಂತರ್ಜಾಲದ ಮೂಲಕ ಬಿತ್ತರಿಸಿದರು. ಇದು ಪಂಡಿತ-ಪಾಮರರಿಗೆ ಆಧ್ಯಾತ್ಮಿಕ ಚಿಂತನೆಯಾಯಿತು. 18.4.2020 ರಂದು ಶ್ರೀಪಾದಂಗಳವರ

ಆದೇಶಾನುಸಾರವಾಗಿ ಬೆಳಿಗ್ಗೆ ಸಾಮೂಹಿಕ ಗಾಯತ್ರೀಜಪ ಹಾಗೂ ರಾಮಕೃಷ್ಣ ಮಂತ್ರಗಳ ಜಪವೂ ನಡೆಯಿತು. ಇದರಲ್ಲಿ ಸಾವಿರ ಸಾವಿರ ಭಕ್ತರು ತಾವು ಇದ್ದ ಸ್ಥಳಗಳಲ್ಲೇ ಜಪಿಸಿ ಪುನೀತರಾದರು. ಇದೇ ಸಂದರ್ಭದಲ್ಲಿ ಶ್ರೀಪಾದಂಗಳವರು ನೀಡಿದ ಅಸ್ಖಲಿತವಾದ ಉದ್ಬೋಧಕ ಸಂದೇಶವನ್ನು ಆಲಿಸಿದವರೇ ಧನ್ಯರು !!! ಈ ದಿವಸಗಳಲ್ಲಿ ಶ್ರೀಗಳವರ ಆದೇಶಾನುಸಾರವಾಗಿ ಭಕ್ತರು ''ಅಚ್ಯುತ, ಅನಂತ, ಗೋವಿಂದ'' ನಾಮಗಳ ಜಪ, ಧನ್ವಂತರಿ, ನರಸಿಂಹ ಸುಳಾದಿಗಳ ಪಠನಗಳನ್ನು ಮಾಡಿ ಪವಿತ್ರರಾದರು. ಹೀಗೆ ಶ್ರೀಪಾದಂಗಳವರು ವೈಯಕ್ತಿಕ ಆಚರಣೆಗಳ ಜೊತೆಜೊತೆಗೆ ಸಹಸ್ರಾರು ಭಕ್ತರಿಗೂ ಭಾಗವಹಿಸಲು ಸಂದೇಶವಿತ್ತು ಅನುಗ್ರಹಿಸಿದ್ದು, ನಮ್ಮಗಳ ಹಿಂದಿನ ಪುಣ್ಯವೇ ಸರಿ.

ಈ ಕರೋನಾದಿಂದಾಗಿ ತತ್ತರಿಸುತ್ತಿರುವ ಜನರಮೇಲೆ ಶ್ರೀಪಾದಂಗಳವರು ತೋರಿದ ಅನುಕಂಪ, ಸಹಾಯಹಸ್ತ ಅನುಗ್ರಹವಾಯಿತು. ನಡೆದ, ನಡೆಯುತ್ತಿರುವ ಕಾರ್ಯಗಳೂ ಬಹುಮುಖವಾಗಿದೆ. ವಿಶೇಷವಾಗಿ ಬಡಬ್ರಾಹ್ಮಣರು, ದಿನದ ಊಟಕ್ಕೂ ಪರಿತಪಿಸುತ್ತಿರುವುದು ಸತ್ಯಸಂಗತಿಯಾಗಿದೆ. ಇಂತಹ ಸಹಸ್ರಾರು ಜನರ ಸಂಕಷ್ಟದಲ್ಲಿ ಸಿಲುಕಿದವರಿಗೆ ಆಸರೆಯಾದರು. ಶ್ರೀಮಠದ ಅನುಕೂಲಸ್ಥ ಶಿಷ್ಯರಿಂದ, ಮಠದ ಕೆಲ ಮೂಲಗಳಿಂದ ವಿಶೇಷವಾಗಿ ವಿಶ್ವಮಧ್ವಮಹಾಪರಿಷತ್ ನ ಘಟಕಗಳ ಮುಖಾಂತರ ಮಾಡಿಸಿದ, ನಡೆಯುತ್ತಿರುವ ಕಾರ್ಯಗಳೂ ಅನೇಕ. ಇವುಗಳನ್ನು ಕೇವಲ ಕೆಲ ವಾಕ್ಯಗಳಿಂದ ಬಣ್ಣಿಸಲಾಗದು.

ಅನೇಕ ಊರುಗಳಲ್ಲಿ ಯಾವ ಜಾತಿ-ಮತಗಳನ್ನೂ ಗಮನಿಸದೇ 15-20 ದಿನಗಳ ವರೆಗೆ ಬಡಜನರಿಗೆ ಅನಾಥಾಶ್ರಮಗಳಿಗೆ ಭೋಜನದ ವಿತರಣೆ ಮಾಡಲಾಯಿತು. ಅನೇಕ ಬ್ರಾಹ್ಮಣರಿಗೆ ತಿಂಗಳಿಗೆ ಆಗುವಷ್ಟು ದವಸ-ಧಾನ್ಯಗಳನ್ನು ತಿಂಗಳಿಗೊಮ್ಮೆ ಎಂಬಂತೆ ಮನೆಮನೆಗೆ ಹೋಗಿ ತಲುಪಿಸಲಾಗುತ್ತಿದೆ. ಇನ್ನೂ ಕೆಲವರಿಗೆ ಔಷಧಿ, ವೈದ್ಯಕೀಯ ಖರ್ಚುಗಳಿಗಾಗಿ ಆರ್ಥಿಕವಾಗಿಯೂ ಸಹಕರಿಸಲಾಗುತ್ತಿದೆ. ಕೆಲವು ಕಡೆ ಪೋಲೀಸರಿಗೆ, ವೈದ್ಯರಿಗೆ ಸಮಯೋಚಿತ ಸಹಾಯವನ್ನು ಮಾಡಲಾಗುತ್ತಿದೆ. ಈ ಸಂದರ್ಭದಲ್ಲಿ ಕೆಲವರಿಗೆ ನಿಜಕ್ಕೂ ಜೀವ ಬಂದಂತಾಗಿದೆ. ಕೆಲವು ಕಡೆ ಬಟ್ಟೆಗಳನ್ನು ನೀಡಲಾಗುತ್ತಿದೆ. ಬೆಂಗಳೂರಿನಲ್ಲಿ 15 ದಿನಗಳ ಕಾಲ ಪ್ರತಿನಿತ್ಯ 2000 ಜನರಿಗೆ ಆಹಾರದ ಪ್ಯಾಕೆಟ್‌ಗಳನ್ನು ಮಾಡಿ ಹಂಚಲಾಯಿತು. ಹೀಗೆ ಊರೂರಿನ ಮಠದ ಶಾಖೆಗಳ ಮೂಲಕ, ಪರಿಷತ್ ಘಟಕಗಳ ಮೂಲಕ ಸದಸ್ಯರು ಶ್ರಮಿಸುತ್ತಿರುವುದು ನಮ್ಮ ಸಮಾಜದ ಭಾಗ್ಯ. ಎಲ್ಲಕ್ಕೂ ಹೆಚ್ಚಾಗಿ ನಮ್ಮ ಪರಮಪೂಜ್ಯ ಶ್ರೀಪಾದಂಗಳವರ ಪರಮಾನುಗ್ರಹ. ಇದು ನಿಜಕ್ಕೂ ಶ್ರೀಪಾದರು ಭಕ್ತರ ಮೇಲೆ ತೋರುತ್ತಿರುವ ಕಾರುಣ್ಯ. ಭಗವಂತನ ಕಾರುಣ್ಯವನ್ನು ಪದೇ ಪದೇ ಉಪದೇಶಗಳ ಮೂಲಕ ತಿಳಿಸುತ್ತಿರುವ ಶ್ರೀಗಳವರು ಅದನ್ನು ಅಕ್ಷರಶಃ ಪಾಲಿಸುತ್ತಿರುವುದು ನಮ್ಮ ಭಾಗ್ಯ. ಈ

ಕಾರ್ಯದಲ್ಲಿ ಅನೇಕ ಭಕ್ತರು ಉದಾರವಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ಔದಾರ್ಯಕ್ಕೂ ನನ್ನ ವಂದನೆಗಳು.

ಈ ಪ್ರಸಂಗದಲ್ಲಿ ಚೆನ್ನೈನ ಎಸ್.ಎಂ.ಎಸ್.ಓ ನಿಧಿಯವತಿಯಿಂದ 300 ರಕ್ಕೂ ಹೆಚ್ಚು ವಿದ್ವಾಂಸರಿಗೆ ಹಾಗೂ ಅರ್ಚಕರಿಗೆ ವಿಶೇಷವಾದ ಧನಸಹಾಯವನ್ನು ಮಾಡಿದ್ದು ಸ್ಮರಣೀಯವಾಗಿದೆ.

ಶ್ರೀಮಠದ ಹಾಗೂ ಪರಿಷತ್ತಿನ ಮೂಲಕ ಬೇರೆ ಬೇರೆ ಊರುಗಳಲ್ಲಿ ನಡೆದ ಸೇವಾಕಾರ್ಯಗಳ ಸಂಕ್ಷಿಪ್ತ ಪಕ್ಷಿನೋಟ -

ಕೆಳಗಿನ ಪಟ್ಟಿಯಲ್ಲಿ ಊರುಗಳ ಹೆಸರಿನ ಮುಂದೆ ಆಯಾ ಊರಿನವರು ದವಸಧಾನ್ಯಗಳನ್ನು ನೀಡಿದ ಕುಟುಂಬಗಳ ಸಂಖ್ಯೆಯನ್ನು ನೀಡಲಾಗಿದೆ.

ಗಮನಿಸಿ - ಇದಲ್ಲದೇ ಇತರ ಸೇವಾಕಾರ್ಯಗಳೂ ಕೆಲವು ಊರುಗಳಲ್ಲಿ ನಡೆದಿವೆ.

| ಊರು | ಕುಟುಂಬ |
|---|---|
| ಅನಂತಪುರ | 35 |
| ಅಥಣಿ | 45 |
| ಬದಾಮಿ | 5 |
| ಬಾಗಲಕೋಟ್ | 160 |
| ಬಾರಾಮತಿ | 54 |
| ಬೆಂಗಳೂರು | 410 |
| ಬೆಳಗಾವಿ | 180 |
| ಬೀಳಗಿ | 5 |
| ಚೆನ್ನೈ | 100 |
| ದಾವಣಗೇರಿ | 75 |
| ಧಾರವಾಡ | 30 |
| ಗದಗ | 10 |
| ಗುಂಟೂರು | 10 |
| ಹರಿಹರ | 120 |
| ಹಾವೇರಿ | 150 |
| ಹೊಸಪೇಟೆ | 60 |
| ಹುಬ್ಬಳ್ಳಿ | 150 |

ಶ್ರೀಕೃಷ್ಣಾರ್ಪಣಮಸ್ತು

| | |
|---|---|
| ಹೈದರಾಬಾದ್ | 132 |
| ಜಮಖಂಡಿ | 25 |
| ಹುನ್ನೂರು | 50 |
| ಕಲ್ಬುರ್ಗಿ | 65 |
| ಕೊಪ್ಪಳ | 30+10 |
| ಮೆಹಬೂಬ್‌ನಗರ | 110 |
| ಮಲಕಾಜಗಿರಿ | 130 |
| ಮತ್ಕಲ್ | 21 |
| ಮುಧೋಳ | 10 |
| ಮೈಸೂರು | 54 |
| ಫಾಲಮೂರು | 30 |
| ಪುಣೆ | 12 |
| ರಾಯಚೂರು | 75 |
| ಶಿವಮೊಗ್ಗ | 85 |
| ಸೋಲಾಪುರ | 15 |
| ತಿರುಪತಿ | 50 |
| ಕೊಯಮತ್ತೂರು | 150 |

**ಶ್ರೀಉತ್ತರಾದಿಮಠದ ನೂತನ** YOU TUBE **ಚಾನಲ್ ಸಂಸ್ಕೃತಿವಾಹಿನೀ**

ನಮ್ಮ ಸುಂದರವಾದ ಸಂಸ್ಕೃತಿಯ ಗಂಗೆ ಎಲ್ಲೆಡೆ ಹರಡಬೇಕು. ಎಲ್ಲರೂ ಈ ಸಂಸ್ಕೃತಿಯ ಗಂಗೆಯಲ್ಲಿ ಮೀಯಬೇಕು. ಇದಕ್ಕಾಗಿಯೇ ಪ್ರಾರಂಭವಾಗಿದೆ ಸಂಸ್ಕೃತಿವಾಹಿನೀ. ಮಕ್ಕಳಿಗಾಗಿ, ಯುವಕ-ಯುವತಿಯರಿಗಾಗಿ, ಮಹಿಳೆಯರಿಗಾಗಿ ನಮ್ಮ ಸಂಸ್ಕೃತಿಯನ್ನು ಬಿಂಬಿಸುವ ವಿವಿಧ ಕಾರ್ಯಕ್ರಮಗಳ ಸುಂದರ ತಾಣ ಈ ಜಾಲತಾಣ. ಜಾಣಜಾಣೆಯರೆಲ್ಲಾ ಜಾಯಿನ್ ಆಗಿ. ಇದು ನಿಮ್ಮ ರಂಗಮಂಚ. ನಿಮ್ಮ ಕೌಶಲವನ್ನು ಪ್ರದರ್ಶಿಸಿ. ನಿಮ್ಮ ಕಲೆಯನ್ನು ಹಂಚಿಕೊಳ್ಳಿ. ನಮ್ಮ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿ. **www.uttaradimath.org/samskruti-vahini**

ದಾಸಸುಧಾ

# ಹರಿದಾಸರ ಜನಪರ ದೃಷ್ಟಿ-೩

✍ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ

ದಾಸರು ಕನ್ನಡಸಾಹಿತ್ಯಕ್ಕೆ ನೀಡಿದ ಕೊಡುಗೆ ಗುಣದಲ್ಲಿಯೂ, ಪ್ರಮಾಣದಲ್ಲಿಯೂ ಗಣನೀಯವಾಗಿದೆ. ಅದರಿಂದಾಗಿ ದಾಸಸಾಹಿತ್ಯ, ವಿಶ್ವಸಾಹಿತ್ಯಕ್ಕೆ ಕನ್ನಡ ನೀಡಿದ ಕೊಡುಗೆಯೆಂದು ಗುರುತಿಸಲಾಗಿದೆ. ಭಾಷೆಯ ಸರಳತೆಯ ದೃಷ್ಟಿಯಿಂದ, ಸಾಮಾನ್ಯ ಜನರನ್ನುದ್ದೇಶಿಸಿ ರಚಿತವಾದ ಕೀರ್ತನೆಗಳು ಬಹುಬೇಗ ಜನರಿಂದ ಆಕರ್ಷಿತಗೊಂಡವು. ಇವುಗಳನ್ನು ರಚಿಸಿದವರು ಮೇಧಾವಿಗಳು, ಸುಸಂಸ್ಕೃತರು, ಅನುಭಾವಿಗಳಾಗಿದ್ದರು. ಅವರಲ್ಲಿಯ ಕೆಲವರು ಸಂಸ್ಕೃತ-ಕನ್ನಡಭಾಷೆಗಳಲ್ಲಿ ವಿದ್ವಾಂಸರಾಗಿದ್ದರು. ಶಾಸ್ತ್ರಪಾಂಡಿತ್ಯವನ್ನು ಪಡೆದವರಾಗಿದ್ದರು. ಆದ್ದರಿಂದ ಅವರ ಕೃತಿಗಳು ಕೇವಲ ಮನೋರಂಜನೆಯನ್ನು ಕೊಡುವಂಥವಾಗಲಿಲ್ಲ. ವಿಚಾರಪ್ರಚೋದಕವಾದುವು. ಚಿತ್ತಶುದ್ಧಿಯನ್ನು ಮಾಡುವಂಥವಾದುವು. ಅಂತರಂಗವನ್ನು ಪ್ರವೇಶಿಸಿ ರಸೋತ್ಪಾದನೆಯನ್ನು ಮಾಡುವ ಶಕ್ತಿಯುಳ್ಳವುಗಳು. ಆದ್ದರಿಂದ ಈ ಕೀರ್ತನೆಗಳಲ್ಲಿ ಉತ್ತಮ ಕಾವ್ಯಗಳಲ್ಲಿರುವ ಲಕ್ಷಣಗಳನ್ನೂ ಗುರುತಿಸಲಾಗಿದೆ. ಹಾಗೆಂದು ಎಲ್ಲ ದಾಸರ ಕೀರ್ತನೆಗಳು ಉತ್ತಮ ಕಾವ್ಯಮಟ್ಟದ್ದು ಎಂದು ಹೇಳಲಾಗದು. ಅಲ್ಲಲ್ಲಿ ಜೊಳ್ಳೂ ಇದೆ. ಗಟ್ಟಿ ಅಧಿಕ.

ಇಂದಿಗೂ ದಾಸಸಾಹಿತ್ಯ ಹರಿಗಡೆದಿಲ್ಲ. ಹಿಂದಿನವರಂತೆ ತಾಳ ತಂಬೂರಿ ಹಿಡಿದು ಊರೂರು ತಿರುಗುವುದಿಲ್ಲ ನಿಜ. ತಮ್ಮ ತಮ್ಮ ವೃತ್ತಿಯಲ್ಲಿ ಇದ್ದುಕೊಂಡೇ ದಾಸದೀಕ್ಷೆಯನ್ನು ಪಡೆದು ಭಗವಂತನ ನಾಮಸ್ಮರಣೆ, ಅವನ ಮಹಿಮೆಗಳ ಜೊತೆಗೆ ಆಧುನಿಕ ವಿಚಾರಗಳನ್ನು ಭಗವಂತನಿಗೆ ನಿವೇದಿಸಿಕೊಂಡಿದ್ದಾರೆ.

ದಾಸರು ಕರ್ನಾಟಕದಲ್ಲಿ ಕಳೆದ ಐದು ಶತಮಾನಗಳಿಂದ ಇಂದಿನವರೆಗೂ ನಮ್ಮ ಜನರ ಜೀವನವನ್ನು ಉತ್ತಮಗೊಳಿಸಲು ಮಹತ್ವಪೂರ್ಣವಾದ ಸೇವೆಯನ್ನು ಸಲ್ಲಿಸಿ ಕೃತಕೃತ್ಯರಾಗಿದ್ದಾರೆ. ಜನಾರ್ದನನ ಸೇವೆಯನ್ನು ಜನತೆಯ ಸೇವೆಯ ಮೂಲಕ ಸಲ್ಲಿಸಿದ್ದಾರೆ. ಧರ್ಮಜಾಗೃತಿಯನ್ನು ಮಾಡಿದ್ದಾರೆ. ಜನರಲ್ಲಿ ಭಗವದ್ಭಕ್ತಿಯನ್ನು ಮೂಡಿಸುವಲ್ಲಿ ಪ್ರಯತ್ನಿಸಿದ್ದಾರೆ. ತನ್ಮೂಲಕ ಜನರಲ್ಲಿ ನೀತಿ, ನ್ಯಾಯ, ಶೀಲ ಮೊದಲಾದ ಗುಣಗಳ ಬಗ್ಗೆ ಅರಿವನ್ನು ಮೂಡಿಸಿದ್ದಾರೆ. ಕನ್ನಡಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ. ಪಾಮರರಲ್ಲಿ ಸಾಹಿತ್ಯ-ಸಂಗೀತಗಳ ಅಭಿರುಚಿಯನ್ನು ಬೆಳೆಸಿದ್ದಾರೆ. ಜಾತಿ, ಮತ, ಕುಲಗಳ ಭೇದಭಾವವಿಲ್ಲದೇ ಜನರ ಮಧ್ಯ ಓಡಾಡಿ ಎಲ್ಲರನ್ನೂ ಸುಸಂಸ್ಕೃತರನ್ನಾಗಿ ಮಾಡುವ ಉದಾತ್ತಪ್ರಯತ್ನವನ್ನು ನಿಸ್ವಾರ್ಥತೆಯಿಂದ ಮಾಡಿದ್ದಾರೆ. ಭಾರತೀಯಸಂಸ್ಕೃತಿಯ ರಕ್ಷಣೆ-ಪೋಷಣೆಗಳಿಗೆ ಅಮೂಲ್ಯ ಕೊಡುಗೆಯನ್ನಿತ್ತಿದ್ದಾರೆ.

ದಾಸರು ಕನ್ನಡದಲ್ಲಿ ವೇದಾಂತದ ಗಹನ ತತ್ವಗಳನ್ನು ಹೇಳಿದರು. ಕನ್ನಡದಲ್ಲಿಯೇ ಜನಸಾಮಾನ್ಯರು ಮುಕ್ತಿಗೆ ಪೂರ್ವವಾದ ಜ್ಞಾನವನ್ನು ಪಡೆಯಲು ದಾರಿ ಮಾಡಿಕೊಟ್ಟರು.

ಕನ್ನಡದಲ್ಲಿ ದಾಸಸಾಹಿತ್ಯವನ್ನು ರಚಿಸಿದ ಮೊದಲ ಮೂವರು, ಅಗ್ರಗಣ್ಯರಾದ ಶ್ರೀಶ್ರೀಪಾದರಾಜರು, ಶ್ರೀವ್ಯಾಸರಾಯರು ಮತ್ತು ಶ್ರೀವಾದಿರಾಜರು, ಬ್ರಾಹ್ಮಣರ ಮಠಗಳ ಪೀಠಾಧಿಪತಿಗಳಾಗಿದ್ದವರು. ಸಂಸ್ಕೃತದಲ್ಲಿ ಆಳವಾದ ಪಾಂಡಿತ್ಯವನ್ನು ಹೊಂದಿದವರು. ಸಿದ್ಧಾಂತದ ಖಂಡನೆ-ಮಂಡನೆಗಳಲ್ಲಿ ಉದ್ದಾಮ ಗ್ರಂಥಗಳನ್ನು ರಚಿಸಿದವರು. ಅಂಥವರು ''ಜೀವನದ ಮುಖ್ಯ ಉದ್ದೇಶವೆಂದರೆ, ಪರಮಾತ್ಮನ ಹತ್ತಿರ ಹೋಗುವುದು ದೊಡ್ಡ ಸಾಧನೆ'' ಎಂದರು. ಅದು ಭಗವಂತನಲ್ಲಿಯ ಅನನ್ಯ ಭಕ್ತಿ ಮತ್ತು ಆತನಿಗೆ ಶರಣಾಗುವುದರಿಂದ ಮಾತ್ರ ಸಾಧ್ಯ ಎಂದು ತಿಳಿಸಿದರು. ತಮಗೆ ತಿಳಿದದ್ದನ್ನು ಸರಳ ಆಡುಮಾತಿನಲ್ಲಿ ಹೇಳಿದರು. ಮನುಷ್ಯ ಜನ್ಮದ ಸಾರ್ಥಕತೆಯನ್ನು ಪಡೆಯಲು ತಾವು ಕಂಡ ದಾರಿಯನ್ನು ಜನಸಾಮಾನ್ಯರಿಗೆ ತೆರೆದು ಇಟ್ಟರು.

''ಭಕ್ತಿ ಬೇಕು, ವಿರಕ್ತಿ ಬೇಕು, ಸರ್ವಶಕ್ತಿ ಬೇಕು, ಮುಂದೆ ಮುಕ್ತಿ ಬಯಸುವವಗೆ'' ಎಂದು ಶ್ರೀಶ್ರೀಪಾದರಾಜರು ಅತ್ಯಂತ ಸರಳಭಾಷೆಯಲ್ಲಿ ಹೇಳಿದರು. ಭಗವಂತನಲ್ಲಿ ಕೇಳಿಕೊಳ್ಳುವಾಗಲೂ ಕೂಡ, ''ಗ್ರಾಸ ವಾಸಗಳಿಗೆ ಇಲ್ಲವೆಂದು ನಿನ್ನ । ಬೇಸರಿಸಿ ಬೇಡ ಬಂದುದಿಲ್ಲ । ವಾಸುದೇವನೇ ನಿನ್ನ ದಾಸರ ದಾಸರ । ದಾಸರ ದಾಸ್ಯವನು ಕೊಡು'' ಎಂದು ಶ್ರೀರಂಗವಿಠಲನನ್ನು ಕೇಳಿಕೊಂಡಿದ್ದಾರೆ.

ಭವ್ಯ ವಿಜಯನಗರ ಸಾಮ್ರಾಜ್ಯದ ರಾಜಗುರುಗಳು, ಪೀಠಾಧಿಪತಿಗಳು, ನವರತ್ನದ ಮಂಟಪದಲ್ಲಿ ಇಷ್ಟದೈವವನ್ನು ಪೂಜಿಸುವ ವ್ಯಾಸರಾಜರು, ಹರಿದಾಸರ ಮಹಿಮೆಯನ್ನು ಸುಳಾದಿಯೊಂದರಲ್ಲಿ ಹೀಗೆ ಹೇಳಿದ್ದಾರೆ.

''ನಿಧಿಯ ಮೇಲೆ ಇದ್ದು ನಿಧಿಯನರಿಯದಂತೆ, ತನ್ನ ಕಂಠಮಣಿಯ ತಾ ಮರೆತಂತೆ, ಕಣ್ದೆರೆಯದ ಹಸುಳೆ ತಾಯನರಿಯದಂತೆ, ಎನ್ನಲ್ಲಿ ಹೊಂದಿಪ್ಪ ನಿನ್ನನರಿಯದಂತೆ, ನಿನ್ನ ತೋರಿದರೆನಗೆ ನಿನ್ನ ದಾಸರು ಸಿರಿಕೃಷ್ಣ''

ಎಂದು ಹೇಳಿದ್ದಾರೆ. ಇನ್ನೊಂದು ಸಂದರ್ಭದಲ್ಲಿ -

''ಏನು ಸುಖವೋ ಎಂಥ ಸುಖವೋ ಹರಿಯ ಧ್ಯಾನ ಮಾಡುವವರ ಸಂಗ, ತಂಬೂರಿಮೀಟುತ ದ್ವಯಅಂಬಕದಿ ಬಾಷ್ಪಬಿಂದು ತುಂಬಿ ಆನಂದದಿಂದ ಸಂಭ್ರಮರಾಗಿಪ್ಪರ ಸಂಗ, ಗೆಜ್ಜೆಯ ಕಾಲಲಿ ಕಟ್ಟಿ, ಲಜ್ಜೆ ಬಿಟ್ಟು, ಹರಿಯ ನಾಮ ಗರ್ಜನೆ ಮಾಡುತ್ತ ಅಘವರ್ಜಿತರಾಗಿಪ್ಪರ ಸಂಗ, ನಡೆವುದು ನುಡಿವುದು ಕೊಡುವುದು ಕೊಂಬುವುದು ಒಡೆಯನ ಪ್ರೇರಣೆಯೆಂದು ನುಡಿದು ಹಿಗ್ಗುವರ ಸಂಗ''

ಎಂದರು. ಇನ್ನೊಂದು ಕೀರ್ತನೆಯಲ್ಲಿ 'ಹರಿದಾಸರ ಸಂಗಕೆ ಸರಿಯುಂಟೆ' ಎಂದು ಕೇಳಿದರೆ, ಮತ್ತೊಂದರಲ್ಲಿ 'ಅಂತರಂಗದಲಿ ಹರಿಯ ಕಾಣದವ ಹುಟ್ಟು ಕುರುಡ' ಎಂದರು. ಬಂಗಾರದ, ನವರತ್ನಖಚಿತ ಮಂಟಪದಲ್ಲಿ, ದೇವತಾ ಮೂರ್ತಿಗಳಿದ್ದರೂ, 'ಎನ್ನ ಬಿಂಬ ಮೂರುತಿಯನು ಪೂಜಿಸುವೆ ಮನ ಮುಟ್ಟಿ' ಎಂದು ಹೇಳಿದರು.

ಶ್ರೀ ವ್ಯಾಸರಾಯರ ಸಮಕಾಲೀನರಾದ ಶ್ರೀವಾದಿರಾಜರು ಕ್ರಿ ಶ. 1480-1600 'ಹಣವೇ ನಿನ್ನಯ ಗುಣವೇನು ಬಣ್ಣಿಪೆನು, ಹಣವಿಲ್ಲದವನೊಬ್ಬ ಹೆಣವೇ ಸರಿಕಂಡ್ಯಾ'

ಎಂದು ಅಂದೇ ಹೇಳಿದ್ದಾರೆ. 'ಅರಿಯದ ಶುಂಠನ ಅರಿತವನೆನಿಸುವಿ, ಸಿರಿ ಹಯವದನನ ಸ್ಮರಣೆಯ ಮರೆಸುವಿ' ಎನ್ನುತ್ತಾರೆ. ಇದು ಇಂದು ಕೂಡ ಸತ್ಯ ! ಅವರು ಕನಕದಾಸರ ಅತ್ಯಂತ ಪರಮಸ್ನೇಹಿತರು ಎಂಬುದು ಉಭಯತರ ಚರಿತ್ರೆಗಳಲ್ಲಿ ಪ್ರಸಿದ್ಧವಾಗಿದೆ.

ಈ ಮೂವರೂ ಆಜನ್ಮಬ್ರಹ್ಮಚಾರಿಗಳು, ಸಂನ್ಯಾಸಿಗಳಾಗಿದ್ದುಕೊಂಡು, ಪೀಠದ ಮೇಲೆ ಕುಳಿತುಕೊಂಡು, ಪಾದಪೂಜೆ ಮಾಡಿಸಿಕೊಳ್ಳುವ ಸ್ವಾಮಿಗಳಾಗಿ, ಪ್ರಪಂಚವನ್ನು ಕಂಡ ರೀತಿ ಅನನ್ಯವಾಗಿದೆ. ಇವರು ಕಟ್ಟಿದ ದಾಸಸಾಹಿತ್ಯಮಂದಿರಕ್ಕೆ ಶಿಖರವನ್ನಿಟ್ಟವರು ಪುರಂದರದಾಸರು ಮತ್ತು ಕನಕದಾಸರು.

...ಸಶೇಷ...



## ಪ್ರತಿಭಾನ್ವಿತ ಯುವ ವಿದ್ವಾಂಸ
## ಪಂ. ಪುರಾಣಿಕ ಜಯತೀರ್ಥಾಚಾರ್ಯ ಇನ್ನಿಲ್ಲ

ಶುದ್ಧ ವೈದಿಕವೃತ್ತಿಯಲ್ಲಿ ಇದ್ದು ಬೆಂಗಳೂರಿನಲ್ಲಿ ಪಾಠ-ಪ್ರವಚನ, ಗ್ರಂಥಸಂಶೋಧನ, ಗ್ರಂಥಲೇಖನ ಮುಂತಾದ ಕಾರ್ಯಗಳಲ್ಲಿ ನಿರತರಾಗಿದ್ದ ಪಂ. ಜಯತೀರ್ಥಾಚಾರ್ಯ ಪುರಾಣಿಕ ಇವರು ದಿ. ೨೬-೦೪-೨೦೨೦ ರಂದು ನಮ್ಮನ್ನು ಅಗಲಿದ್ದಾರೆ. ಕಿರಿದಾದ ವಯಸ್ಸಿನಲ್ಲಿಯೇ ಹಿರಿದಾದ ಸಾಧನೆಯನ್ನು ಮಾಡಿದ ಇವರು ಪಂ. ಮಾಹುಲೀ ವಿದ್ಯಾಸಿಂಹಾಚಾರ್ಯರಲ್ಲಿ ನ್ಯಾಯವೇದಾಂತವ್ಯಾಕರಣಾದಿಗಳ ಅಧ್ಯಯನ ಮಾಡಿದ್ದರು. ಅಧ್ಯಯನದ ನಂತರ ಶ್ರೀ ಶ್ರೀಪಾದಂಗಳವರ ಆದೇಶದಂತೆ ವಿಶ್ವಮಧ್ವಮಹಾಪರಿಷತ್ತಿನಲ್ಲಿ ಸಂಶೋಧಕರಾಗಿ ಸೇವೆಯನ್ನು ಸಲ್ಲಿಸಿದರು. ೧೯ ವ್ಯಾಖ್ಯಾನಗಳಿಂದ ಸಹಿತವಾದ ಶ್ರೀಮನ್ಮಹಾಭಾರತ ತಾತ್ಪರ್ಯನಿರ್ಣಯದ ಪ್ರಕಾಶನದ ಹಿರಿದಾದ ಕಾರ್ಯದಲ್ಲಿ ತಮ್ಮ ಪ್ರಮುಖ ಸೇವೆಯನ್ನು ಸಲ್ಲಿಸಿದ್ದರು. ರಾಮಾಯಣ, ಮಹಾಭಾರತ, ಪುರಾಣಾದಿಗಳು, ಉಪಲಬ್ಧವಾದ ವಿವಿಧ ಆಗಮಗಳು ಮೊದಲಾದವುಗಳನ್ನು ವಿಶೇಷವಾಗಿ ಅಧ್ಯಯನ ಮಾಡಿ ತಾತ್ಪರ್ಯನಿರ್ಣಯದ ವಚನಗಳಿಗೆ ಸಂವಾದಿಯಾದ, ಪೋಷಕವಾಗುವ ಅನೇಕ ಪ್ರಮಾಣಗಳನ್ನು ಸಂಗ್ರಹಿಸುವಲ್ಲಿ ಇವರ ಪರಿಶ್ರಮ ಅಪಾರವಾದದ್ದು. ನಿರಂತರ ಅಧ್ಯಯನಶೀಲರಾದ ಇವರು ಸುಧಾ-ಸರ್ವಮೂಲಾದಿಗಳಲ್ಲಿ ವಿಶೇಷವಾದ ಆಳವಾದ ಪಾಂಡಿತ್ಯವನ್ನು ಪಡೆದಿದ್ದರು. ಚಿಕಿತ್ಸಕ ಬುದ್ಧಿಯ ಇವರು ತಮ್ಮದೇ ಆದ ಅಪರೂಪದ ಸಂಶೋಧನೆಗಳನ್ನು ಮಾಡಿ, ಅನೇಕ ಸಭೆ-ಸಮಾರಂಭಗಳಲ್ಲಿ ಪ್ರಬಂಧಗಳನ್ನು ಮಂಡಿಸಿ, ವಿದ್ವಾಂಸರ, ಶ್ರೀ ಶ್ರೀಪಾದಂಗಳವರ ಮೆಚ್ಚುಗೆಗೆ ಪಾತ್ರರಾಗಿದ್ದರು. ಇವರ ಪಾಂಡಿತ್ಯವನ್ನು ಗಮನಿಸಿ ಶ್ರೀ ಶ್ರೀಪಾದಂಗಳವರು **"ಸರ್ವಮೂಲವಿಚಕ್ಷಣ" "ಶ್ರೀರಾಮವಿದ್ಯಾಪ್ರಶಸ್ತಿ"** ಎಂಬ ಪ್ರಶಸ್ತಿಗಳನ್ನು ನೀಡಿ ಅನುಗ್ರಹಿಸಿದ್ದರು. ಇವರ ದುಃಖದ ನಿಧನವಾರ್ತೆಯನ್ನು ಕೇಳಿದ ಶ್ರೀಪಾದಂಗಳವರು ಅವರ ಪಾಂಡಿತ್ಯವನ್ನು, ಅಧ್ಯಯನ ದೀಕ್ಷೆಯನ್ನು, ಮರಣಶಯ್ಯೆಯಲ್ಲಿದ್ದಾಗಲೂ ಮಾಡುತ್ತಿದ್ದ ಅಧ್ಯಯನ-ಸಂಶೋಧನಗಳನ್ನು ನೆನೆಸಿ, "ಅವರು ಮಾಡಿದ ಸಾಧನೆಗೆ ಭಗವಂತ ಉತ್ತಮವಾದ ಗತಿಯನ್ನು ದಯಪಾಲಿಸುವುದರಲ್ಲಿ ಸಂದೇಹವಿಲ್ಲ" ಎಂದು ತಿಳಿಸುತ್ತಾ ಅವರ ಸದ್ಗತಿಗಾಗಿ ಶ್ರೀಮೂಲರಾಮದಿಗ್ವಿಜಯರಾಮ ವೇದವ್ಯಾಸದೇವರಲ್ಲಿ ಪ್ರಾರ್ಥಿಸಿದರು.

-ದಿವಾನರು ಶ್ರೀಉತ್ತರಾದಿಮಠ

# ಸಂಧ್ಯಾವಂದನೆ - ೭

## ಸಂಕಲ್ಪವೆಂಬ ಕಲ್ಪವೃಕ್ಷ

**ವೇದ-ವಿಜ್ಞಾನ**

✍ಡಾ. ರಾಘವೇಂದ್ರಾಚಾರ್ಯ ರಾಚೂರಿ

ಸಂಧ್ಯಾವಂದನ ಲೇಖನದ ಸರಣಿಯಲ್ಲಿ ಸಂಕಲ್ಪವೆಂಬ ಕಲ್ಪವೃಕ್ಷದ ಶಾಖೋಪ-ಶಾಖಗಳನ್ನು ಪರಿಚಯಿಸಿಕೊಳ್ಳುತ್ತಿದ್ದೇವೆ. ಸಂಕಲ್ಪದ ಪ್ರಧಾನ ಅಂಗಗಳಾದ ಭಗವನ್ನಾಮ, ವಿಭೂತಿರೂಪಗಳ ಅನುಸಂಧಾನಗಳ ಜೊತೆಯಲ್ಲಿ ಪುಣ್ಯದೇಶಕಾಲಗಳ ಸ್ಮರಣೆಯು ಅತ್ಯಂತ ಫಲಕಾರಿಯಾಗುತ್ತದೆ. ಯಾವ ದೇಶಕಾಲಗಳಲ್ಲಿ ಕಾರ್ಯ ಸಿದ್ಧಿಸಬೇಕೋ ಆ ದೇಶಕಾಲಗಳ ಉಚ್ಚಾರಣೆಯನ್ನು ಮಾಡುವುದು ಅತ್ಯಂತ ಆವಶ್ಯಕ. ಹೀಗೆ ಮಾಡುವುದರಿಂದ ದೇಶಕಾಲನಿಯಾಮಕ ಭಗವದ್ರೂಪವನ್ನು ಸ್ಮರಿಸಿದಂತಾಗುತ್ತದೆ. ಕಾರ್ಯಸಿದ್ಧಿಸುವುದರಲ್ಲಿ ತತ್ತದ್ದೇಶಕಾಲಾಭಿಮಾನಿದೇವತೆಗಳ, ತದಂತರ್ಯಾಮಿ ತನ್ನಿಯಾಮಕವಾದ ಭಗವದ್ರೂಪಗಳ ಅನುಗ್ರಹ ಬೇಕಲ್ಲವೇ!!!

ಕಳೆದ ಲೇಖನದಲ್ಲಿ ಸಂಕಲ್ಪದಲ್ಲಿ ಬರುವ ನಾಮಸ್ಮರಣೆ ಮೊದಲಾಗಿ ಸಂವತ್ಸರದ ತನಕ ಇರುವ ಅಂಗಗಳ ಬಗ್ಗೆ ತಿಳಿದಿದ್ದೇವೆ. ಸಂಕಲ್ಪದಲ್ಲಿ ಶಾರ್ವರೀನಾಮ ಸಂವತ್ಸರೇ ಉತ್ತರಾಯಣೇ ಜ್ಯೇಷ್ಠಮಾಸೇ ಇತ್ಯಾದಿಯಾಗಿ ಹೇಳುತ್ತೇವೆ. ಅಲ್ಲಿ ಕೆಲವು ತಿಂಗಳು ಉತ್ತರಾಯಣ ಅಂತ ಹಾಗೂ ಕೆಲವು ತಿಂಗಳು ದಕ್ಷಿಣಾಯನ ಅಂತಲೂ ಹೇಳುತ್ತೇವೆ. ಈ ವ್ಯತ್ಯಾಸವೇಕೆ ? ಉತ್ತರಾಯಣ, ದಕ್ಷಿಣಾಯನಗಳು ಅಂದರೆ ಏನು ? ಏಕೆ ಬರುತ್ತವೆ ? ಇತ್ಯಾದಿವಿಷಯಗಳನ್ನು ಈ ಲೇಖನದಲ್ಲಿ ತಿಳಿಯೋಣ.

**11. ಅಯನ -** ಭೂಮಿಗೆ ಮೂರುರೀತಿಯ ಚಲನೆಗಳಿವೆ.



**1. ತನ್ನ ಕಕ್ಷೆಯಮೇಲೆ ತಾನೇ ಸುತ್ತುವುದು**

ಭೂಮಿಯ ಭ್ರಮಣಾವಧಿ ಎಂದರೆ ತನ್ನ ಕಕ್ಷೆಯಮೇಲೆ ತಾನೇ ಸುತ್ತಲು ಇವತ್ತಿನ ವಿಜ್ಞಾನದ ಪ್ರಕಾರ 23 ಗಂಟೆ, 56 ನಿಮಿಷ ಮತ್ತು 4.09 ಸೆಕೆಂಡ್ ಗಳು ಬೇಕಾಗುತ್ತವೆ. ಇದರಿಂದಲೇ ನಮಗೆ ಹಗಲು-ರಾತ್ರಿಗಳಾಗುವುದು. ಒಟ್ಟು ಹಗಲು-ರಾತ್ರಿಗಳ ಕಾಲ ಸೇರಿ 24 ತಾಸು. ಚಿತ್ರದಲ್ಲಿ ತೋರಿಸಿದಂತೆ ಪಶ್ಚಿಮದಿಂದ ಪೂರ್ವಕ್ಕೆ ಭೂಮಿಯು ಚಲಿಸುತ್ತದೆ. ಇದಕ್ಕೆ ವಿರುದ್ಧವಾಗಿ ಸೂರ್ಯನ ಗತಿ ಪೂರ್ವದಿಂದ ಪಶ್ಚಿಮಕ್ಕೆ ಗೋಚರವಾಗುತ್ತದೆ.

**2. ಸೂರ್ಯನ ಸುತ್ತಲು ಸುತ್ತುವುದು**




ಭೂಮಿ ತನ್ನ ಸುತ್ತ ಸುತ್ತುವುದಲ್ಲದೇ ಸೂರ್ಯನ ಸುತ್ತಲೂ ಸುತ್ತುತ್ತದೆ. ಅದಕ್ಕೆ 365 ದಿನ, 6 ಗಂಟೆ, 9 ನಿಮಿಷ ಮತ್ತು9.56 ಸೆಕೆಂಡ್ ಗಳ ಕಾಲ ತೆಗೆದುಕೊಳ್ಳುತ್ತದೆ. ಇದನ್ನು ಪರಿಭ್ರಮಣಾವಧಿ

ಅಥವಾ ಪ್ರದಕ್ಷಿಣಾವಧಿ ಎನ್ನಬಹುದು. ಭೂಮಿ ಸೂರ್ಯನ ಸುತ್ತಒಂದುಪ್ರದಕ್ಷಿಣೆ ಮುಗಿಸಿದರೆ ಅದನ್ನು ಒಂದುವರ್ಷ ಅಥವಾ ಸಂವತ್ಸರವೆಂದು ಹೇಳುತ್ತೇವೆ.

**3. ಅಯನ** - ಇವುಗಳಲ್ಲದೇ ಭೂಮಿಯ ಮತ್ತೊಂದು ಚಲನೆ ಇದೆ. ಅದಕ್ಕೆ ಅಯನ



ಎಂಬ ಹೆಸರಿದೆ. ಭೂಮಿಯ ಅಕ್ಷ(axis), ಕಾಂತಿವೃತ್ತಕ್ಕೆ(ecliptic)231/2 ಡಿಗ್ರಿಗಳಷ್ಟು ಓರೆಯಾಗಿದೆ (slanted). ಹೀಗೆ ಓರೆಯಾಗಿರುವುದರಿಂದಲೇ ಭೂಮಿಯಮೇಲೆ ಋತುಮಾನಗಳುಂಟಾಗುತ್ತದೆ, ಭೂಮಿಯ ಮೇಲಿನ ವಿವಿಧ ಭಾಗಗಳಲ್ಲಿ ಹಗಲು-ರಾತ್ರಿಗಳ ವ್ಯತ್ಯಾಸವಾಗುತ್ತದೆ. ಭೂಮಿಯು 23.44 ಡಿಗ್ರಿಗಳಷ್ಟು ಓರೆಯೊಂದಿಗೆ ಸೂರ್ಯನ ಸುತ್ತ ಸುತ್ತುತ್ತದೆ.ಈ ಓರೆಯಿಂದಾಗಿ ಸೂರ್ಯನು ಸಮಭಾಜಕದ (equator) ಉತ್ತರ ಮತ್ತು ದಕ್ಷಿಣಕ್ಕೆ ಪ್ರಯಾಣಿಸುತ್ತಾನೆ. ದಕ್ಷಿಣದಿಂದ ಉತ್ತರಕ್ಕೆ ಹೋಗುವ ಸೂರ್ಯನ ಈ ಚಲನೆಯನ್ನು ಉತ್ತರಾಯಣ ಎಂದು ಕರೆಯಲಾಗುತ್ತದೆ. ಉತ್ತರವನ್ನು ತಲುಪಿದಾಗ ಮತ್ತೆ ದಕ್ಷಿಣಕ್ಕೆ ಚಲಿಸಲು ಪ್ರಾರಂಭಿಸುತ್ತಾನೆ. ಆ ಚಲನವನ್ನು ದಕ್ಷಿಣಾಯನ ಎಂದು ಕರೆಯಲಾಗುತ್ತದೆ. ಹೀಗೆ ಓರೆಯಾದ ಭೂಮಿಯ ಅಕ್ಷವನ್ನು ಖಗೋಳದಲ್ಲಿ ಉತ್ತರದಿಕ್ಕಿಗೆ ವಿಸ್ತರಿಸಿದರೆ ಅಲ್ಲಿ ಧ್ರುವನಕ್ಷತ್ರ ಕಾಣುತ್ತದೆ. ಭೂಮಿ ಬುಗುರಿಯಂತೆ ತಿರುಗಿದರೂ, ಬುಗುರಿಯ ಮೊಳೆ ಸ್ಥಿರವೆಂದು ತೋರುವಂತೆ, ಭೂಮಿತನ್ನ ಅಕ್ಷದಮೇಲೆ ತಿರುಗಿದರೂ ಉತ್ತರ ಮತ್ತು ದಕ್ಷಿಣಧ್ರುವಗಳಲ್ಲಿ ಅದು ಸ್ಥಿರವಾಗಿರುವಂತೆ ತೋರುತ್ತದೆ. ಆದ್ದರಿಂದಲೇ ಭೂಮಿಯ ಉತ್ತರಾರ್ಧಗೋಳದಲ್ಲಿ ಧ್ರುವ ನಕ್ಷತ್ರ ಸ್ಥಿರವಾಗಿ ಸದಾಕಾಲ ಕಾಣುತ್ತದೆ. ಈ ಅಕ್ಷದ ತುದಿಯೇ ನಿಧಾನವಾಗಿ ತನ್ನ ದಿಕ್ಕನ್ನು ಬದಲಾಯಿಸುತ್ತದೆ. ಇದನ್ನೆ ಅಯನ ಅಥವಾ ವಿಷುವದ್ಬಿಂದುಗಳ ಬದಲಾವಣೆ ಎನ್ನಬಹುದು.

**12. ಋತು** - ಭೂಮಿಯು ಸೂರ್ಯನ ಸುತ್ತ ತನ್ನ ಕಕ್ಷೆಯಲ್ಲಿ ಒಂದು ಪೂರ್ಣ ಸುತ್ತು ತಿರುಗಲು ಒಂದು ವರ್ಷ ಬೇಕಾಗುತ್ತದೆ. ಹೀಗೆ ತಿರುಗುವಾಗ ಹವಾಮಾನದಲ್ಲಿ ಹಾಗೂ ನಿಸರ್ಗದಲ್ಲಿ ಉಂಟಾಗುವ




ಬದಲಾವಣೆಗಳಿಗೆ ಋತುಗಳು ಎಂದು ಕರೆಯಲಾಗುತ್ತದೆ. ಋತುಗಳು ಏಕಾಗುತ್ತವೆ ಎಂದು ಅರ್ಥೈಸಲು ಭೂಮಿಯನ್ನು ಎರಡು ಹೋಳುಗಳನ್ನಾಗಿ ವಿಭಜಿಸಿಕೊಳ್ಳಲಾಗುತ್ತದೆ. ಭೂಮಧ್ಯರೇಖೆಗೆ ಉತ್ತರದಿಕ್ಕಿನಲ್ಲಿರುವುದು ಉತ್ತರಗೋಳಾರ್ಧ (Northern Hemisphere). ದಕ್ಷಿಣದಲ್ಲಿರುವುದು ದಕ್ಷಿಣಗೋಳಾರ್ಧ (Southern Hemisphere). ಭೂಮಿಯ ಅಕ್ಷಕಾಂತಿವೃತ್ತಕ್ಕೆ ಓರೆಯಾಗಿರುವ ಕಾರಣ, ಆರು ತಿಂಗಳ ಅವಧಿಯಲ್ಲಿ ಭೂಮಿಯ ಉತ್ತರಗೋಳಾರ್ಧ ಸೂರ್ಯನಿಗೆ ದಕ್ಷಿಣಗೋಳಾರ್ಧಕ್ಕಿಂತ ಸಮೀಪದಲ್ಲಿ ಇರುತ್ತದೆ. ಆಗ ಉತ್ತರಗೋಳಾರ್ಧದಲ್ಲಿರುವವರಿಗೆ ಬೇಸಿಗೆಕಾಲವಾಗುತ್ತದೆ.

ದಕ್ಷಿಣಗೋಳಾರ್ಧದಲ್ಲಿರುವವರಿಗೆ ಶೀತಕಾಲವಾಗಿರುತ್ತದೆ. ಮತ್ತೆ ಭೂಮಿಯು ಸೂರ್ಯನ ಸುತ್ತ ಕ್ರಮಿಸುತ್ತಾ ಮೇಲೆ ಬಂದಾಗ ದಕ್ಷಿಣಗೋಳಾರ್ಧ ಸೂರ್ಯನಿಗೆ ಸಮೀಪವಾಗುತ್ತದೆ. ಉತ್ತರಗೋಳಾರ್ಧ ದೂರವಾಗುತ್ತದೆ. ಈಗ ದಕ್ಷಿಣಗೋಳಾರ್ಧದಲ್ಲಿರುವವರಿಗೆ ಬೇಸಿಗೆ ಕಾಲ. ಉಳಿದವರಿಗೆ ಶೀತಕಾಲ. ಹೀಗೆ ಓರೆಯಾಗಿ ಸೂರ್ಯನನ್ನು ಸುತ್ತುವುದರಿಂದಲೇ ಭೂಮಿಯಮೇಲೆ ವಸಂತ, ಗ್ರೀಷ್ಮ, ವರ್ಷ, ಶರದ್, ಹೇಮಂತ, ಶಿಶಿರವೆಂಬ ಆರು ಋತುಗಳುಂಟಾಗುತ್ತವೆ. ಒಂದು ವರ್ಷದಲ್ಲಿ ಋತುಗಳು ನಿರ್ದಿಷ್ಟಕಾಲದಲ್ಲಿ ಒಂದರ ನಂತರ ಒಂದರಂತೆ ಪುನರಾವರ್ತನೆಗೊಳ್ಳುತ್ತವೆ. ಭಾರತೀಯ ಪದ್ಧತಿಯ ಋತುಗಳಿಗೂ ಆಂಗ್ಲ ಪದ್ಧತಿಯ ಋತುಗಳಿಗೂ ವ್ಯತ್ಯಾಸವಿದೆ. ನಮ್ಮ ಪ್ರಾಚೀನಪದ್ಧತಿಯು ಸೌರಮಾಸವನ್ನು ಅನುಸರಿಸುತ್ತಿದ್ದು ಕರ್ಕಾಟಕ ಮಾಸದಿಂದ ಧನುರ್ಮಾಸದವರೆಗೆ ದಕ್ಷಿಣಾಯನವೂ, ಮಕರಮಾಸದಿಂದ ಮಿಥುನಮಾಸದ ತನಕದ ೬ ತಿಂಗಳು ಉತ್ತರಾಯಣವೂ ಆಗಿರುತ್ತದೆ. ಆದ್ದರಿಂದಲೇ ಕರ್ಕಾಟಕ ಸಂಕ್ರಮಣ (ಸಾಮಾನ್ಯ ಜುಲೈ ೧೫ ದಂದು) ದಕ್ಷಿಣಾಯನ ಪುಣ್ಯಕಾಲವು ಮಕರ ಸಂಕ್ರಮಣ (ಸಾಮಾನ್ಯ ಜನವರಿ ೧೪) ದಂದು ಉತ್ತರಾಯಣ ಪುಣ್ಯಕಾಲವು ಇರುತ್ತದೆ. ನವೀನ ದೃಗ್ಗಣಿತದ ಪ್ರಕಾರ ಡಿಸೆಂಬರ್ ೨೨ ನೆಯ ದಿನಾಂಕದಂದು ಉತ್ತರಾಯಣವು ಪ್ರಾರಂಭವಾದರೆ ಜೂನ್ ೨೧ ರಂದು ದಕ್ಷಿಣಾಯನವು ಆರಂಭವಾಗುತ್ತದೆ.

| ಸಂ | ಮಾಸಗಳು | | ಋತು | ಅಧಿಪತಿ |
|---|---|---|---|---|
| ೧ | ಚೈತ್ರ | ವೈಶಾಖ | ವಸಂತ | ರುದ್ರ |
| ೨ | ಜ್ಯೇಷ್ಠ | ಆಷಾಢ | ಗ್ರೀಷ್ಮ | ಮಿತ್ರಾವರುಣ |
| ೩ | ಶ್ರಾವಣ | ಭಾದ್ರಪದ | ವರ್ಷ | ಪುರುಷ |
| ೪ | ಆಶ್ವೀನ | ಕಾರ್ತಿಕ | ಶರದ್ | ವಿಶ್ವೇದೇವ |
| ೫ | ಮಾರ್ಗಶೀರ್ಷ | ಪೌಷ | ಹೇಮಂತ | ಶ್ರೀದೇವಿ |
| 6 | ಮಾಘ | ಫಾಲ್ಗುಣ | ಶಿಶಿರ | ಆಪಃ |
| ಉತ್ತರಾಯಣದ ಅಧಿಪತಿಗಳು - ದೇವತೆಗಳು | | | ದಕ್ಷಿಣಾಯನದ ಅಧಿಪತಿಗಳು - ಪಿತೃಗಳು | |

**13. ಮಾಸ** - ಈ ಕಾಲಮಾನವು ಚಂದ್ರನ ಸ್ವಾಭಾವಿಕ ಪರಿಭ್ರಮಣಾಕಾಲಕ್ಕೆ ಸಂಬಂಧಿಸಿದೆ. ಮಾಸದ ಸಾಂಪ್ರದಾಯಿಕ ಪರಿಕಲ್ಪನೆಯು ಚಂದ್ರನ ಕಲೆಗಳ ಆವರ್ತದಿಂದ ಹುಟ್ಟಿತು. ಸಾಮಾನ್ಯವಾಗಿ 30 ದಿನಗಳ ಕಾಲಮಾನಕ್ಕೆ ಮಾಸ ಎಂದು ಹೆಸರು. ವರ್ಷದಲ್ಲಿ, ಕೆಲವು ನಕ್ಷತ್ರದ ಹೆಸರಿನ ಮೂಲಕ, ಚಾಂದ್ರಮಾನದ ಹನ್ನೆರಡು (೧೨) ಮಾಸಗಳನ್ನು ಈ ವಿಧವಾಗಿ ಗುರುತಿಸುವುದುಂಟು.

| ಸಂ | ಮಾಸ | ಮಾಸನಿಯಾಮಕ | ನಕ್ಷತ್ರ |
|---|---|---|---|
| ೧ | ಚೈತ್ರ | ಪದ್ಮೀವಿಷ್ಣುಃ | ಚಿತ್ರಾ/ಚಿತ್ತಾ |
| ೨ | ವೈಶಾಖ | ಕಮಲಾಲಯ ಮಧುಸೂದನ | ವಿಶಾಖಾ |
| ೩ | ಜ್ಯೇಷ್ಠ | ರಮಾತ್ರಿವಿಕ್ರಮ | ಜ್ಯೇಷ್ಠಾ |

| | | | |
|---|---|---|---|
| ೪ | ಆಷಾಢ | ವೃಷಾಕಪಿವಾಮನ | ಆಷಾಢಾ |
| ೫ | ಶ್ರಾವಣ | ಧನ್ಯಾಶ್ರೀಧರ | ಶ್ರವಣಾ |
| ೬ | ಭಾದ್ರಪದ | ಬುದ್ಧಿಹೃಷೀಕೇಶ | ಭದ್ರಾ |
| ೭ | ಆಶ್ವೀನ | ಯಜ್ಞಾಪದ್ಮನಾಭ | ಅಶ್ವಿನೀ |
| ೮ | ಕಾರ್ತಿಕ | ಇಂದಿರಾದಾಮೋದರ | ಕೃತ್ತಿಕಾ |
| ೯ | ಮಾರ್ಗಶೀರ್ಷ | ಶ್ರೀಕೇಶವ | ಮೃಗಶಿರಾ |
| ೧೦ | ಪೌಷ | ಲಕ್ಷ್ಮೀನಾರಾಯಣ | ಪುಷ್ಯ |
| ೧೧ | ಮಾಘ | ಕಮಲಾಮಾಧವ | ಮಘಾ |
| ೧೨ | ಫಾಲ್ಗುಣ | ಪದ್ಮಾಗೋವಿಂದ | ಫಾಲ್ಗುಣೀ |

ಚಂದ್ರನು ಆ ಆ ಮಾಸದ ಹುಣ್ಣಿಮೆಗಳಲ್ಲಿ ಕ್ರಮವಾಗಿ ಈ ನಕ್ಷತ್ರದಲ್ಲೇ ಇರುತ್ತಾನೆ. ಇದರ ನಿಮಿತ್ತವಾಗಿ ಚಿತ್ರಾನಕ್ಷತ್ರಕ್ಕೆ ಸಂಬಂಧಪಟ್ಟ ಮಾಸ ಚೈತ್ರಮಾಸ ಎಂದಾಗುವುದು.

**14. ಪಕ್ಷ -** ಮಾಸದ ಅರ್ಧ ಅವಧಿ (15ದಿನಗಳ) ಕಾಲಮಾನಕ್ಕೆ ಪಕ್ಷ ಎಂದು ಹೆಸರು. ಪ್ರತಿಪದದಿಂದ ಹುಣ್ಣಿಮೆಯವರೆಗೆ ಶುಕ್ಲಪಕ್ಷವೆಂದು, ನಂತರ ಪ್ರತಿಪದದಿಂದ ಅಮಾವಾಸ್ಯೆಯವರೆಗೆ ಕೃಷ್ಣಪಕ್ಷ ಎಂದು ಹೆಸರು.




**15. ತಿಥಿ -** ತಿಥಿಯು ಒಂದು ಚಾಂದ್ರದಿನ, ಅಥವಾ ಚಂದ್ರ ಮತ್ತು ಸೂರ್ಯರ ನಡುವಿನ ರೇಖಾಂಶ ಕೋನವು 12°ಯಷ್ಟು ಹೆಚ್ಚಲು ತೆಗೆದುಕೊಳ್ಳುವ ಸಮಯ. ಈ ತಿಥಿಯು ಚಂದ್ರನ ಒಂದೊಂದು ಕಲೆಯನ್ನು ವರ್ಧನೆ ಅಥವಾ ಕ್ಷಯಗೊಳಿಸುತ್ತದೆ. ತಿಥಿಗಳು ಶುಕ್ಲಪಕ್ಷದಲ್ಲಿ ಪ್ರತಿಪದದಿಂದ ಹುಣ್ಣಿಮೆವರೆಗೆ 15 ಹಾಗೂ ಕೃಷ್ಣಪಕ್ಷದಲ್ಲಿ ಪ್ರತಿಪದದಿಂದ ಅಮಾವಾಸ್ಯೆಯವರೆಗೆ 15 ಇರುತ್ತವೆ. ಪ್ರತಿಪದದಿಂದ ಚತುರ್ದಶೀ ಹಾಗು ಹುಣ್ಣಿಮೆ ಅಮಾವಾಸ್ಯೆಗಳು ಸೇರಿ ಒಟ್ಟು 16 ತಿಥಿಗಳು. ತಿಥಿಯು ಆ ದಿನದಲ್ಲಿ ನಡೆಸಬಹುದಾದ ಕರ್ಮಗಳನ್ನು ನಿರೂಪಿಸುತ್ತದೆ. ಉದಾ. ಏಕಾದಶೀ ತಿಥಿ ಉಪವಾಸವನ್ನು ಮಾಡಬೇಕು ಇತ್ಯಾದಿ. ಪ್ರತಿನಿತ್ಯ ತಿಳಿಯಬೇಕಾದ ಪಂಚಾಂಗಗಳಲ್ಲಿ ಇದು ಮೊದಲನೆಯದು.

**16. ವಾರ -** ವಾರವು ಕ್ರಮಾಗತ ಏಳುದಿನಗಳ ಕಾಲಾವಧಿ (week). ಈ ದಿವಸ ನಾಮಗಳು ಅನುಕ್ರಮವಾಗಿ ಭಾನುವಾರ, ಸೋಮವಾರ, ಮಂಗಳವಾರ, ಬುಧವಾರ, ಗುರುವಾರ, ಶುಕ್ರವಾರ, ಶನಿವಾರ. ವಾರವು ಸತತ ಏಕದಿಶೆಯಲ್ಲಿ ಪ್ರವಹಿಸುತ್ತಿರುವ ಕಾಲವನ್ನು ಅಳೆಯಲು ಒಂದು ಮಾಪಕ. ಪ್ರತಿನಿತ್ಯ ತಿಳಿಯಬೇಕಾದ ಪಂಚಾಂಗಗಳಲ್ಲಿ ಇದು ಎರಡನೆಯದು.

**17. ನಕ್ಷತ್ರ -** ಆಕಾಶದಲ್ಲಿ ಮಿನುಗುವ ತಾರೆಗಳ ಮಧ್ಯದಲ್ಲಿ ಅಶ್ವಿನ್ಯಾದಿ 27 ನಕ್ಷತ್ರಗಳು ಪ್ರಧಾನ. ಚಂದ್ರನು ಸುಮಾರು ದಿನಕ್ಕೊಂದು ನಕ್ಷತ್ರದಂತೆ ಈ ಇಪ್ಪತ್ತೇಳು ಪ್ರಧಾನವಾದ

ನಕ್ಷತ್ರಗಳನ್ನು ಕ್ರಮಿಸುತ್ತಾನೆ. ಪ್ರತಿನಿತ್ಯ ತಿಳಿಯಬೇಕಾದ ಪಂಚಾಂಗಗಳಲ್ಲಿ ಇದು ಮೂರನೆಯದು. ನಕ್ಷತ್ರಗಳು ಇಪ್ಪತ್ತೇಳು (೨೭). ಅವು -

೧. ಅಶ್ವಿನೀ ೨. ಭರಣೀ ೩. ಕೃತ್ತಿಕಾ ೪. ರೋಹಿಣೀ ೫. ಮೃಗಶಿರಾ ೬. ಆರ್ದ್ರಾ ೭. ಪುನರ್ವಸು ೮. ಪುಷ್ಯಾ ೯. ಆಶ್ಲೇಷಾ ೧೦. ಮಘಾ ೧೧. ಪೂರ್ವಾಫಾಲ್ಗುಣೀ ೧೨. ಉತ್ತರಾಫಾಲ್ಗುಣೀ ೧೩. ಹಸ್ತಾ ೧೪. ಚಿತ್ತಾ ೧೫. ಸ್ವಾತೀ ೧೬. ವಿಶಾಖಾ ೧೭.ಅನುರಾಧಾ ೧೮. ಜ್ಯೇಷ್ಠಾ ೧೯. ಮೂಲಾ ೨೦.ಪೂರ್ವಾಷಾಢಾ ೨೧.ಉತ್ತರಾಷಾಢಾ ೨೨.ಶ್ರವಣಾ ೨೩.ಧನಿಷ್ಠಾ ೨೪.ಶತಭಿಷಾ ೨೫.ಪೂರ್ವಾಭಾದ್ರಾ ೨೬. ಉತ್ತರಾಭಾದ್ರಾ ೨೭. ರೇವತೀ

**18. ಯೋಗ -** ಸೂರ್ಯ-ಚಂದ್ರರ ಮಧ್ಯ ಇರುವ ಒಂದು ವಿಶಿಷ್ಟವಾದ ದೂರದ ಆಕ್ಷಿಕ ಅಳತೆಗೆ ಯೋಗವೆಂದು ಹೆಸರು. ಪ್ರತಿನಿತ್ಯ ತಿಳಿಯಬೇಕಾದ ಪಂಚಾಂಗಗಳಲ್ಲಿ ಇದು ನಾಲ್ಕನೆಯದು. ಯೋಗಗಳು ಒಟ್ಟು ೨೭. ಅವು: ೧. ವಿಷ್ಕಂಭ ೨. ಪ್ರೀತಿ ೩. ಆಯುಷ್ಮಾನ್ ೪.ಸೌಭಾಗ್ಯ ೫.ಶೋಭನ ೬.ಅತಿಗಂಡ ೭.ಸುಕರ್ಮ ೮.ಧೃತಿ ೯.ಶೂಲ ೧೦. ಗಂಡ ೧೧. ವೃದ್ಧಿ ೧೨. ಧ್ರುವ ೧೩. ವ್ಯಾಘಾತ ೧೪. ಹರ್ಷಣ ೧೫. ವಜ್ರ ೧೬.ಸಿದ್ಧಿ ೧೭. ವ್ಯತೀಪಾತ ೧೮. ವರಿಯಾನ್ ೧೯.ಪರಿಘ ೨೦.ಶಿವ ೨೧.ಸಿದ್ಧ ೨೨. ಸಾಧ್ಯ ೨೩. ಶುಭ ೨೪. ಶುಕ್ಲ ೨೫.ಬ್ರಹ್ಮ ೨೬. ಐಂದ್ರ ೨೭. ವೈಧೃತಿ

**19. ಕರಣ -** ಒಂದು ತಿಥಿಯ ಅರ್ಧಭಾಗಕ್ಕೆ ಕರಣವೆಂದು ಹೆಸರು. ಪ್ರತಿನಿತ್ಯ ತಿಳಿಯಬೇಕಾದ ಪಂಚಾಂಗಗಳಲ್ಲಿ ಇದು ಕೊನೆಯದು.

ಹೀಗೆ ತಿಥಿ, ವಾರ, ನಕ್ಷತ್ರ, ಯೋಗ, ಕರಣ ಈ ಐದನ್ನು ಪಂಚಾಂಗವೆನ್ನುತ್ತಾರೆ. ದಿನನಿತ್ಯ ಇವುಗಳ ಸ್ಮರಣೆಯಿಂದ ಆಗುವ ಫಲವನ್ನು ಈ ಕೆಳಗಿನ ಶ್ಲೋಕದಲ್ಲಿ ತಿಳಿಸಿದ್ದಾರೆ.

**ತಿಥೇಶ್ಚ ಶ್ರಿಯಮಾಪ್ನೋತಿ ವಾರಾದಾಯುಷ್ಯವರ್ಧನಮ್ ।**

**ನಕ್ಷತ್ರಾತ್ ಹರತೇ ಪಾಪಂ ಯೋಗಾದ್ರೋಗನಿವಾರಣಮ್ ।**

**ಕರಣಾತ್ ಕಾರ್ಯಸಿದ್ಧಿಃ ಸ್ಯಾತ್ ಪಂಚಾಂಗಫಲಮುತ್ತಮಮ್ ।।**

ಈ ಸ್ಮೃತಿವಾಕ್ಯವು ತಿಥಿ, ವಾರ, ನಕ್ಷತ್ರ, ಯೋಗ, ಕರಣಗಳೆಂಬ ಪಂಚಾಂಗವನ್ನು ಪಠಿಸುವುದರಿಂದ ಕ್ರಮವಾಗಿ ಸಂಪತ್ತು, ಆಯುಷ್ಯ, ಪಾಪಹಾನಿ, ರೋಗನಿವೃತ್ತಿ ಮತ್ತು ಕಾರ್ಯಸಿದ್ಧಿ ಎಂಬ ಫಲವನ್ನು ಹೇಳಿದೆ. ಅಲ್ಲದೇ -

**ಪಂಚಾಂಗಂ ಪಠತೇ ನಿತ್ಯಂ ಶ್ರೋತುಮಿಚ್ಛಂತಿ ಯೇ ನರಾಃ ।**
**ಅಗ್ನಿಷ್ಟೋಮಫಲಂ ತೇಷಾಂ ಗಂಗಾಸ್ನಾನಂ ದಿನೇದಿನೇ ।।**

ಈ ವಾಕ್ಯವು ದಿನದಿನವೂ ಪಂಚಾಂಗವನ್ನು ಪಠಿಸುವವರಿಗೆ ಮತ್ತು ಅದನ್ನು ಕೇಳಲು ಇಚ್ಛಿಸುವ ಸಜ್ಜನರಿಗೆ ಅಗ್ನಿಷ್ಟೋಮಯಾಗದ ಮತ್ತು ಗಂಗಾಸ್ನಾನದ ಫಲವನ್ನು ಹೇಳಿದೆ. ತಿಥಿ ವಾರ ಮೊದಲಾದ ಪಂಚಾಂಗದ ಅರಿವಿಲ್ಲದ ಮನುಷ್ಯ ಕೋಡುಗಳಿಲ್ಲದ ಪಶುವೆಂದೂ ಜರೆದಿದ್ದಾರೆ ಪ್ರಾಚೀನರು. ನಾವು ಪಶುಗಳಾಗದಿರೋಣ. ಗಂಗಾಸ್ನಾನದಂತಹ ಪುಣ್ಯಫಲ ವನ್ನು ಪಡೆಯೋಣ. ನಿತ್ಯದಲ್ಲಿಯೂ ತಪ್ಪದೇ ಪಂಚಾಂಗಗಳನ್ನು ಸ್ಮರಿಸೋಣ !!! ..ಸಶೇಷ...

# ಶ್ರೀಮನ್ ಮಧ್ವಾಚಾರ್ಯರ ಕಾಲನಿರ್ಣಯ - ೫

✍ ಶ್ರೀ ಆನಂದತೀರ್ಥ ವಡವಿ

ಆಚಾರ್ಯರ ಅದೃಶ್ಯಕಾಲ ತಿಳಿಯಲು ಶ್ರೀಮದಾನಂದತೀರ್ಥರನ್ನುಲ್ಲೇಖಿಸಿ ಹೊರಡಿಸಿರುವ ಶ್ರೀನರಹರಿತೀರ್ಥರ ಶಾಸನಗಳು ನಿರವಕಾಶ ಪ್ರಮಾಣಗಳೆನ್ನುವ ವಿಚಾರ ಕುರಿತ ವಿಮರ್ಶೆ :-

ಮೇಲ್ಕಾಣಿಸಿದ ಚರ್ಚೆ ಆರಂಭಿಸುವುದಕ್ಕೂ ಮುನ್ನ ಶ್ರೀನರಹರಿತೀರ್ಥರು ಶ್ರೀಮದಾಚಾರ್ಯರ ಸಾಕ್ಷಾತ್ ಆಶ್ರಮಶಿಷ್ಯರೆನ್ನುವುದನ್ನು ಕೆಳಗೆ ತೋರಿದ ಆಧಾರಗಳಲ್ಲಿ ಖಚಿತಪಡಿಸಿಕೊಳ್ಳೋಣ.

ಅ) ಶ್ರೀನರಹರಿತೀರ್ಥರು ಕ್ರಿ.ಶ.1264ರಷ್ಟು ಮುಂಚಿತವಾಗಿಯೇ ಸನ್ಯಾಸಾಶ್ರಮ ಸ್ವೀಕರಿಸಿದ್ದರೆಂದು ಅವರ ಶಿಲಾಶಾಸನಗಳಾದ - No.1251 & No.1252 of SII-V ಗಳಿಂದ ತಿಳಿಯುತ್ತದೆ.

ಇನ್ನು ಶ್ರೀಮದಾನಂದತೀರ್ಥರ ಅನುಗ್ರಹ ಮತ್ತು ಆದೇಶಾನುಸಾರವಾಗಿಯೇ ಕಲಿಂಗದಲ್ಲಿ ರಾಜ್ಯರಕ್ಷಣೆಯ ಕರ್ತವ್ಯವನ್ನು ವಹಿಸಿಕೊಳ್ಳುವುದಾಗಿ ಶ್ರೀನರಹರಿ ತೀರ್ಥರು ತಮ್ಮ ಕ್ರಿ.ಶ.1281ರ ಶಿಲಾಶಾಸನದಲ್ಲಿ ಅತ್ಯಂತ ವಿಸ್ತಾರವಾಗಿ ಸ್ಪಷ್ಟಪಡಿಸಿದ್ದಾರೆ (No.25,E.I. VI,1900-01). ಇದರಲ್ಲಿ ಶ್ರೀಪುರುಷೋತ್ತಮತೀರ್ಥರನ್ನು (ಅಚ್ಯುತ- ಪ್ರೇಕ್ಷತೀರ್ಥರನ್ನು) ಹಾಗೂ ಶ್ರೀಆನಂದತೀರ್ಥರನ್ನು ಮಾತ್ರ ಕ್ರಮವಾಗಿ ಉಲ್ಲೇಖಿಸಿದ್ದು, ತಮ್ಮ ಪರಮ ಗುರುಗಳು ಹಾಗೂ ಸಾಕ್ಷಾತ್ ಆಶ್ರಮಗುರುಗಳು ಯಾರೆನ್ನುವುದನ್ನು ಆ ಮೂಲಕ ಸ್ಪಷ್ಟಪಡಿಸಿದ್ದಾರೆ.

ಆ) ತಾವು ಶ್ರೀಮದಾನಂದತೀರ್ಥರ ಸಾಕ್ಷಾತ್ ಶಿಷ್ಯರೆಂದು ಸ್ವತಃ ಕಲಿಂಗದ ಶ್ರೀನರಹರಿತೀರ್ಥರೇ ತಮ್ಮ ಕ್ರಿ.ಶ.1294ರ ಶಿಲಾಶಾಸನದಲ್ಲಿ ಕೆಳಕಂಡಂತೆ ಸ್ಪಷ್ಟಪಡಿಸಿದ್ದಾರೆ.

''...ಶ್ರೀಮದಾನಂದತೀರ್ಥ ಪೂಜ್ಯಪಾದಾಚಾರ್ಯ ಶಿಷ್ಯುಲೈನ ಶ್ರೀನರಹರಿ ತೀರ್ಥ ಶ್ರೀಪಾದಾಲು ಶ್ರೀಕೂರ್ಮನಾಥುನಿ ನಗರಿಯಂದ್ದು ಶ್ರೀರಾಮನಾಥುನಿಕಿ ಸೀತಾಪರಮೇಶ್ವರಿನ್ನಿ ಶ್ರೀಲಕ್ಷ್ಮಣದೇವರನ್ನು ಪ್ರತಿಷ್ಠಿಂಚಿ.....'' (No.1172, SII–V).

ಈ ಎಲ್ಲಾ ಶಾಸನೀಯ ವಿಚಾರ ವಿಮರ್ಶೆಗಳನ್ನು 'ಶ್ರೀನರಹರಿತೀರ್ಥರ ಕಲಿಂಗದಲ್ಲಿನ ರಾಜಪ್ರತಿನಿಧಿತ್ವದ ಅವಧಿ (ಕ್ರಿ.ಶ. 1281 ಕ್ರಿ.ಶ.1293)' ಎನ್ನುವ ಲೇಖನದಲ್ಲಿ ಈ ಮೊದಲೇ ನೋಡಿದ್ದೇವೆ.

ಇ) ಇನ್ನು ತಮ್ಮ ಯಮಕಭಾರತ ಟಿಪ್ಪಣಿಯಲ್ಲಿ ಶ್ರೀಪದ್ಮನಾಭತೀರ್ಥರನ್ನು ಗುರುಗಳೆಂದು ನಮಸ್ಕರಿಸಿದ್ದಾರೆಯಾದ್ದರಿಂದ ಕಲಿಂಗದ ಶ್ರೀನರಹರಿತೀರ್ಥರು ಆಚಾರ್ಯರ ಸಾಕ್ಷಾತ್ ಶಿಷ್ಯರಲ್ಲ ಎಂದು ವಾದಿಸುವುದಾದರೆ, ಶ್ರೀನರಹರಿತೀರ್ಥರ ಶಿಲಾಶಾಸನಗಳೇ ಅದಕ್ಕೆ ಉತ್ತರಿಸುತ್ತವೆ.

ಅಷ್ಟೇ ಅಲ್ಲ - ಒಟ್ಟು ಮೂವತ್ತು ವರ್ಷಗಳ ಅವಧಿಯಲ್ಲಿ ದಾಖಲಿಸಿರುವ ತಮ್ಮ ಒಂಬತ್ತು ಶಾಸನಗಳ ಪೈಕಿ ಯಾವ ಶಾಸನದಲ್ಲಿಯೂ ಶ್ರೀಪದ್ಮನಾಭತೀರ್ಥರನ್ನು ಉಲ್ಲೇಖಿಸದಿರುವುದರಿಂದ ಹಾಗೂ ತಾವು ಆಚಾರ್ಯರ ಶಿಷ್ಯರೆಂದೇ ಶ್ರೀನರಹರಿ

ತೀರ್ಥರು ಪ್ರಮುಖ ಎರಡು ಶಾಸನಗಳಲ್ಲಿ ಒಟ್ಟು ಮೂರು ಬಾರಿ ಉಲ್ಲೇಖಿಸಿದ್ದರಿಂದ, ಅವರು ಆಚಾರ್ಯರ ಸಾಕ್ಷಾತ್ ಆಶ್ರಮಶಿಷ್ಯರೆನ್ನುವುದು ನಿರವಕಾಶವಾಗಿ ಸಿದ್ಧವಾಗುತ್ತದೆ ಹಾಗೂ ಇದಕ್ಕಾಗಿ ಬೇರಾವ ಪ್ರಮಾಣಗಳ ಅವಶ್ಯಕತೆಯೇ ಇಲ್ಲ.

ಹೀಗಾಗಿ ಆಚಾರ್ಯರ ಪೀಠವನ್ನು ಶ್ರೀಪದ್ಮನಾಭತೀರ್ಥರ ನಂತರದಲ್ಲಿ ಶ್ರೀನರಹರಿತೀರ್ಥರು ಅಲಂಕರಿಸಿದರು ಎಂದು ಅವರ ಯಮಕಭಾರತ ಟಿಪ್ಪಣಿಯಿಂದ ತಿಳಿಯುತ್ತದೆಯಾಗಲೀ, ಅವರು ಆಚಾರ್ಯರ ಸಾಕ್ಷಾತ್ ಆಶ್ರಮಶಿಷ್ಯರಲ್ಲ ಎಂದು ಸರ್ವಥಾ ಅಲ್ಲ.

ಈ) ಇಷ್ಟೇ ಅಲ್ಲ - ಶ್ರೀಮಾಧವತೀರ್ಥರು ಮತ್ತು ಶ್ರೀಅಕ್ಷೋಭ್ಯತೀರ್ಥರು ಕೂಡ ಆಚಾರ್ಯರ ಸಾಕ್ಷಾತ್ ಆಶ್ರಮಶಿಷ್ಯರೆಂದೇ ಶ್ರೀರಘುನಾಥತೀರ್ಥರು, ಶ್ರೀವಿಭುದೇಂದ್ರತೀರ್ಥರೊಡನೆ ಸಮಾಲೋಚಿಸಿ ದಾಖಲಿಸಿರುವ ಪ್ರಾಚೀನ ಹಸ್ತಪ್ರತಿಗಳ ಆಧಾರದಲ್ಲಿ ಶ್ರೀಸತ್ಯನಿಧಿತೀರ್ಥರ ಕಾಲದಲ್ಲಿ ರಚಿತವಾಗಿರುವ ಗುರುಚರ್ಯಗ್ರಂಥವು ದಾಖಲಿಸುತ್ತದೆ.

(Ref.1 – Page No.194 & 229 of History of Dvaita Vedanta and its literature by Dr. B.N.K. Sharma, 2000 Edition; Ref.2 – Page 61 of My Further Ten Research Papers – 2002 by Dr. B.N.K. Sharma)

ಉ) ಸ್ವತಃ ಶ್ರೀಮಜ್ಜಯತೀರ್ಥರು ತಮ್ಮ ನ್ಯಾಯವಿವರಣ ಟೀಕೆಯಲ್ಲಿ ಆಚಾರ್ಯರನ್ನು ತಮ್ಮ ಪರಮಗುರುಗಳೆಂದೇ ಹೀಗೆ ನಮಸ್ಕರಿಸಿದ್ದಾರೆ -

**ನಮಾಮಿ ಶ್ರೀಮದಾನಂದತೀರ್ಥಾಚಾರ್ಯಂ ಪರಂ ಗುರುಮ್ ।**
**ಯಸ್ಯವಾಣೀ ಕೃಪಾಣೀಯಂ ನಿಕೃಂತತಿ ಭವಾಟವೀಮ್ ॥**

ಹಾಗೇಯೇ, ಪ್ರಮೇಯದೀಪಿಕಾ ಗ್ರಂಥದಲ್ಲಿ ಕೂಡ ಗುರುಗಳ ಅನುಕ್ರಮಣಿಕೆ ಯನ್ನು ಹೇಳುವಾಗ, ಶ್ರೀಮದಾನಂದತೀರ್ಥರನ್ನು ತಮ್ಮ ಪರಮಗುರುಗಳೆಂದೇ ಶ್ರೀಮಜ್ಜಯತೀರ್ಥರು ಕೆಳಕಂಡಂತೆ ಸ್ಪಷ್ಟವಾಗಿ ದಾಖಲಿಸಿದ್ದಾರೆ -

''ಮುನಿಕುಲತಿಲಕಂ ಚ ಪೂರ್ಣಬೋಧಂ ಗುರುಮಪಿ ಪರಮಂ ಗುರುಂ ಚ ಮೇ ವಂದೇ ॥'' ಇದರಿಂದ ಶ್ರೀಮದಕ್ಷೋಭ್ಯತೀರ್ಥರು ಆಚಾರ್ಯರ ಸಾಕ್ಷಾತ್ ಆಶ್ರಮಶಿಷ್ಯರೆಂದೇ ನಿರವಕಾಶವಾಗಿ ಸ್ಥಾಪಿತವಾಗುತ್ತದೆ.

ಊ) ಇಲ್ಲಿ ವಿಚಾರಣೀಯ ವಿಷಯವೊಂದಿದೆ - ಒಂದುವೇಳೆ ಸಂಸ್ಥಾನವೊಂದರ ಯತಿಗಳೊಬ್ಬರು ಬೇರೆ ಸಂಸ್ಥಾನಕ್ಕೆ ಪರಿವರ್ತಿತರಾಗುವಾಗ ಅಥವಾ ಯತಿಯೊಬ್ಬರಿಗೆ ತಮ್ಮ ಮೂಲಸಂಸ್ಥಾನದ ಅನುಕ್ರಮಣಿಕೆಯಲ್ಲಿ ವ್ಯತ್ಯಾಸವಾದಾಗ ಅಲ್ಲಿನ ವರ್ತಮಾನ ಸಂಸ್ಥಾನಾಧಿಪತಿಗಳಿಂದಲೇ ಪುನಃ ದೀಕ್ಷೆ ಪಡೆದು, ದೀಕ್ಷೆ ಕೊಟ್ಟವರ ಕ್ರಮಬದ್ಧ ಉತ್ತರಾಧಿ ಕಾರಿಗಳಾದ ಇತಿಹಾಸವನ್ನು ಶ್ರೀವಿಜಯಿಂದ್ರತೀರ್ಥರ ಹಾಗೂ ಶ್ರೀಸತ್ಯಪ್ರಿಯತೀರ್ಥರ ಚರಿತ್ರೆಗಳಲ್ಲಿ ನೋಡುತ್ತೇವೆ.

ಆದರೆ, ಶ್ರೀನರಹರಿತೀರ್ಥರು, ಶ್ರೀಮಾಧವತೀರ್ಥರು ಹಾಗೂ ಶ್ರೀಅಕ್ಷೋಭ್ಯ ತೀರ್ಥರು ಯತ್ಯಾಶ್ರಮ ಜ್ಯೇಷ್ಠತೆಯಲ್ಲಿ ಅವರೋಹಣ ಕ್ರಮದಲ್ಲಿದ್ದು ಅನುಕ್ರಮಣಿಕಾ ರೀತಿಯಲ್ಲಿ ವ್ಯತ್ಯಾಸವಾಗದಂತೆ ಶ್ರೀಮದಾಚಾರ್ಯರ ಪೀಠಕ್ಕೆ ಅವರ ಶಿಷ್ಯರಲ್ಲಿಯೇ

ವೇದಪ್ರವಚನಾಚಾರ್ಯರೆಂದು ಶ್ರೀಸುಮಧ್ವವಿಜಯವೇ ಕೊಂಡಾಡಿರುವ ಶ್ರೀಪದ್ಮನಾಭತೀರ್ಥರ ನಂತರದಲ್ಲಿ ಮಹಾಸಂಸ್ಥಾನಾಧಿಪತಿಗಳಾಗಿರುವುದಕ್ಕೆ ಮತ್ತು ಈ ಮೂವರೂ ಶ್ರೀಮದಾಚಾರ್ಯರ ಸಾಕ್ಷಾತ್ ಆಶ್ರಮಶಿಷ್ಯರೆನ್ನುವುದಕ್ಕೆ ಸಮರ್ಥನೀಯವಾಗಿ ಶ್ರೀ ನರಹರಿತೀರ್ಥರ ಶಾಸನಗಳು ಹಾಗೂ ಶ್ರೀಮಜ್ಜಯತೀರ್ಥರ ವಾಕ್ಯಗಳು ಸಾಕ್ಷಾತ್ ಪ್ರಮಾಣಗಳಾಗಿದ್ದರಿಂದ, ಮತ್ತು ಇದನ್ನೇ ಶ್ರೀರಘುನಾಥ ತೀರ್ಥರು ಶ್ರೀವಿಭುದೇಂದ್ರತೀರ್ಥರೊಡನೆ ಸಮಾಲೋಚಿಸಿ ದಾಖಲಿಸಿಟ್ಟಿದ್ದರಿಂದ ಅವುಗಳ ಬೆಳಕಿನಡಿಯಲ್ಲಿಯೇ ನಂತರದ ಯತಿಗಳ ಮತ್ತು ವಿದ್ವಾಂಸರ ಕೃತಿಗಳಾದ - ಶ್ರೀಮದ್ವಾದಿರಾಜರ ಸರಸಭಾರತೀವಿಲಾಸ ಹಾಗೂ ಏಕಾದಶೀನಿರ್ಣಯ, ಶ್ರೀರಘೂತ್ತಮತೀರ್ಥರ ನ್ಯಾಯವಿವರಣಭಾವಬೋಧ, ಶ್ರೀಜನಾರ್ದನಸೂರಿಗಳ ಶ್ರೀವಿದ್ಯಾಧೀಶವಿಜಯ, ಶ್ರೀಶ್ರೀನಿವಾಸಕವಿಗಳ ಶ್ರೀಸತ್ಯನಿಧಿವಿಲಾಸ ಹಾಗೂ ಶ್ರೀಕೃಷ್ಣಾಚಾರ್ಯ ಕಂಚಿಯವರ ಶ್ರೀಸತ್ಯಬೋಧವಿಜಯ ಮುಂತಾದವುಗಳನ್ನು ನೋಡಬೇಕೇ ಹೊರತು, ಈ ಮೂವರು ಶ್ರೀಮದಾಚಾರ್ಯರ ಸಾಕ್ಷಾತ್ ಆಶ್ರಮ ಶಿಷ್ಯರಲ್ಲ ಎನ್ನುವ ಅಭಿಪ್ರಾಯದಲ್ಲಿ ಸರ್ವಥಾ ಅಲ್ಲ.

ಸ್ವತಃ ಶ್ರೀಸುಮಧ್ವವಿಜಯವೇ ತಿಳುಸುವಂತೆ ಆಚಾರ್ಯರಿಗೆ ಅನ್ಯಾನ್ಯದೇಶಗಳ ಅನೇಕ ಯತಿಶಿಷ್ಯರಿದ್ದರು (ಯತೀಂದ್ರಾ ಬಹುದೇಶಜಾಃ 127/15) ಎನ್ನುವುದೇ ಇದಕ್ಕೆ ಇನ್ನೊಂದು ಪ್ರತ್ಯಕ್ಷ ಪ್ರಮಾಣ.

ಇದಕ್ಕೊಂದು ಸ್ಪಷ್ಟ ಉದಾಹರಣೆಯೆಂದರೆ, ಶ್ರೀರಾಘವೇಂದ್ರವಿಜಯ. ಗುರುಗಳಾದ (ಗಮನಿಸಿ-ಪರಮಗುರುಗಳಲ್ಲ) ಆಚಾರ್ಯರ ಆದೇಶದ ಮೇರೆಗೆ ಶ್ರೀನರಹರಿತೀರ್ಥರು (ಕಲಿಂಗದಲ್ಲಿ) ರಾಜ್ಯಭಾರ ಮಾಡಿ ನಂತರದಲ್ಲಿಯೇ ಶ್ರೀಮೂಲಸೀತಾರಾಮದೇವರುಗಳನ್ನು ತಂದು ಪೂರ್ಣಬೋಧರಿಗೆ ಒಪ್ಪಿಸಿದರೆಂದು ಸ್ಪಷ್ಟವಾಗಿ ಎರಡನೇ ಸರ್ಗದ ಏಳನೇ ಶ್ಲೋಕದಲ್ಲಿ ದಾಖಲಿಸಿದ್ದಾರೆ. ಹಾಗೆಯೇ, ಶ್ರೀಮಾಧವತೀರ್ಥರು ಮತ್ತು ಶ್ರೀಅಕ್ಷೋಭ್ಯತೀರ್ಥರು ಕೂಡ ಆಚಾರ್ಯರಿಂದಲೇ ಮಂತ್ರೋಪದೇಶ ಹಾಗೂ ದೇವರ ಪ್ರತಿಮೆಗಳನ್ನು ಪಡೆದರೆಂದು ಮುಂದಿನ ಶ್ಲೋಕಗಳಲ್ಲಿಯೇ ಶ್ರೀನಾರಾಯಣಾಚಾರ್ಯರು ದಾಖಲಿಸಿದ್ದಾರೆ.

ಈ ಪ್ರತಿಮೆಗಳಿರುವ ಪ್ರತ್ಯೇಕ ಮಠಗಳು ಅದ್ಯಾಪಿ ಬೆಳಗುತ್ತಿರುವುದು ಪ್ರತ್ಯಕ್ಷವಾಗಿಯೇ ಇದೆ. ಶ್ರೀನರಹರಿತೀರ್ಥರ ಪ್ರತ್ಯೇಕಮಠ ಸುಮಾರು ಕ್ರಿ.ಶ.1373ರ ವರೆಗೆ (ಮಾತ್ರ) ಸಿಂಹಾಚಲದಲ್ಲಿ ಸಕ್ರಿಯವಾಗಿದ್ದಿದ್ದು ಶಾಸನ ಸಂಖ್ಯೆ. 1025, SII-VI ರಿಂದ ತಿಳಿಯುತ್ತದೆ.

ಇಷ್ಟೆಲ್ಲಾ ಪ್ರಮಾಣಗಳಿಂದ - ಶ್ರೀನರಹರಿತೀರ್ಥರು, ಶ್ರೀಮಾಧವತೀರ್ಥರು ಹಾಗೂ ಶ್ರೀಅಕ್ಷೋಭ್ಯತೀರ್ಥರು ಆಚಾರ್ಯರ ಸಾಕ್ಷಾತ್ ಆಶ್ರಮಶಿಷ್ಯರೆನ್ನುವುದು ಹಾಗೂ ಹಂಸನಾಮಕನಿಂದ ಬಂದ, ಆಚಾರ್ಯರು ಅಲಂಕರಿಸಿದ ಪೀಠದಲ್ಲಿ ಶ್ರೀಪದ್ಮನಾಭತೀರ್ಥರ ನಂತರದಲ್ಲಿ ಅನುಕ್ರಮಣಿಕಾರೀತಿಯಲ್ಲಿ ಮುಂದುವರೆದು ನಂತರದಲ್ಲಿ ಆಚಾರ್ಯರ ಆಯ್ಕೆಯೇ ಆಗಿದ್ದ ಶ್ರೀಮಜ್ಜಯತೀರ್ಥರನ್ನು (''ಶ್ರೋತುಂ ತ್ವೇಕಾಗ್ರಬುದ್ಧ್ಯಾ ವೃಷಭತನುರಭೂತ್ ಶ್ರೀಮದಾನಂದತೀರ್ಥಾತ್''- ಅಣುಜಯತೀರ್ಥವಿಜಯ) ಅದೇ ಪೀಠಕ್ಕೆ ಉತ್ತರಾಧಿಕಾರಿಗಳನ್ನಾಗಿಸಿದರು ಎಂದು ಸಿದ್ಧವಾಗುತ್ತದೆ.

...ಸಶೇಷ...

# ಹೀಗಾಗಲು ಹಾಗಾಗಬೇಕಿತ್ತೇ....

✍ಪಂ.ಪ್ರವೀಣಾಚಾರ್ಯ.ಹುನಗುಂದ

ಕಳೆದ ಕೆಲವು ದಿನಗಳಿಂದ ಕೋವಿಡ್ ನಮ್ಮನ್ನು ಹೊಸ ಮನುಷ್ಯರನ್ನಾಗಿ ಮಾಡಿದೆ. ಬದುಕಿನಲ್ಲಿ ಅನಿವಾರ್ಯತೆಗಿಂತಲೂ ಅಹಂಕಾರ ಮಾಗಿತ್ತು. ನಾನಂದುಕೊಂಡದ್ದು ನಡೆದೇ ಆಗುತ್ತದೆಂಬ ಹುಚ್ಚು ಸ್ವಾಂತತ್ರ್ಯ ಭ್ರಮೆ ಇತ್ತು. ಮಡಿ ಮೈಲಿಗೆಗಳೆಂದರೆ ಅಸಡ್ಡೆ ಇತ್ತು. ಮಲ-ಮೂತ್ರಗಳ ಮುಗಿಸಿ ಬಂದಾಗ ಕೈಕಾಲು ತೊಳೆದುಕೊಳ್ಳುವದು ಗೊಡ್ಡು ಸಂಪ್ರದಾಯವೆಂಬ ಅನಾದರವಿತ್ತು. ಹಿರಿಯರನ್ನು ಕಂಡಾಗ ಕೈ ಜೋಡಿಸಿ ಮುಗಿಯುವದನ್ನು ಬಿಟ್ಟು ಕೈ ಮಿಲಾಯಿಸುವ ಚಪಲ ವಿಪರೀತವಾಗಿತ್ತು. ಒಂದೇ ಎಂಜಲಿನ ಮೇಜಿನಲ್ಲಿ ಎಂಜಲ ಕೈಯಲ್ಲಿ ಎಲ್ಲರನ್ನೂ ಮುಟ್ಟಿ ಊಟ ಮಾಡುವದೇ ಒಗ್ಗಟ್ಟೆಂಬ ಮೋಹವಿತ್ತು. ಮೃತ್ತಿಕಾಶೌಚವನ್ನು ಮಾಡುವ ಹಿರಿಯರನ್ನು ಕಂಡು ಕೆಂಡವಾದವರಿದ್ದಾರೆ. ಸಂಖ್ಯೆಯ ಪರಿಮಿತಿಯಲ್ಲಿ ಕೈ ಕಾಲುಗಳನ್ನು ತೊಳೆಯುವ ಕ್ರಮವನ್ನು ಸಾರುವ ಶಾಸ್ತ್ರವನ್ನು ಕಂಡು ಹುಸಿನಕ್ಕು ಸೊಕ್ಕಿನಿಂದ ತಿರಸ್ಕರಿಸುವ ಕಾಲ ಬಲವಾಗಿತ್ತು.

ಇಂದು ಸರ್ಕಾರ ಆದೇಶಿಸುವ ನಿಯಮಗಳನ್ನು ನಮ್ಮ ಸರ್ವಕಾರನಾದ ಶ್ರೀಕರ ಎಂದೋ ಹೇಳಿಟ್ಟಿದ್ದ. ಆಗ ಬರದ ಶ್ರದ್ಧೆ ಅಥವಾ ಅನಿವಾರ್ಯತೆ ನಮಗೀಗ ಬಂದಿದೆ. ಮಾಂಸಾಹಾರದಿಂದ ಮನಸ್ಸು ಕಂಸನಂತಾಗಿತ್ತು. ಸಸ್ಯಾಹಾರ ಸಾತ್ವಿಕ ಆಹಾರವೆಂಬುದು ಮನದಿಂದ ಹಾರಿಹೋಗಿತ್ತು. ಅನೇಕ ಬ್ರಾಹ್ಮಣರೂ ಮಾಂಸಕ್ಕೆ ಮಾರಿಹೋಗಿದ್ದರು. ದೇಶ ಭಾಷೆಯಲ್ಲಿ ಪ್ರಬಲ ಆಶೆ ಇರಬೇಕೆಂಬುದು ಹಣ ಗಳಿಸುವ ದಾಹದಲ್ಲಿ ಮಾಯವಾಗಿತ್ತು. ವ್ರತನಿಯಮಗಳು ಉಪವಾಸಗಳು ನಮ್ಮ ಆರೋಗ್ಯಕ್ಕೆ ಸೇತುವಾಗಿದೆಂಬುದು ಮರೆತುಹೋಗಿತ್ತು. ಸಭೆಗಳಲ್ಲೆಲ್ಲ ಅಂತರದಿಂದಲೇ ಆಸನದಲ್ಲಿ ಕುಳಿತು ರಾಜರೆಲ್ಲ ನಡೆಸುತ್ತಿದ್ದ ಚರ್ಚೆಗಳು ಇಂದು ಮತ್ತೆ ಮರುಕಳಿಸುತ್ತಿದೆ. ಮನೆಯಿದ್ದೂ, ಮೈಯಲ್ಲಿ ಶಕ್ತಿ ಇದ್ದೂ, ಪದಾರ್ಥಗಳಿದ್ದೂ, ಮಾಡುವ ಮನಸ್ಸಿಲ್ಲದೇ ಬೀದಿಯಲ್ಲಿ ತಿನ್ನುತ್ತಿದ್ದ ನಾಲಿಗೆ ಮನೆಯ ಅಡುಗೆಯ ಸವಿ ಉಣ್ಣುತ್ತಿದೆ. ದುಡಿಯುವ ತುಡಿತದಲ್ಲಿ ದೇವರಿಗೆ ಮುಡಿ ಇಡುವ ಸಂಪ್ರದಾಯಕ್ಕೆ ವಿದಾಯ ಹೇಳಿದ್ದೆವು.

ಈಗ ನಮ್ಮನೆಯ ದೇವರಪೆಟ್ಟಿಗೆಯಲ್ಲಿ ಹಿರಿಯರು ಸಂಗ್ರಹಿಸಿದ ದೇವರನ್ನು ಕಾಣುವ ಮುಟ್ಟುವ ಸೌಭಾಗ್ಯ ಸಿಕ್ಕಿತು. ಮಾತೇ ಇಲ್ಲದೇ ಮನೆ ಮಂದಿಯಿಂದೆಲ್ಲ ದೂರಾಗಿದ್ದೆವು. ಈಗ ಕಾಲ ಕಳೆಯಲು ಬಿಡುವು ಸಿಕ್ಕಿದೆ. ಯಾವುದಕ್ಕೂ ಸಮಯವಿಲ್ಲವೆಂದು ಎಲ್ಲ ಧರ್ಮಕಾರ್ಯಗಳನ್ನು ದೂರ ಮಾಡಿದ್ದ ನಮಗೆ ಸಮಯ ಸರಿಯಾಗಿ ತಿರುಗೇಟು ನೀಡುತ್ತಿದೆ. ಯಾರನ್ನೂ ಮುಟ್ಟದೇ ನೀರಿನಲ್ಲಿ ಶುದ್ಧಮಾಡಿದ ವಸನದಿಂದ ಹಸನಾಗಿ ಹರಿಪೂಜೆಯ ಮಾಡುವವರ ಕಂಡು ನೀರೇ ಕಾಣದ ನೀರಿಗೆಯೂ ಇರದ ಜೀನ್ಸಿನವರೆಲ್ಲ

ಇದೆಂಥಾ ಕೆಟ್ಟ ವ್ಯಸನವೆಂದು ವ್ಯಂಗ್ಯ ಮಾಡುತ್ತಿದ್ದರು. ಈಗೇನಾಯಿತು ಬದುಕು. ಅವರವರ ಬಟ್ಟೆ ಅವರಿಗೇ ಮೀಸಲೆಂಬ ಆಚಾರ ಇಂದು ಎಲ್ಲ ವರ್ಗದವರಿಗೂ ಅನಿವಾರ್ಯವಾಯಿತು. ಭೋಗವೇ ಜೀವನದ ಪ್ರಧಾನಭಾಗವೆಂದು ಬಗೆದವರಿಗೆ ಕರೊನಾ ರೋಗವು ಭೋಗದಿಂದ ಅತಿಯಾಗಿ ಬೀಗಬೇಡೆಂದು ಕೂಗಿಹೇಳಿತು. ಸಂಪತ್ತಿದ್ದರೂ ವಿಪತ್ತಿನಲ್ಲಿದ್ದವರಿಗೆ ಕೈಯೆತ್ತಿ ಕೊಡದೇ ಮಾಲ್ ಗಳಲ್ಲಿ ಶಾಪಿಂಗ್ ಮಾಡುವವರಿಗೆ ದುಂದುವೆಚ್ಚದ ಪರಿಚಯವಾಯಿತು. ಸ್ವಚ್ಛಂದವಾಗಿ ಹಾರಬೇಕಾದ ಪಕ್ಷಿಗಳನ್ನೆಲ್ಲ ತಂದು ಗೂಡಿನಲ್ಲಿ ಕೂಡಿ ಹಾಕಿ ಸಂಭ್ರಮಿಸುತ್ತಿದ್ದ ನಮ್ಮನ್ನು ಬಂಧನದಲ್ಲಿ ಕಂಡು ಹಾರಾಡುವ ಪಕ್ಷಿಗಳೆಲ್ಲ ಗೇಲಿ ಮಾಡಿ ಕಿಲಕಿಲಿಸುತ್ತಿವೆ. ಮನೆಯ ಹಿರಿಯ ಸದಸ್ಯರು ಅಶಕ್ತರಾದರೂ ಗುಡಿ ಗುಂಡಾರಗಳಿಗೆ ಆಗೊಮ್ಮೆ ಈಗೊಮ್ಮೆ ಕರೆದೊಯ್ಯಲು ಕೇಳಿದಾಗ ಕೆರಳಿ ಕೆಂಡವಾಗಿ ಮನೆಯಲ್ಲಿಯೇ ಆರಾಮಾಗಿ ಇರಬಾರದೇ ಎಂದು ಗೊಣಗುತ್ತಿದ್ದವರಿಗೆ ಮನೆಯಲ್ಲಿಯೇ ನಾಲ್ಕು ಗೋಡೆಗಳ ನಡುವೆ ಇರುವದು ಆರಾಮವಲ್ಲ ಎಂದು ಪರಿಚಯವಾಗುತ್ತಲಿದೆ.

ಸಿಟಿಯ ಕಟಿಪಿಟಿಯಲ್ಲಿದ್ದವರೆಲ್ಲ ಹಳ್ಳಿಯ ಬಳ್ಳಿಗೆ ಹೊರಳುತ್ತಿದ್ದಾರೆ. ರೋಗ ರಾಗ ತೆಗೆದಾಗ ಧನದ ವಿಯೋಗವಾದರೂ ಧರ್ಮ ಮಾಡುವ ಯೋಗ ಲಭಿಸಿದೆ. ಕಾಲನಾದ, ಕಾಲನಾಮಕನಾದ, ಕಾಲನಿಯಾಮಕನು ನಮಗೆ ಬದುಕಿನ ಪಾಠವನ್ನು ದಿಟವಾಗಿ ಮಾಡುತ್ತಿದ್ದಾನೆ. ಇದು ಸಕಾಲ. ಇನ್ನಾದರೂ ನಮ್ಮ ಬದುಕು ಮತ್ತೆ ಸಂಸ್ಕೃತಿಯ ಹಳಿಗೆ ಹೊರಳಲಿ. ಅಹಂಕಾರಕ್ಕೆ ಧಿಕ್ಕಾರ ಹೇಳೋಣ. ಕ್ರಿಮಿಯಿಂದ ರಾಜ್ಯವಾಳಿಸಿದವನು ಕ್ರಿಮಿಯಿಂದ ರಾಜ್ಯ ಅಳಿಸಲೂ ಸರ್ವಸಮರ್ಥನೆಂಬುದನ್ನು ಸಾರಿ ಹೇಳಿದ್ದಾನೆ. ನಮಗೆ ಇನ್ನಾದರೂ ಅವನೆಡೆಗೆ ನಡೆ ಬರಲಿ. ನುಡಿ ಬರಲಿ. ಮುಡಿಯು ಅವನಡಿಯನ್ನು ಬಿಡದೇ ಭಜಿಸಿ ಭವರೋಗದ ಬಿಗುವನ್ನು ಬಗೆಹರಿಸಲೆಂದು ಪ್ರಾರ್ಥಿಸೋಣ. ★★


## ಉತ್ತರಾದಿಮಠದಿಂದ ''ಚಿತ್ರರಚನೆ'' ಕಾರ್ಯಾಗಾರ

ಉತ್ತರಾದಿಮಠದಿಂದ ಸಕಲ ಜಿಜ್ಞಾಸುಗಳಿಗೂ ಅನುಕೂಲವಾಗುವಂತೆ ಮನೆಯಲ್ಲಿಯೇ ಇದ್ದು ಅವರವರ ಅಭಿರುಚಿಗೆ ತಕ್ಕಂತೆ ವಿವಿಧ ಕಾರ್ಯಕ್ರಮಗಳನ್ನು ಪರಿಚಯಿಸಿದ್ದೇ ''ಸಂಸ್ಕೃತಿವಾಹಿನೀ. ಈ ವಾಹಿನಿಯಿಂದ ಪ್ರತಿ ಶನಿವಾರ 3:30 ರಿಂದ 5:30ರ ವರೆಗೆ ಭಾರತೀಯ ಸನಾತನ ಸಾಂಸ್ಕೃತಿಕ ಕಥಾವಸ್ತುಗಳ ಚಿತ್ರರಚನೆಯ ಕಾರ್ಯಾಗಾರವನ್ನು ಕಲಾಮಾನ್ಯ ಶ್ರೀಯುತ ಕೆ.ಎಂ ಶೇಷಗಿರಿಯವರು ನಡೆಸುತ್ತಿದ್ದಾರೆ.

ಈಗಾಗಲೇ ವೈಶಾಖಮಾಸದಲ್ಲಿ ಭಗವಂತನ ವಿವಿಧ ರೂಪಗಳ ಚಿತ್ರಣ ಬಹು ಸೊಗಸಾಗಿ ಮೂಡಿಬಂದಿದೆ. ಅದರಲ್ಲಿ ಸುಮಾರು 300ಕ್ಕೂ ಹೆಚ್ಚು ಜನ ಚಿತ್ರಗಳನ್ನು ರಚಿಸಿದ್ದಾರೆ. ಈ ಶಿಬಿರದ ಸ್ಪರ್ಧೆಯಲ್ಲಿ ವಿಜೇತರಿಗೆ ಕುಟುಂಬಸಹಿತ ಶ್ರೀನಿವಾಸದೇವರ ದರ್ಶನದ ವ್ಯವಸ್ಥೆಯನ್ನು ಶ್ರೀಯುತ ಡಿ.ಪಿ.ಅನಂತರವರು ಒದಗಿಸಿದ್ದಾರೆ. 2000 ಕ್ಕೂ ಹೆಚ್ಚು ಸದಸ್ಯರನ್ನು ಹೊಂದಿದ ಈ ಕಾರ್ಯಾಗಾರದಲ್ಲಿ ತಾವು ಕೂಡ ಪಾಲ್ಗೊಳ್ಳಬಹುದು. ಇಂದೇ **subscribe** ಆಗಿ.

**www.uttaradimath.org/samskruti-vahini**

# ವಸಂತಮಾಸದ ಧಾರ್ಮಿಕ ಶಿಕ್ಷಣ ಶಿಬಿರಗಳು

ವಸಂತಕಾಲ ಬಂದರೆ ಗಿಡಮರಗಳು ಚಿಗುರುವ ಕಾಲ. ಗಿಡಮರಗಳು ಮಾತ್ರವಲ್ಲ ಆಧ್ಯಾತ್ಮಿಕವಾಗಿ ಎಲ್ಲ ಮಕ್ಕಳನ್ನು ಚಿಗುರಿಸುವ ಕಾಲವೇ ವಸಂತಕಾಲ. ಪ್ರತಿ ವರ್ಷವು ಶ್ರೀ ಉತ್ತರಾದಿಮಠದ ವಿಶ್ವಮಧ್ವಮಹಾಪರಿಷತ್ತಿನಿಂದ ವಸಂತಕಾಲದಲ್ಲಿ ಧಾರ್ಮಿಕ ಶಿಕ್ಷಣ ಶಿಬಿರವನ್ನು ನಡೆಸುತ್ತಾ ದೇಶಾದ್ಯಂತ ಸಾವಿರಾರು ವಿದ್ಯಾರ್ಥಿ ವಿದ್ಯಾರ್ಥಿನಿಯರು ಇದರಲ್ಲಿ ಭಾಗವಹಿಸಿ ಪಾವನರಾಗುತ್ತಿದ್ದಾರೆ. ಪ್ರತಿವರ್ಷದಂತೆ ಈ ವರ್ಷವೂ ವಸಂತಕಾಲದಲ್ಲಿ ಶಿಬಿರಕ್ಕಾಗಿ ಎಲ್ಲ ವಿದ್ಯಾರ್ಥಿ ವಿದ್ಯಾರ್ಥಿನಿಯರು ತುಂಬು ಉತ್ಸಾಹದಿಂದ ಸಿದ್ಧರಾಗಿದ್ದರು. ಶ್ರೀಮಠದಿಂದ ಎಲ್ಲ ಏರ್ಪಾಡುಗಳು ಸಿದ್ಧವಾಗಿತ್ತು. ಶಿಬಿರ ಪ್ರಾರಂಭವಾಗುವ ಹೊತ್ತಿಗೆ ಮಹಾವಿಘ್ನ ಎದುರಾಯಿತು. ಕಲಿಯುಗದ ಪ್ರಭಾವವೋ, ಪ್ರಕೃತಿಯ ವಿಕೋಪವೋ !! ದೇವರ ಇಚ್ಛೆಯಂತೆ ಕೋವಿಡ್-19 ವಿಷವೈರಾಣು ಜಗತ್ತಿನಲ್ಲಿ ಹರಡಿ ಇಡೀ ವಿಶ್ವವನ್ನೇ ತಲ್ಲಣಗೊಳಿಸಿತು. ಇದರಿಂದಾಗಿ ಮನೆಯಿಂದ ಯಾರೂ ಹೊರಗೆ ಬರುವಂತಿಲ್ಲ. ಮನಸ್ಸಿನಿಂದ ಭಯವೂ ಹೋಗುವಂತಿಲ್ಲ. ಇಂತಹ ವಿಷಮ ಪರಿಸ್ಥಿತಿ ಎದುರಾದಾಗ ನಾವೆಲ್ಲರೂ ಈ ವರ್ಷ ಶಿಬಿರವೇ ಬೇಡ ಎಂದು ಕೈಚೆಲ್ಲಿ ಭಯದಿಂದ ಕುಳಿತಾಗ, ಆಗ ಎಲ್ಲರಿಗೂ ಅಭಯವನ್ನು ಕೊಟ್ಟು, ಎಷ್ಟೇ ಕಷ್ಟ ಬಂದರೂ ಜ್ಞಾನವನ್ನು ಬಿಡಬಾರದು. ಅನೇಕ ತಂತ್ರಜ್ಞಾನವನ್ನು ಬಳಸಿಕೊಂಡು ಶಿಬಿರವನ್ನು ಮಾಡಲೇಬೇಕು ಎಂದು ಆಜ್ಞಾಪಿಸಿ, ಇಂಥಹ ವಸಂತಕಾಲದಲ್ಲಿಯೂ ಎಲ್ಲರ ಮನಸ್ಸಿಗೆ ಸಂತಸವನ್ನು ಕೊಟ್ಟ ಮಹಾಸಂತರೇ ಶ್ರೀ ಶ್ರೀಸತ್ಯಾತ್ಮತೀರ್ಥಶ್ರೀಪಾದಂಗಳವರು.

ಗರ್ಭದಲ್ಲಿ ಇದ್ದ ಪ್ರಹ್ಲಾದರಾಜರಿಗೆ ನಾರದರು ತತ್ವವನ್ನು ಉಪದೇಶಿಸಿದ ಹಾಗೆ ಗೃಹಬಂಧನದಲ್ಲಿ ಇದ್ದ ಪ್ರತಿಯೊಬ್ಬ ಶಿಬಿರಾರ್ಥಿಗಳು ಮನೆಯಲ್ಲಿಯೇ ಕುಳಿತು ಆನ್‌ಲೈನ್ ಮೂಲಕ ಪಾಠ ಕೇಳುವ ಸೌಭಾಗ್ಯವನ್ನು ಕೊಟ್ಟ ಅಭಿನವ ನಾರದರೇ ಶ್ರೀಸತ್ಯಾತ್ಮತೀರ್ಥರು.

ಈ ಶಾರ್ವರೀನಾಮ ಸಂವತ್ಸರದಲ್ಲಿ ದೇವರ ಇಚ್ಛೆಯಂತೆ ಶ್ರೀಪಾದಂಗಳವರ ಆಜ್ಞೆ ಹಾಗೂ ಆಶೀರ್ವಾದದಿಂದ ಹಾಗೂ ಸರ್ಕಾರದ ನಿಯಮಗಳ ಚೌಕಟ್ಟಿನಲ್ಲಿಯೇ ಅನೇಕ ರಾಜ್ಯಗಳಲ್ಲಿ ಅನೇಕ ಭಾಷೆಗಳಲ್ಲಿ ಅನೇಕ ಪಂಡಿತರಿಂದ ಸ್ತೋತ್ರ, ಮಂತ್ರ, ಸಂಧ್ಯಾವಂದನೆ, ದೇವಪೂಜಾಪದ್ಧತಿ, ಬ್ರಹ್ಮಯಜ್ಞ, ಮಹಾಭಾರತ, ಭಾಗವತದ ಉಪಕಥೆಗಳು, ಅದರಂತೆ ಸ್ತ್ರೀಯರಿಗೂ ಸಹ ಸ್ತ್ರೀಧರ್ಮ, ಆಚಾರವಿಚಾರಗಳನ್ನು ಕಲಿಸಲಾಯಿತು. ದಾಸರ ಪದಗಳು, ಹರಿಕಥಾಮೃತಸಾರ ಎಲ್ಲವನ್ನು ಕಲಿತು ಆನಂದ ಅನುಭವಿಸಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಹಾಗೂ ಅವರ ತಂದೆ-ತಾಯಿಗಳು ಧನ್ಯತಾಭಾವನೆಯನ್ನು ದೂರವಾಣಿಯ ಮೂಲಕ ತಿಳಿಸಿದರು. ವಿದ್ಯಾರ್ಥಿಗಳ ಪಾಲಕರ ಉತ್ಸಾಹ ಒತ್ತಾಯದ ಮೇರೆಗೆ ನಾವು ಅಂದುಕೊಂಡ ಸಮಯವನ್ನು ಮತ್ತೆ ವಿಸ್ತಾರ ಮಾಡಿದೆವು. ವಸಂತಕಾಲ ಮುಗಿದರೂ ಶಿಬಿರ ಮುಗಿಯಲಿಲ್ಲ. ಈ ಶಿಬಿರದಿಂದಾಗಿ ಎಲ್ಲರ ಮನಸ್ಸಿನಲ್ಲಿ ಅಡಗಿದ ಭಯ ದೂರವಾಗಿ ಲಾಕ್‌ಡೌನ್‌ನಲ್ಲಿ ಸಮಯ ಕಳೆದದ್ದೇ ಗೊತ್ತಾಗಲಿಲ್ಲ. ಇದರ ಸದುಪಯೋಗವನ್ನು ಎಲ್ಲರೂ ಪಡೆದರು. ಶ್ರೀಗಳವರ ಅನುಗ್ರಹಕ್ಕೆ ಪಾತ್ರರಾದರು.

## ಶಿಬಿರಗಳ ವಿಹಂಗಮ ನೋಟ

ತಮಿಳುನಾಡು
(ಕನ್ನಡ, ತಮಿಳು ಮತ್ತು ತಂಜಾವೂರು ಮರಾಠಿ)

| | ಊರು | ಪ್ರಾರಂಭ | ಮುಕ್ತಾಯ |
|---|---|---|---|
| 1 | ಚೆನ್ನೈ | 25-4-20 | 25-5-20 |
| 2 | ಕೊ.ಮುತ್ತೂರು ಸೇಲಂ, | 10-5-20 | 17-5-20 |

ಮಹಾರಾಷ್ಟ್ರ (ಮರಾಠಿ ಭಾಷೆಯಲ್ಲಿ)
ಸಾಂಗಲಿ, ಮಿರಜ, ಕರಾಡಾ, ಪುಣೆ, ಮುಂಬಯಿ, ಬೀಡ, ಪರಭಣಿ, ನೀಲಂಗಾ, ನಾಂದೇಡ್, ಗಂಗಾಖೇಡ್, ಇನ್ನು ಅನೇಕ ಹಳ್ಳಿಗಳು.

| | | |
|---|---|---|
| ಪುರುಷರಿಗೆ | 26-4-20 | 04-5-20 |
| ಮಹಿಳೆಯರಿಗೆ | 09-5-20 | 16-5-20 |

ಕರ್ನಾಟಕ (ಕನ್ನಡದಲ್ಲಿ)

| | ಊರು | ಪ್ರಾರಂಭ | ಮುಕ್ತಾಯ |
|---|---|---|---|
| 1 | ಬೆಂಗಳೂರು | 10-5-20 | 24-5-20 |
| 2 | ಮೈಸೂರು | 20-4-20 | 26-4-20 |
| 3 | ತುಮಕೂರು | 25-4-20 | 29-4-20 |
| 4 | ಚಿತ್ರದುರ್ಗ | 14-4-20 | 20-4-20 |
| 5 | ಹಾವೇರಿ | 25-4-20 | 30-4-20 |
| 6 | ಧಾರವಾಡ | 20-4-20 | 24-4-20 |
| 7 | ಹುಬ್ಬಳ್ಳಿ | 24-4-20 | 05-5-20 |
| 8 | ಬೆಳಗಾವಿ | 03-5-20 | 03-6-20 |
| 9 | ಕೊಪ್ಪಳ | 24-4-20 | 24-5-20 |
| 10 | ಹೊಸಪೇಟೆ | 13-4-20 | 11-5-20 |
| 11 | ಬಾಗಲಕೋಟೆ | 25-4-20 | 30-4-20 |
| 12 | ಕಲಬುರ್ಗಿ | 28-4-20 | 03-5-20 |
| 13 | ವಿಜಯಪುರ | 10-5-20 | 24-5-20 |
| 14 | ರಾಯಚೂರ | 25-4-20 | 29-4-20 |
| 15 | ಮುಧೋಳ | 26-4-20 | 02-5-20 |
| 16 | ಅಥಣಿ | 20-4-20 | 30-4-20 |
| 17 | ರಾಣೆಬೆನ್ನೂರ | 21-4-20 | 25-4-20 |
| 18 | ಯಾದಗಿರಿ | 25-4-20 | 29-4-20 |
| 19 | ಬಳ್ಳಾರಿ | 24-4-20 | 25-4-20 |
| 20 | ಹೊಳೆಹೊನ್ನೂರು | 20-4-20 | 05-5-20 |
| 21 | ಶಿವಮೊಗ್ಗ | 20-4-20 | 05-5-20 |
| 22 | ಹರಿಹರ | 20-4-20 | 05-5-20 |

ಗೋವಾ (ಕನ್ನಡದಲ್ಲಿ)

| | | |
|---|---|---|
| ಸಮಗ್ರ ಗೋವಾ | 30-4-20 | 24-5-20 |

ಬಿಹಾರ (ಹಿಂದಿಯಲ್ಲಿ)

| | | |
|---|---|---|
| ಗಯಾ ವಿಷ್ಣುಪಾದ | 15-5-20 | 9-5-20 |

ಆಂಧ್ರಪ್ರದೇಶ (ತೆಲಗುಭಾಷೆ)

| | | |
|---|---|---|
| ರಾಜಮಹೇಂದ್ರಿ, ವಿಜಯವಾಡ, ಕಾಕಿನಾಡ, ಗುಂಟೂರು | 8-5-2020 | 14-5-20 |

ಮಚಲಿಪಟ್ಟಣ ಸುತ್ತಮುತ್ತ ಹಳ್ಳಿಗಳು

ತೆಲಂಗಾಣ (ತೆಲಗುಭಾಷೆ)

| | | |
|---|---|---|
| ಹೈದ್ರಾಬಾದ | 16-4-20 | 7-4-20 |
| ಮೆಹಬೂಬನಗರ | 20-4-20 | 7-4-20 |
| ಸೊನ್ನಿ / ನಿಜಾಮಾಬಾದ, ಭೀಮಗಲ್ಲ ಅನೇಕ ಹಳ್ಳಿಗಳು | 30-5-20 | 27-5-20 |

ಇದೇ ರೀತಿಯಾಗಿ ಇನ್ನೂ ಅನೇಕ ಊರುಗಳಲ್ಲಿ ಅಂತರ್ಜಾಲದ ಮೂಲಕ ಧಾರ್ಮಿಕ ಶಿಕ್ಷಣ ಶಿಬಿರಗಳು ಜರುಗಿದವು. ಸ್ಥಳೀಯ ವಿದ್ವಾಂಸರ ಹಾಗೂ ಶ್ರೀಗಳವರ ಆಜ್ಞಾಧಾರಕರ ಸುವ್ಯವಸ್ಥೆಯಿಂದ ಶಿಬಿರಗಳು ಬಹಳ ಚೆನ್ನಾಗಿ ಮೂಡಿಬಂದವು. ಪಾಲ್ಗೊಂಡ ಎಲ್ಲ ಶಿಬಿರಾರ್ಥಿಗಳಿಗೂ ಶ್ರೀಗಳವರು ಇತೋಪ್ಯತಿಶಯ ಜ್ಞಾನಭಕ್ತಿಗಳು ದೊರಕಲಿ ಎಂದು ಆಶೀರ್ವದಿಸಿದ್ದಾರೆ.

**–ಸಂಯೋಜಕರು ಪಂ. ಆನಂದಾಚಾರ್ಯ ಮಹಿಷಿ**

## ... ವಧು ಬೇಕಾಗಿದೆ ...

1. ಗೋತ್ರ : ಅತ್ರಿ ನಕ್ಷತ್ರ : ಉ.ಭಾದ್ರ3 ವಯಸ್ಸು : 29 ಎತ್ತರ : 5.10 ಪದವಿ : ಎಂ.ಟೆಕ್ (ಸಿ.ಎಸ್) ನೌಕರಿ : ಸಾಪ್ಟ್‌ವೇರ್ ಇಂ. ಅಪೇಕ್ಷೆ : ವಿದ್ಯಾವಂತ ಸುಶಿಕ್ಷಿತ ಮಾಧ್ವವಧು ಬೇಕಾಗಿದೆ. ಸಂಪರ್ಕ: ಬಂಡುರಾವ್ ಕುಲಕರ್ಣಿ ದೂ: 9972088211 / 8277016167

2. ಗೋತ್ರ : ಹರಿತಸ ನಕ್ಷತ್ರ : ಪುಬ್ಬಾ 1 (ಸಿಂಹ) ವಯಸ್ಸು : 30 ಎತ್ತರ : 5.10 ಪದವಿ : ಬಿ.ಇ ಎಲೆಕ್ಟ್ರಿಕಲ್ ಎಂ.ಎಸ್ ನೌಕರಿ : ಯು.ಎಸ್.ಎ ಮೈಕ್ರೋಚಿಪ್‌ದಲ್ಲಿ ಹಾರ್ಡವೇರ್ ಎನಲಾಗ್ ಡಿಸೈನ್ ಇಂ.ಅಪೇಕ್ಷೆ : ಯು.ಎಸ್.ಎ ದಲ್ಲಿ ಇರುವ ವಿದ್ಯಾವಂತ ಸುಶಿಕ್ಷಿತ ವಧು ಬೇಕಾಗಿದೆ. ಸಂಪರ್ಕ: ಕೆ. ರಘುನಾಥರಾವ್ ದೂ: 9108482223 / 9845046314

3. ಗೋತ್ರ : ಕಾಶ್ಯಪ ನಕ್ಷತ್ರ : ಶತಬಿಷಾ 1 ವಯಸ್ಸು : 29 ಎತ್ತರ : 5.9 ಪದವಿ : BE (MECH), MBA (MARKETING & OPERATIONS) ನೌಕರಿ : ENGINEER - (FESTO INDIA PVT.LTD) ಅಪೇಕ್ಷೆ : ವಿದ್ಯಾವಂತ ಸುಶಿಕ್ಷಿತ ವಧು ಬೇಕಾಗಿದೆ. ಸಂಪರ್ಕ: ಎಚ್ ಎನ್ ಮಂಗಳವೇಡಿ ದೂ: 8446223176

4. ಗೋತ್ರ : ಭಾರದ್ವಾಜ ನಕ್ಷತ್ರ : ಉತ್ತರಭಾದ್ರ .ಮೀನರಾಶಿ ವಯಸ್ಸು : 3-11-1987, 32 ವರ್ಷ ಎತ್ತರ : 5.6 ಪದವಿ : ಬಿ.ಇ. ಎಂ.ಟೆಕ್ ನೌಕರಿ : ಅಸಿಸ್ಟೆಂಟ್ ಪ್ರೋಫೆಸರ್ ಇನ್ ಎಂ.ಎಸ್.ರಾಮಯ್ಯ ಕಾಲೇಜ್ ಅಪೇಕ್ಷೆ : ಬಿ.ಇ.ಅಥವಾ ಎಂ.ಎಸ್.ಸಿ. ಎನಿ ಗ್ರ್ಯಾಜುಯೇಟ್ ಸಂಪರ್ಕ: ಶ್ರೀನಿವಾಸ ಮೂರ್ತಿ ದೂ: 28567655 / 9902163134

5. ಗೋತ್ರ : ಕೌಂಡಿಣ್ಯ ನಕ್ಷತ್ರ : ಪೂರ್ವಾಷಾಡ ವಯಸ್ಸು : 30 ಎತ್ತರ : 5.10 ಪದವಿ : ಬಿ.ಸಿ.ಎ. ಸಾಪ್ಟ್‌ವೇರ್ ಡೆಪಲಪ್‌ಮೆಂಟ್ ಇಂಜಿನಿಯರ್ ನೌಕರಿ : ನೈನ್ ಲೀಪ್ಸ್ ಸಾಪ್ಟ್‌ವೇರ್ ಡೆವಲಪ್‌ಮೆಂಟ್ ಇಂಜಿನಿಯರ್ ಅಪೇಕ್ಷೆ : ಸೂಕ್ತವಧು ಸಂಪರ್ಕ: ಬದರಿನಾಥ್ ದೂ: 9902821380 / 8310904107

6. ಗೋತ್ರ : ಭಾರದ್ವಾಜ ನಕ್ಷತ್ರ : ಶ್ರವಣ -2 ವಯಸ್ಸು : 29 ಎತ್ತರ : 5.7 ಪದವಿ : ಬಿ.ಕಾಂ., ಎಂ.ಬಿ.ಎ. ನೌಕರಿ : ಎಂ.ಎನ್.ಸಿ ಕಂಪನಿ. ಬೆಂಗಳೂರು ಅಪೇಕ್ಷೆ : ಉತ್ತರ ಕರ್ನಾಟಕ ಮೂಲದ ಸುಸಂಸ್ಕೃತ ವಧು (ಮಾಧ್ವ,ಸ್ಮಾರ್ತ) ಸಂಪರ್ಕ: ಜಯಶ್ರೀ ನಾಡಿಗೇರ ದೂ: 9483191256 / 9353225688

7. ಗೋತ್ರ : ಅತ್ರಿ ನಕ್ಷತ್ರ : ಮೃಗಶಿರ ವಯಸ್ಸು : 29 ಎತ್ತರ : 5 ಪದವಿ : ಎಸ್.ಎಸ್ ಎಲ್.ಸಿ / ಜಾಬ್‌ಸಿ ನೌಕರಿ : ಟಾಟಾ ಗ್ರೂಪ್ ಕಂಪನಿ ಅಪೇಕ್ಷೆ : ಉ.ಕ. ಮೂಲದ ಸುಸಂಸ್ಕೃತ ವಧು ಬ್ರಾಹ್ಮಣ ಯಾವುದೇ ಪಂಗಡ (ಎಸ್ಸೆಸಲ್ಸಿ /ಪಿಯುಸಿ) ಸಂಪರ್ಕ: ವೇಂಕಟೇಶ ಜಾಲಿಹಾಳ ದೂ: 9483191256 / 9741723703

8. ಗೋತ್ರ : ಗೌತಮ ನಕ್ಷತ್ರ : ಮಘಾ -1 ವಯಸ್ಸು : 37 ಎತ್ತರ : 5.7 ಪದವಿ : ಬಿ.ಕಾಂ. ಎಂ.ಬಿ.ಎ ನೌಕರಿ : ಓರಾಕಲ್ ಕಂ. ಬೆಂಗಳೂರು ಅಪೇಕ್ಷೆ : ಪದವಿಧರೆಯಾದ ಸೂಕ್ತ ವಧು ಬೇಕಾಗಿದೆ ಸಂಪರ್ಕ: ಅನಂತರಾವ್ ದೂ: 9964976703

9. ಗೋತ್ರ : ಮೌದ್ಗಲ್ಯ ನಕ್ಷತ್ರ : ಭರಣಿ -3 ವಯಸ್ಸು : 32 ಎತ್ತರ : 5.10 ಪದವಿ : ಬಿ.ಇ. ಮೆಕಾನಿಕಲ್ ನೌಕರಿ : ಎಲ್ ಅಂಡ್ ಟಿ. ಅಪೇಕ್ಷೆ : ಮಾಧ್ವರು, ಎನಿ ಗ್ರಾಜುಯೇಟ್ ಸಂಪರ್ಕ: ಆನಂದರಾವ್ ದೂ: 6363566089 / 9880309279

10. ಗೋತ್ರ : ಶ್ರೀವತ್ಸ ನಕ್ಷತ್ರ : ವಿಶಾಖ ವಯಸ್ಸು : 27 ಎತ್ತರ : 5.6 ಪದವಿ : ಬಿ.ಇ. ನೌಕರಿ : ಐ.ಬಿ.ಎಂ. ಅಪೇಕ್ಷೆ : ಉನ್ನತ ಪದವಿ ಹೊಂದಿದ್ದು, ಕೆಲಸದಲ್ಲಿರುವ ಉ.ಕ.ಆದ್ಯತೆ ಸಂಪರ್ಕ: ವನಿತಾ ಕುಲಕರ್ಣಿ ದೂ: 9986674966

11. ಗೋತ್ರ : ಅತ್ರಿ ನಕ್ಷತ್ರ : ಉತ್ತರಾಭಾದ್ರಪದ ವಯಸ್ಸು : 29 ಎತ್ತರ : 5.7 ಪದವಿ : ಬಿ.ಟೆಕ್ ನೌಕರಿ : ಸಾಫ್ಟ್‌ವೇರ್ ಇಂಜಿನಿಯರ್ ಅಪೇಕ್ಷೆ : ನೌಕರಿ ಮಾಡುತ್ತಿರುವ ಸೂಕ್ತ ವಧು ಬೇಕಾಗಿದೆ ಸಂಪರ್ಕ: ಜಗನ್ನಾಥ ಪ್ರಸಾದ ದೂ: 8147312112/9739724973

12. ಗೋತ್ರ : ಕೌಶಿಕ ನಕ್ಷತ್ರ : ಭರಣಿ -4 ವಯಸ್ಸು : 32 ಎತ್ತರ : 5.10 ಪದವಿ : ಡಿಪ್ಲೋಮ. ಬಿ.ಟೆಕ್ ನೌಕರಿ : ನೆಟ್‌ವರ್ಕ ಇಂಜಿನಿಯರ್ ಅಪೇಕ್ಷೆ : ಒಳ್ಳೆಯ ಕುಟುಂಬ ಮತ್ತು ಯಾವದೇ ಪದವೀಧರೆ ಸಂಪರ್ಕ: ಪವನ್ ಕುಮಾರ್ ದೂ: 9449131896

13. ಗೋತ್ರ : ವಿಶ್ವಾಮಿತ್ರ ನಕ್ಷತ್ರ : ಉತ್ತರಾಷಾಢ -4 ವಯಸ್ಸು : 27 ಎತ್ತರ : 6.0 ಪದವಿ : ಬಿ.ಇ. ಎಂ.ಟೆಕ್ ನೌಕರಿ : ಬಾಷ್ ಕಂ. ಸೀನಿಯರ್ ಇಂಜಿನಿಯರ್ ಅಪೇಕ್ಷೆ : ಸುಸಂಸ್ಕೃತ ಮನೆತನದ ಮಾಧ್ವ ವಧು ಸಂಪರ್ಕ: ಕಿನ್ನಾಳ್ ದೂ: 9980199194/9980340194

14. ಗೋತ್ರ : ಆತ್ರೇಯಸ ನಕ್ಷತ್ರ : ಆರಿದ್ರಾ ವಯಸ್ಸು : 27 ಎತ್ತರ : 5.3 ಪದವಿ : ಡಿಪ್ಲೋಮ ಇನ್ ಮೆಕಾನಿಕ್. ನೌಕರಿ : ಇಸ್ರೋನಲ್ಲಿ ವಿಜ್ಞಾನಿ ಆಗಿದಾರೆ ಅಪೇಕ್ಷೆ : ಕೆಲಸದಲ್ಲಿರುವ/ ಇಲ್ಲದೇ ಇರುವ ಸುಸಂಕೃತ ಮನೆತನದ ವಧು ಬೇಕಾಗಿದೆ ಸಂಪರ್ಕ: ನಾರಾಯಣರಾವ್. ಎಸ್. ಹಿತ್ತಾಳೆ ದೂ: 8762658832/8088622817

15. ಗೋತ್ರ : ಮೌನಭಾರ್ಗವ ನಕ್ಷತ್ರ : ಧನಿಷ್ಠಾ -2 ವಯಸ್ಸು : 30 ಎತ್ತರ : 6.0 ಪದವಿ : ವೇದಪಂಡಿತ. ಘನಾಂತ ನೌಕರಿ : ತಿರುಮಲ-ತಿರುಪತಿ ಸ್ಕೀಮ್ ಪಾರಾಯಣ ಅಧ್ಯಾಪಕ ಅಪೇಕ್ಷೆ : ಮಾಧ್ವ ವಧು, ಧರ್ಮಾಚರಣೆಯಲ್ಲಿ ಆಸಕ್ತಿ ಇದ್ದರೆ ಅನುಕೂಲ ಸಂಪರ್ಕ: ಬಲಭೀಮಾಚಾರ್ಯ ಜೋಷಿ ದೂ: 9483600159/9900852942

16. ಗೋತ್ರ : ವಿಶ್ವಾಮಿತ್ರ ನಕ್ಷತ್ರ : ಚಿತ್ರಾ -2 ಕನ್ಯಾ ರಾಶಿ ವಯಸ್ಸು : 29 (8-10-91) ವರ್ಷ ಎತ್ತರ : 5.9 ಪದವಿ : ಎಂ.ಕಾಮ್ ನೌಕರಿ : ಇಂಟರ್‌ನಲ್ ಆಡಿಟರ್ ವೆಲ್ಸ್ ಫಾರ್ಗೋ ಅಪೇಕ್ಷೆ : ಯಾವುದಾದರೂ ಪದವಿ ಹಾಗೂ ಬೆಂಗಳೂರಿನಲ್ಲಿ ಉದ್ಯೋಗ. ಸಂಪರ್ಕ: ಯತಿರಾಜ್ ದೂ: 9845199053

17. ಗೋತ್ರ : ಕಾಶ್ಯಪ ನಕ್ಷತ್ರ : ಪುಬ್ಬಾ 4 ವಯಸ್ಸು : 29 ವರ್ಷ ಎತ್ತರ : 5.11 ಪದವಿ : ಎಂ.ಎಫ್.ಎ ನೌಕರಿ : ಮಲ್ಟಿನ್ಯಾಷನಲ್ ಕಂ. ಬೆಂಗಳೂರು ಅಪೇಕ್ಷೆ : ಯಾವುದಾದರೂ ಪದವಿವುಳ್ಳ ಸೂಕ್ತ ವಧು ಬೇಕಾಗಿದೆ. ಸಂಪರ್ಕ: ಶ್ರೀಕೃಷ್ಣ ಬುರ್ಲಿ ದೂ: 9480334314/ 9845923171

**... ವರ ಬೇಕಾಗಿದೆ ...**

18. ಗೋತ್ರ : ಆತ್ರೇಯ ನಕ್ಷತ್ರ : ಸ್ವಾತಿ -3 ವಯಸ್ಸು : 24(9-3-96) ಎತ್ತರ : 5.2 ಪದವಿ : ಬಿ.ಕಾಂ. ನೌಕರಿ : ಖಾಸಗಿ ಶಾಲೆ. ಟೀಚರ್ ಕೆಲಸ ಅಪೇಕ್ಷೆ : ಮಾಸ್ಟರ್ ಡಿಗ್ರಿ ಮಾಧ್ವರು ಒಳ್ಳೆಯ ಕೆಲಸ ಸಂಪರ್ಕ: ರಮಾಕಾಂತರಾವ್ ದೂ: 9591280945/ 9071689806

# ಈ ತಿಂಗಳು ಶ್ರೀಸುಧಾಕ್ಕೆ ಪೋಷಕರಾದವರು (2000 ರೂ)

| | |
|---|---|
| 1. ಕೆ.ಆರ್. ಆನಂದ ಬೆಂಗಳೂರು | 34. ಸಚಿನ ಜೋರಾಪುರ ಬೆಂಗಳೂರು |
| 2. ಸರ್ವೋತ್ತಮ ವ್ಹಿ ಗಲಗಲಿ ಜಮಖಂಡಿ | 35. ಪವನ ಹಲಪೇಟಿ ಬೆಂಗಳೂರು |
| 3. ಎ.ಎಸ್. ಯಜುರ್ವೇದಿ ವಡೋದರಾ | 36. ಮೀರಾ ಗುರುರಾಜ ಬೆಂಗಳೂರು |
| 4. ವಿ ಜಿ ದೇಶಪಾಂಡೆ ಹೈದ್ರಾಬಾದ್ | 37. ಬಿ. ಪ್ರಶಾಂತ ಬೆಂಗಳೂರು |
| 5. ವೆಂಕಟೇಶ ಡಿ.ಪಿ ಬೆಂಗಳೂರು | 38. ಗುರುರಾಜ ವಾ. ದೇಶಪಾಂಡೆ ಜಮಖಂಡಿ |
| 6. ಸುದರ್ಶನ ಓಂಕಾರ ಬೆಂಗಳೂರು | 39. ಗೋಪಿನಾಥ ಆರ್ ಅಗ್ನಿಹೋತ್ರಿ ಬೆಂಗಳೂರು |
| 7. ಮಧುಸೂದನ ಎಚ್.ಎನ್.ಹೋ.ಹೋನ್ನೂರ | 40. ವಾದಿರಾಜ ವರಾಹಮೂರ್ತಿ ಬೆಂಗಳೂರು |
| 8. ಅರವಿಂದ ಪಿ ಮೈಸೂರು | 41. ಶ್ರೀಕಾಂತ ಕುಲಕರ್ಣಿ ಧಾರವಾಡ |
| 9. ಎಸ್.ಆರ್. ಸತ್ಯನಾರಾಯಣ ಅತ್ತಿಬೆಲೆ | 42. ಶಾರದಾ ಬೆಂಗಳೂರು |
| 10. ಸುಧೀಂದ್ರಾಚಾರಿ ಎನ್ ಬೆಂಗಳೂರು | 43. ಚಂದು ಕುಲಕರ್ಣಿ ಹುಬ್ಬಳ್ಳಿ |
| 11. ಎಂ ಅನಂತ ಕುಮಾರ ಹೈದ್ರಾಬಾದ್ | 44. ಆನಂದತೀರ್ಥ ಬಿ ಜೋಶಿ ಬೆಂಗಳೂರು |
| 12. ಜಿ.ಎಂ. ಶೇಷಗಿರಿ ಬೆಂಗಳೂರು | 45. ಎಸ್.ವೈ. ಸುಧಾಕರಭಟ್ ಮಂಗಳೂರು |
| 13. ರೂಪಾ ಎನ್ ಬೆಂಗಳೂರು | 46. ಮೀರಾ ಎನ್ ಮೈಸೂರು |
| 14. ವಿಠಲ್ ಬಿ ಜೋಶಿ ಬ.ಬಾಗೇವಾಡಿ | 47. ರವಿ ಜಿ ಜೋಶಿ ಹುಬ್ಬಳ್ಳಿ |
| 15. ಕೆ.ಬಿ. ಮುರಳಿ ಬೆಂಗಳೂರು | 48. ಸಂಜೀವ ಗಲಗಲಿ ಹುಬ್ಬಳ್ಳಿ |
| 16. ಸುಧೀಂದ್ರ ಕೆ ಪೂಜಾರ ಬೆಂಗಳೂರು | 49. ಉದಯಕುಮಾರ ಕೃ. ಕುಲಕರ್ಣಿ ಹಾವೇರಿ |
| 17. ಶ್ರೀಪತಿ ಕೆ ರಾವ್ ಬೆಂಗಳೂರು | 50. ಜಿ.ಜಿ. ಕುಬೇರ ಬೆಂಗಳೂರು |
| 18. ಕೆ.ವಿ. ಪ್ರಸಾದ ಅನಂತಪುರ | 51. ವಾದಿರಾಜ ಎನ್ ಪುರಾಣಿಕ ಧಾರವಾಡ |
| 19. ಆನಂದ ಜಿ ನರೇಗಲ್ ಗದಗ | 52. ರಂಗಾಚಾರ್ಯ ಅಗ್ನಿಹೋತ್ರಿ ಧಾರವಾಡ |
| 20. ಗುರುರಾಜ ಸವದತ್ತಿ ಬೀದರ | 53. ಕೀರ್ತಿಕುಮಾರ ನಾ. ಯಲಮೇಲಿ ಬೆಂ. |
| 21. ರಾಘವೇಂದ್ರ ಬಿ.ಎಚ್ ಬೆಂಗಳೂರು | 54. ರೂಪಲಕ್ಷ್ಮಿ ಬೆಂಗಳೂರು |
| 22. ಕಿರಣಕುಮಾರ ಎನ್ ಬೆಂಗಳೂರು | 55. ವೆಂಕಟೇಶಪ್ರಸನ್ನ ಮುಂಬೈ |
| 23. ಕೃಷ್ಣಾಜಿ ಕುಲಕರ್ಣಿ ಬೆಂಗಳೂರು | 56. ಅನಿಲ ಸಬ್ನಿಸ ಬೆಂಗಳೂರು |
| 24. ಬಿ.ಎನ್.ಕುಲಕರ್ಣಿ ಬೆಂಗಳೂರು | 57. ಸುರೇಶರಾವ್ ಬೆಂಗಳೂರು |
| 25. ವಿಠ್ಠಲ ಎ.ಬಲ್ಲದವಾಡ ಬೆಂಗಳೂರು | 58. ಪರಿಮಳ ಬೆಂಗಳೂರು |
| 26. ಶ್ರೀಪಾದ ಕೆ. ಬೆಂಗಳೂರು | 59. ಶ್ರೀಧರ ಪರಿಮಳಾಚಾರ್ಯ ಎಚ್ ಬಳ್ಳಾರಿ |
| 27. ಕೆ.ಬಿ. ಸುಬ್ಬರಾವ್ ಮೈಸೂರು | 60. ಎಸ್ ಅನಂತಪದ್ಮನಾಭ ಬೆಂಗಳೂರು |
| 28. ಎಸ್.ಧೀರೇಂದ್ರಾಚಾರ್ ಟಿ.ಬಿ.ಡ್ಯಾಂ | 61. ರವೀಂದ್ರ ಧೂಳಿಖೇಡ ಪುಣೆ |
| 29. ರವೀಂದ್ರ ಚೆಂಜಿ ಹೈದ್ರಾಬಾದ್ | 62. ಕೆ.ಮುರಿಳಿಧರ ಬೆಂಗಳೂರು |
| 30. ಡಾ. ಜೆ ಎಸ್ ಮುರಳೀಧರ ಬೆಂಗಳೂರು | 63. ಪದ್ಮನಾಭ ನಿಜಗಲ್ ಆರ್ ಬೆಂಗಳೂರು |
| 31. ಗುರುರಾಜ ಪಾರ್ವತಿ ಬೆಂಗಳೂರು | 64. ಆರ್ ಮಾಧವರಾವ್ ಬೆಂಗಳೂರು |
| 32. ಸಮೀರ ಕೆ.ವಿ. ಬೆಂಗಳೂರು | 65. ವಾದಿರಾಜ ಟಿ.ಎನ್. ಬೆಂಗಳೂರು |
| 33. ಸುನಿಲ ಬಿ.ರಾವ್ ಬೆಂಗಳೂರು | 66. ವಿನೋದಕುಮಾರ ವಿ ಬೆಂಗಳೂರು |

ಇವರೆಲ್ಲರೂ ಶ್ರೀಸುಧಾಪತ್ರಿಕೆಯ ಮೇಲಿನ ಅಭಿಮಾನದಿಂದ ಪೋಷಕರಾಗಿರುವರು. ಹರಿ-ವಾಯು-ಗುರುಗಳು ಇವರಿಗೂ ಇವರ ಕುಟುಂಬಕ್ಕೂ ವಿಶೇಷವಾಗಿ ಜ್ಞಾನ-ಭಕ್ತಿ-ಆಯು-ಆರೋಗ್ಯಾದಿಗಳನ್ನು ಕರುಣಿಸಲೆಂದು ಪ್ರಾರ್ಥಿಸುವೆವು. **–ಸಂ.**

**!!! ಬನ್ನಿ ನೀವೂ ಶ್ರೀಸುಧಾ ಪತ್ರಿಕೆಯನ್ನು ಪೋಷಿಸಿ, ಬೆಳೆಸಿ, ಆನಂದಿಸೋಣ...**




ದೇಶಾದ್ಯಂತ ವಿಧಿಸಲಾದ ಪ್ರತಿಬಂಧಾಜ್ಞೆಯ ಸಂದರ್ಭದಲ್ಲಿ ಸಂಕಷ್ಟಕ್ಕೆ ಸಿಲುಕಿದವರಿಗೆ
ಶ್ರೀಮಠ ಹಾಗೂ ವಿಶ್ವಮಧ್ವಮಹಾಪರಿಷತ್ತಿನ ವಿವಿಧ ಶಾಖೆಗಳಿಂದ ಸಹಾಯ ಹಸ್ತ.

RNI:KARKAN/2012/46136 "REGISTERED":RNP/KA/BGS/2181/2018-2020
Licenced to post without prepayment Licence No.WPP-281
Office of Posting Bangalore PSO BG - 560 026
No.of Pages : 56+4, Published & Date of Posting 7th of every Month.




Smt / Shri

**3 years : 200/-**
**10 years : 600/-**
**20 years : 1000/-**
**Promoters**
**2000/- & above**

**: From :**
**Publisher, Srisudha Monthly Magazine**
Shri Jayateertha Vidyapeetha, Uttaradi Math,
Basavanagudi, **BANGALORE - 560 004**
Phone: 080 - 22429132, +91 8762629132
sudhamagazineum@gmail.com
http://srijspn.org/srisudha.html

If undelivered, return to sender

ಬಿಡಿ ಪ್ರತಿ: ರೂ.10.

Scan to pay

SRISUDHA : Printed & Published by Sri S. B. Venkat Rao on behalf of Jayasathyapramoda Nidhi Trust, Jayathirtha Vidyapeetha, Uttaradi Math, Basavanagudi, Bangalore-560 004. The said periodical is printed at **Vagartha** No. 149, 8th Cross,N.R.Colony, Bangalore.
This Monthly is Edited by **Pt. Vidyadheeshacharya Guttal.**